ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 20 ಮಂಗಳವಾರ 2024

ಸಂಪುಟ: 44 | ಸಂಚಿಕೆ: 303 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಿಗೆ ಮೆಟ್ರೋ ರೈಲು ತರಲು ನಾನು ಬದ್ಧ

–ಸಂಸದ ಪ್ರತಾಪ್‌ಸಿಂಹ ಅಚಲ ವಿಶ್ವಾಸ

- ರಾಜಕೀಯ ಕಾರಣಕ್ಕಾಗಿ ಕಾಂಗ್ರೆಸ್‌ನವರು 'ಗ್ರೇಟರ್ ಮೈಸೂರು' ಮಹಾನಗರ ಪಾಲಿಕೆ ಯೋಜನೆ ಜಾರಿಗೆ ಅಡ್ಡಿಪಡಿಸುತ್ತಿದ್ದಾರೆ
- ಈಗ ಪ್ರಕ್ರಿಯೆ ಆರಂಭವಾಗಿದೆ
- ಬೆಂಗಳೂರಿನಂತೆ ಮೈಸೂರಿನಲ್ಲಿ ಮೆಟ್ರೋ ರೈಲು ವ್ಯವಸ್ಥೆ ಬಂದೇ ಬರುತ್ತದೆ



ಮೈಸೂರು, ಫೆ. 19 (ಆರ್‌ಕೆ)– ಮೈಸೂರು ನಗರಕ್ಕೆ ಮೆಟ್ರೋ ರೈಲು ಸೇವೆ ತರಲು ನಾನು ಬದ್ಧನಾಗಿದ್ದೇನೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

2023ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ನಮ್ಮ ಮೆಟ್ರೋ ಎರಡು ಹೊಸ ವಿಭಾಗಗಳನ್ನು ವರ್ಚುಯಲ್ ಮೂಲಕ ಉದ್ಘಾಟನೆ ಮಾಡುವ ಸಂದರ್ಭ ಮೈಸೂರಿಗೆ ಮೆಟ್ರೋ ಸೇವೆ ಒದಗಿಸುವ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸುಳಿವು ನೀಡಿದ್ದಾರೆ ಎಂದು ಅವರು ತಿಳಿಸಿದರು.

ಮೈಸೂರು ನಗರದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ವಾಹನಗಳೂ ಹೆಚ್ಚಾಗುತ್ತಿರುವುದರಿಂದ ಸಂಚಾರ ದಟ್ಟಣೆ ನಿಭಾಯಿಸಲು ಇಲ್ಲಿಗೆ ಬೆಂಗಳೂರಿನಂತೆ ಮೆಟ್ರೋ ರೈಲು ವ್ಯವಸ್ಥೆ ಅತ್ಯವಶ್ಯವಾಗಿದೆ. ವೇಗವಾಗಿ ಅಡೆತಡೆ ಇಲ್ಲದೇ ಸಾರಿಗೆ ಸೌಲಭ್ಯ ಒದಗಿಸಬೇಕಾದರೆ ಅದು ಮೆಟ್ರೋದಿಂದ ಮಾತ್ರ ಸಾಧ್ಯ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರು ನೋಡಿ ಈಗಲೇ ಎಚ್ಚೆತ್ತುಕೊಳ್ಳಬೇಕಿದೆ: ಈಗಾಗಲೇ ಮೈಸೂರು ತನ್ನ ವ್ಯಾಪ್ತಿ ಮೀರಿ ಬೆಳೆದಿದೆ. ಇಲ್ಲಿನ ರಸ್ತೆಗಳು ಪ್ರಸ್ತುತ ವಾಹನ ದಟ್ಟಣೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ರಸ್ತೆ ಅಗಲೀಕರಣಕ್ಕೂ ಅವಕಾಶವಿಲ್ಲ. ಒಂದು ವೇಳೆ ಈಗಲೂ ನಾವು ಸುಮ್ಮನೆ ಕುಳಿತರೆ ಮುಂದೆ ಸಂಚಾರ ವ್ಯವಸ್ಥೆ ಕೈಮೀರುವ ಆತಂಕವಿರುವುದರಿಂದ ಬೆಂಗಳೂರಿನಂತೆ ಸಾರಿಗೆ ಸೌಲಭ್ಯ ಅಸ್ತವ್ಯಸ್ತವಾಗುವ ಮೊದಲೇ ಎಚ್ಚೆತ್ತು ಮೈಸೂರಿಗೆ ಮೆಟ್ರೋ ರೈಲು ಸೇವೆಯನ್ನು ಅನುಷ್ಠಾನಗೊಳಿಸುವುದು ಅನಿವಾರ್ಯ ಎಂದು ಸಂಸದರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅದೇ ಉದ್ದೇಶಕ್ಕಾಗಿ ನಾವು ಮೈಸೂರು ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆಯನ್ನಾಗಿ ಮಾಡಬೇಕೆಂಬ ಉದ್ದೇಶದಿಂದ 'ಗ್ರೇಟರ್ ಮೈಸೂರು' ಬಗ್ಗೆ ನಾವು ಚಿಂತಿಸಿದ್ದೇವೆ. ಅದಕ್ಕಾಗಿಯೇ ಕೆಲ ಪಂಚಾಯ್ತಿಗಳನ್ನು ಪಟ್ಟಣ ಪಂಚಾಯ್ತಿಗಳನ್ನಾಗಿ, ಪಟ್ಟಣ ಪಂಚಾಯ್ತಿಗಳನ್ನು ನಗರಸಭೆಗಳನ್ನಾಗಿ ಉನ್ನತೀಕರಣಗೊಳಿಸಲಾಗಿದೆ ಎಂದು ಪ್ರತಾಪ್‌ಸಿಂಹ ತಿಳಿಸಿದರು.

'ಗ್ರೇಟರ್ ಮೈಸೂರ್' ಉದ್ದೇಶ: ಮೈಸೂರು ನಗರದ ಹೊರ ವಲಯದಲ್ಲಿರುವ 50–60 ಗ್ರಾಮಗಳನ್ನು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿ ಬೃಹತ್ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸುವ ಮೂಲಕ ಗ್ರೇಟರ್ ಮೈಸೂರು ದರ್ಜೆಗೇರಿಸಿದರೆ, ನಮ್ಮ ನಗರ ಟಯರ್–2 ಅಥವಾ ಟಯರ್–3 ನಗರವಾಗುತ್ತದೆ. ಜನಸಂಖ್ಯೆಯೂ ಹೆಚ್ಚಿಗೆಯಾಗುವುದರಿಂದ ಮೆಟ್ರೋ ರೈಲು ಯೋಜನೆ ತರಲು ಅನುಕೂಲವಾಗುತ್ತದೆ ಎಂಬುದು ನಮ್ಮ ವಿಶ್ವಾಸ. ಆದರೆ ಗ್ರೇಟರ್ ಮೈಸೂರು ವಿಷಯ ಸೂಚಿಯಂತೆ ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆ ನಿಗದಿಪಡಿಸಿದರೆ, ಸರ್ಕಾರ ಪಾಲಿಕೆ ಕಮಿಷನರ್ ಸೇರಿದಂತೆ ಎಲ್ಲಾ ಅಧಿಕಾರಿಗಳು, ಕೆಲ ಕಾಂಗ್ರೆಸ್ ಕಾರ್ಪೊರೇಟರ್‌ಗಳನ್ನು ಸಭೆ ನೆಪದಲ್ಲಿ ಬೆಂಗಳೂರಿಗೆ ಕರೆಸಿಕೊಂಡು ಅಂದು ಸಭೆ ನಡೆಯಲು ಬಿಡಲಿಲ್ಲ ಎಂದ ಅವರು, ಮೈಸೂರು ಅಭಿವೃದ್ಧಿಯಾಗುವುದು ಕಾಂಗ್ರೆಸ್‌ನವರಿಗೆ ಇಷ್ಟವಿಲ್ಲ ಎಂದು ಆರೋಪಿಸಿದರು. ಸ್ಥಳೀಯ ಪ್ರಾಧಿಕಾರಗಳು ಹಾಗೂ ನಗರ ಯೋಜಕರಿಂದ ಸಮೀಕ್ಷೆ ನಡೆಸಿ ಮೈಸೂರಿನಲ್ಲಿ

● 9ನೇ ಪುಟಕ್ಕೆ



ಸಿಎಂ ಸಿದ್ದರಾಮಯ್ಯಗೆ ಅನಾರೋಗ್ಯ: ವಿಶ್ರಾಂತಿ

ಬೆಂಗಳೂರು: ಬಜೆಟ್ ಕಾರ್ಯ ಹಾಗೂ ನಿರಂತರ ಜಿಲ್ಲಾ ಪ್ರವಾಸದಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅನಾರೋಗ್ಯ ಎದುರಾಗಿದ್ದು, ಈ ಹಿನ್ನೆಲೆಯಲ್ಲಿ ವಿಶ್ರಾಂತಿ ಮೊರೆ ಹೋಗಿದ್ದಾರೆ. ಸಿದ್ದರಾಮಯ್ಯ ಅವರಿಗೆ ಗಂಟಲು ನೋವು ಕಾಣಿಸಿಕೊಂಡ ಹಿನ್ನೆಲೆ ವಿಶ್ರಾಂತಿ ಪಡೆಯಲು ಕಾವೇರಿ ನಿವಾಸಕ್ಕೆ ತೆರಳಿದ್ದಾರೆಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿಗಳು ಕಳೆದ ಕೆಲವು ದಿನಗಳಿಂದ ಬಜೆಟ್ ಸೇರಿದಂತೆ ಬಿಡುವಿಲ್ಲದ ಕೆಲಸದಲ್ಲಿ ತೊಡಗಿಕೊಂಡಿದ್ದರು. ವಿಧಾನಮಂಡಲದಲ್ಲಿ ಅಧಿವೇಶನ ನಡೆಯುತ್ತಿದ್ದು, ಅನಾರೋಗ್ಯದಿಂದಾಗಿ ಸಿಎಂ ಅಧಿವೇಶನದಿಂದ ಹೊರಗುಳಿದಿದ್ದಾರೆ.

ಕಂದಾಯ ಇಲಾಖೆಗೆ ಶೀಘ್ರವೇ 1000 ಗ್ರಾಮ ಲೆಕ್ಕಾಧಿಕಾರಿಗಳ ನೇಮಕ

- ಸಾರ್ವಜನಿಕರಿಗೆ ಶೀಘ್ರವೇ ಸೇವೆ ಕಲ್ಪಿಸಲು ಅಗತ್ಯ ನೇಮಕಾತಿಗೆ ಚಾಲನೆ
- ಕಂದಾಯ ಸಚಿವ ಕೃಷ್ಣ ಭೈರೇಗೌಡ ಘೋಷಣೆ



ಬೆಂಗಳೂರು, ಫೆ.19 (ಕೆಎಂಶಿ)– ಕಂದಾಯ ಇಲಾಖೆ ಕೆಲಸವನ್ನು ಮತ್ತಷ್ಟು ಚುರುಕುಗೊಳಿಸಲು ಹಾಗೂ ಜನರಿಗೆ ಸರಳ ಆಡಳಿತ ನೀಡುವ ಉದ್ದೇಶದಿಂದ ಶೀಘ್ರದಲ್ಲೇ 1000 ಗ್ರಾಮ ಲೆಕ್ಕಾಧಿಕಾರಿಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ತಾಲೂಕುಗಳಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಸೇರಿದಂತೆ ಕಂದಾಯ ಇಲಾಖೆಯ ವಿವಿಧ ಹಂತದ ನೌಕರರನ್ನು ಬೇರೆಡೆ ನಿಯೋಜನೆಗೊಳಿಸಲಾಗುತ್ತಿದೆ. ಉದ್ಯೋಗಿಗಳ ಕೊರತೆಯಿಂದಾಗಿ ಇಲಾಖೆಯಲ್ಲಿ ಜನರಿಗೆ ಸರಿಯಾದ ಸಮಯಕ್ಕೆ ಕೆಲಸವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಿರಣ್‌ಕುಮಾರ್ ಕೊಡ್ಲಿ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಇತರೆ ಇಲಾಖೆಗಳಿಗೆ ಹೋಲಿಸಿದರೆ ಕಂದಾಯ ಇಲಾಖೆಯಲ್ಲಿ ನೌಕರರ ಸಂಖ್ಯೆ ಅಧಿಕವಿದೆ. ಅಲ್ಲದೆ, ಸಾರ್ವಜನಿಕರಿಗೆ ಶೀಘ್ರ ಸೇವೆ ನೀಡುವ ಉದ್ದೇಶದಿಂದ ಶೀಘ್ರದಲ್ಲೇ 1000 ಗ್ರಾಮ ಲೆಕ್ಕಾಧಿಕಾರಿಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು ಎಂದರು.

● 9ನೇ ಪುಟಕ್ಕೆ

ತಿರಸ್ಕೃತಗೊಂಡ ಬಗರ್‌ಹುಕುಂ ಅರ್ಜಿ ಪುನರ್ ಪರಿಶೀಲನೆ

ಸಾಗುವಳಿ ಭೂ ಮಂಜೂರಾತಿಗಾಗಿ ಬಗರ್‌ಹುಕುಂ (ಅಕ್ರಮ–ಸಕ್ರಮ) ಯೋಜನೆ ಅಡಿ ತಿರಸ್ಕೃತಗೊಂಡ ಅರ್ಜಿಗಳನ್ನು ಪುನರ್ ಪರಿಶೀಲಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಗರ್‌ಹುಕುಂ ಕಾನೂನನ್ನು ಜಾರಿಗೆ ತಂದಿರುವುದೇ ಬಡವರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ, ಅರ್ಹ ಫಲಾನುಭವಿಗಳಿಗೆ ಭೂ ಮಂಜೂರು ಮಾಡುವುದು ಸರ್ಕಾರದ ಕರ್ತವ್ಯವೂ ಹೌದು, ತಿರಸ್ಕೃತ ಅಥವಾ ಅನರ್ಹಗೊಂಡ ಬಗರ್‌ಹುಕುಂ ಅರ್ಜಿಗಳಲ್ಲಿ ತಪ್ಪಾಗಿದ್ದರೆ, ನಿಯಮ ಮೀರಿ ಅನರ್ಹಗೊಂಡಿದ್ದರೆ ಮತ್ತೊಮ್ಮೆ ಪುನರ್ ಪರಿಶೀಲನೆಗೆ ಸೂಚಿಸಲಾಗುವುದು ಎಂದು ಭರವಸೆ ನೀಡಿದರು. ಗೋಮಾಳ ಜಮೀನಿನ ಮಂಜೂರಾತಿಗೆ ಸಂಬಂಧಿಸಿದ ಅರ್ಜಿಗಳನ್ನು ಮಾತ್ರ ಅನರ್ಹಗೊಳಿಸಿಲ್ಲ. ಬದಲಾಗಿ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಬರುವ ಭೂಮಿಗೂ ಅರ್ಜಿ ಸಲ್ಲಿಸಲಾಗಿದೆ. ಕಾನೂನಿನ ಪ್ರಕಾರ ಸದರಿ ವ್ಯಾಪ್ತಿಯಲ್ಲಿರುವ

● 9ನೇ ಪುಟಕ್ಕೆ

ವಿಧಾನಸಭೆಯಿಂದ ರಾಜ್ಯಸಭೆಯ 4 ಸ್ಥಾನಕ್ಕೆ ಚುನಾವಣೆ: ನಾಮಪತ್ರ ಸಲ್ಲಿಕೆಗೆ ಇಂದು ಕಡೇ ದಿನ

- ಕಣದಲ್ಲಿ ಐದನೇ ಅಭ್ಯರ್ಥಿ: ಕಾಂಗ್ರೆಸ್‌ಗೆ ಭಾರಿ ತಲೆಬಿಸಿ
- ಕುದುರೆ ವ್ಯಾಪಾರದ ಸದ್ದು; ಡಿಸಿಎಂ ಡಿಕೆಶಿ–ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಜಿದ್ದಾಜಿದ್ದಿಗೆ ವೇದಿಕೆ
- ಪರಸ್ಪರ ಶಾಸಕರ ಸೆಳೆಯುವ ರಹಸ್ಯ ಕಾರ್ಯತಂತ್ರ

ಬೆಂಗಳೂರು, ಫೆ.19(ಕೆಎಂಶಿ)– ವಿಧಾನಸಭೆಯಿಂದ ರಾಜ್ಯಸಭೆಂಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಕುದುರೆ ವ್ಯಾಪಾರದ ಸದ್ದು ಜೋರಾಗಿದೆ. ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕುಪೇಂದ್ರ ರೆಡ್ಡಿ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಬಹಿರಂಗವಾಗೇ ವಾಗ್ವಾದಕ್ಕೆ ಇಳಿದಿದ್ದಾರೆ. ಉಭಯ ನಾಯಕರು ಕುದುರೆ ವ್ಯಾಪಾರದ ಬಗ್ಗೆ ಆರೋಪ–ಪ್ರತ್ಯಾರೋಪ ಮಾಡಿದ್ದಾರೆ.

ನಾಮಪತ್ರ ಹಿಂಪಡೆಯಲು ನಾಳೆ ಕಡೆಯ ದಿನವಾಗಿದೆ, ರೆಡ್ಡಿ ಕಣದಲ್ಲಿ ಉಳಿಯುವುದು ಖಚಿತವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರಲ್ಲಿ ತಲ್ಲಣ ಮೂಡಿದೆ. ಚುನಾವಣೆಯನ್ನು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಅದರಲ್ಲೂ ಆಡಳಿತಾರೂಢ ಪಕ್ಷಕ್ಕೆ ಮೂರು ಸ್ಥಾನಗಳು ನಿರಾಯಾಸವಾಗಿ ಗೆಲ್ಲುವ ಸಾಮರ್ಥ್ಯ ಇದ್ದರೂ ಆಪರೇಷನ್ ಬಿಜೆಪಿ–ಜೆಡಿಎಸ್ ಬಗ್ಗೆ ಸ್ವಲ್ಪ ಭಯ ಮೂಡಿದೆ.


ಇದಕ್ಕೆ ಪರ್ಯಾಯವಾಗಿ ಪ್ರತಿಪಕ್ಷದ ನಾಲ್ಕು ಸದಸ್ಯರ ಅಡ್ಡ ಮತದಾನ ಮಾಡಿಸಲು ಕೆಲವು ಸಚಿವರಿಗೆ ಹೊಣೆಗಾರಿಕೆ ವಹಿಸಲಾಗಿದೆ ಎನ್ನಲಾಗಿದೆ ಎಲ್ಲಿಯಾದರೂ ನಮ್ಮ ಮತಕ್ಕೆ ಪೆಟ್ಟು ಬಿದ್ದರೆ, ಹೆಚ್ಚುವರಿಯಾಗಿ ಬಿಜೆಪಿ ಮತ್ತು ಜೆಡಿಎಸ್‌ನಲ್ಲಿರುವ ಅತೃಪ್ತರನ್ನು ಸೆಳೆಯುವ ಪ್ರಯತ್ನ ಆರಂಭಗೊಂಡಿದೆ. ರೆಡ್ಡಿ ಗೆಲುವಿಗಾಗಿ ತೆರೆಮರೆಯಲ್ಲೇ ಭಾರೀ ತಂತ್ರಗಾರಿಕೆ ನಡೆದಿದ್ದು, ಇದರಲ್ಲಿ ದೆಹಲಿಯ ಕೆಲವು ನಾಯಕರು ಕೈಜೋಡಿಸಿದ್ದಾರೆ. ಇದರ ಸುಳಿವು ದೊರೆಯುತ್ತಿದ್ದಂತೆ

● 9ನೇ ಪುಟಕ್ಕೆ

ರಾಜ್ಯಸಭಾ ಚುನಾವಣೆ ನಂತರ ಬೆಂಗಳೂರು ಬಿಡಿ

ಶಾಸಕರಿಗೆ ಸಿಎಂ ಸಿದ್ದರಾಮಯ್ಯ ಕಟ್ಟಾಜ್ಞೆ

- ಲೋಕಸಭಾ ಚುನಾವಣೆಗೆ ನಿಮ್ಮ ನಿಮ್ಮ ಕ್ಷೇತ್ರದಲ್ಲಿ ತಯಾರಾಗಿ
- ನಾವು 20 ಸ್ಥಾನ ಗೆದ್ದೇ ಗೆಲ್ಲಬೇಕಿದೆ
- ಎಲ್ಲಾ ಹಂತದಲ್ಲಿ ಕಾರ್ಯಕರ್ತರು, ಮುಖಂಡರ ಸಭೆ ನಡೆಸಿ ಪಕ್ಷ ಸಂಘಟಿಸಿ



ಬೆಂಗಳೂರು, ಫೆ.19(ಕೆಎಂಶಿ)– ರಾಜ್ಯಸಭಾ ಚುನಾವಣೆ ಮುಗಿಯುತ್ತಿದ್ದಂತೆ ತಮ್ಮ ಜಿಲ್ಲೆ, ಕ್ಷೇತ್ರಗಳಿಗೆ ತೆರಳಿ ರಾಜಧಾನಿ ಕಡೆ ಮುಖ ಮಾಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಂಪುಟ ಸಹೋದ್ಯೋಗಿಗಳಿಗೆ, ಪಕ್ಷದ ಶಾಸಕರಿಗೆ ಕಟ್ಟಾಜ್ಞೆ ಮಾಡಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆ ನಮಗೆ ಮತ್ತು ಪಕ್ಷಕ್ಕೆ ಪ್ರತಿಷ್ಠೆಯಾಗಿದೆ, ಕನಿಷ್ಠ 20 ಸ್ಥಾನಗಳನ್ನು ನಾವು ಗೆಲ್ಲಲೇಬೇಕು. ಚುನಾವಣೆಗೆ ಇನ್ನು 100 ದಿನಗಳೂ ಉಳಿದಿಲ್ಲ. ಇರುವ ಅಲ್ಪ ಸಮಯದಲ್ಲೇ ನಮ್ಮ ಗುರಿ ಮುಟ್ಟಲು ಶಕ್ತಿ ಮೀರಿ ಶ್ರಮಿಸಬೇಕಾಗಿದೆ. ಕರ್ನಾಟಕದಲ್ಲಿ ನಾವೇ ಅಧಿಕಾರದಲ್ಲಿದ್ದರೂ ವಿಧಾನಸಭಾ ಚುನಾವಣೆಗೂ, ಲೋಕಸಭಾ ಚುನಾವಣೆಗೂ ಮತದಾನ ಮಾಡುವಾಗ ಮತದಾರರ ಮನಸ್ಥಿತಿಯೇ

● 9ನೇ ಪುಟಕ್ಕೆ

ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಲೂಟಿ ಮಾಡಿದವರಿಗೆ ಮತ್ತೆ ಅಧಿಕಾರ

- ವಿಧಾನಸಭೆಯಲ್ಲಿ ಬ್ಯಾಂಕ್ ಆಡಳಿತಾಧಿಕಾರಿ ನಡೆಯನ್ನು ಖಂಡಿಸಿದ ಬ್ಯಾಂಕ್‌ನ ನಿಕಟಪೂರ್ವ ಅಧ್ಯಕ್ಷರೂ ಆದ ಶಾಸಕ ಜಿ.ಡಿ.ಹರೀಶ್‌ಗೌಡ
- ಸಹಕಾರಿ ಸಂಘಗಳ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡುವಾಗ ಬ್ಯಾಂಕ್ ದಿವಾಳಿಯಾಗುವ ಎಚ್ಚರಿಕೆ
- ಮೂರು ತಿಂಗಳ ಆಡಳಿತಾಧಿಕಾರಿಯನ್ನು ಅನಿರ್ದಿಷ್ಟಾವಧಿಗೆ ಮುಂದುವರೆಸುವ ನಿರ್ಧಾರ
- ಹೀಗಾದರೆ ಸಹಕಾರಿ ಕ್ಷೇತ್ರ ಸರ್ವನಾಶವಾಗುವ ಆತಂಕ



ವಿಧಾನಸಭೆ ಅಧಿವೇಶನದಲ್ಲಿ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡುತ್ತಿರುವುದು.

ಬೆಂಗಳೂರು, ಫೆ.19–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್‌ನಲ್ಲಿ ನಡೆದಿದ್ದ ಅವ್ಯವಹಾರದಲ್ಲಿ ಭಾಗಿಯಾಗಿ ಅಮಾನತುಗೊಂಡಿದ್ದ ನೌಕರರನ್ನು ಮೇಲ್ವಿಚಾರಕರಾಗಿ ಮರು ನೇಮಕ ಮಾಡಿಕೊಂಡಿರುವುದು ಸರಿಯಲ್ಲ ಎಂದು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಅಧಿಕಾರಿಗಳ ನಡೆಯನ್ನು ಸದನದಲ್ಲಿ ಖಂಡಿಸಿದರು.


ವಿಧಾನಸಭೆ ಅಧಿವೇಶನದಲ್ಲಿ ಸೋಮವಾರ ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ ಕುರಿತ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಅವರು, ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ 2013ರಿಂದ 2018ರ ಅವಧಿಯಲ್ಲಿ 27 ಕೋಟಿ ರೂ. ಅವ್ಯವಹಾರವಾಗಿದ್ದ ಪ್ರಕರಣ ರಾಜ್ಯ ಸಹಕಾರ ಕ್ಷೇತ್ರದಲ್ಲಿ ಭಾರಿ ಸದ್ದು ಮಾಡಿತ್ತು. ಅವ್ಯವಹಾರದಲ್ಲಿ ಭಾಗಿಯಾಗಿ, ಅಮಾನತುಗೊಂಡಿದ್ದ ನೌಕರರನ್ನು ಮೇಲ್ವಿಚಾರಕರನ್ನಾಗಿ ಈಗಿನ ಆಡಳಿತಾಧಿಕಾರಿಗಳು ಮರು ನೇಮಕ ಮಾಡಿಕೊಂಡಿದ್ದಾರೆ. ಸಹಕಾರ ಸಂಸ್ಥೆಯನ್ನು ಲೂಟಿ ಮಾಡಿದವರಿಗೇ ಅಧಿಕಾರ ನೀಡಿದ್ದಾರೆ. ಇದನ್ನು ಸರ್ಕಾರ ಗಂಭೀರವಾಗಿ

● 6ನೇ ಪುಟಕ್ಕೆ

ಉಳುವವನಿಗೆ ಭೂಮಿ ಕಲ್ಪಿಸಿದ ಸಾಮಾಜಿಕ ಸಮಾನತೆ ಹರಿಕಾರ

ದೇವರಾಜ ಅರಸು ಪ್ರತಿಮೆ ಸ್ಥಾಪನೆಗೆ

ಮೈಸೂರು ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಭೂಮಿ ಪೂಜೆ



ದೇವರಾಜ ಅರಸ್

ಮೈಸೂರು,ಫೆ.19(ಎಂಟಿವೈ)– ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಸಾಮಾಜಿಕ ನ್ಯಾಯದ ಹರಿಕಾರ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ ಪ್ರತಿಮೆ ಸ್ಥಾಪನೆಗೆ ಜಿಲ್ಲಾಡಳಿತದಿಂದ ಶಂಕುಸ್ಥಾಪನೆ ನೆರವೇರಿಸಲಾಯಿತು.

ಮೈಸೂರು ಭಾಗದ ಬಹುಜನರ ಹಲವು ವರ್ಷದ ಬೇಡಿಕೆಗೆ ಸ್ಪಂದಿಸಿದ ರಾಜ್ಯ ಸರ್ಕಾರ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಪ್ರತಿಮೆ ಸ್ಥಾಪನೆಗೆ ಸಮ್ಮತಿಸಿ, ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸ್ಥಳ ಗುರುತಿಸಿ ಹಣ ಬಿಡುಗಡೆ ಮಾಡಿದ ಹಿನ್ನೆಲೆಯಲ್ಲಿ ಇಂದು ಸರಳವಾಗಿ ಶಂಕುಸ್ಥಾಪನಾ ಕಾರ್ಯಕ್ರಮ ನಡೆಯಿತು. ಶಾಸಕ ತನ್ವೀರ್‌ಸೇಠ್, ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಪ್ರತಿಮೆ ಸ್ಥಾಪನಾ ಕಾರ್ಯಕ್ಕೆ ಚಾಲನೆ ನೀಡಿದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ ಅವರ ಪ್ರತಿಮೆ ಪ್ರತಿಷ್ಠಾಪನೆಗೆ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಇನ್ನಿತರರು ಶಂಕುಸ್ಥಾಪನೆ ನೆರವೇರಿಸಿದರು.

ಇತಿಹಾಸದ ಪುಟ ಸೇರಿದ ಕಾರ್ಯಕ್ರಮ: ಶಂಕುಸ್ಥಾಪನಾ ಕಾರ್ಯಕ್ರಮಕ್ಕೂ ಮುನ್ನ ಶಾಸಕ ತನ್ವೀರ್ ಸೇಠ್ ಮಾತನಾಡಿ, ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿ ಜನಪರ ಆಡಳಿತ ನೀಡಿದ ಮಾಜಿ ಮುಖ್ಯಮಂತ್ರಿ, ದೀನ ದಲಿತರ ಆಶಾಕಿರಣ ಡಿ.ದೇವರಾಜ ಅರಸ್ ಅವರ ಪ್ರತಿಮೆಯನ್ನು ಮೈಸೂರಲ್ಲಿ ಸ್ಥಾಪನೆ ಮಾಡಬೇಕು ಎಂಬ ಮೈಸೂರು ಭಾಗದ ಜನರ ಬಹು ದಿನದ ನಿರೀಕ್ಷೆ ಇಂದು ಸಾಕಾರಗೊಳ್ಳುತ್ತಿದ್ದು, ನೂತನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ದೇವರಾಜ ಅರಸು ಅವರ ಪ್ರತಿಮೆ ನಿರ್ಮಾಣ ಇತಿಹಾಸದ ಪುಟ ಸೇರುತ್ತಿದೆ. ಸಮ ಸಮಾಜ ನಿರ್ಮಾಣದ ನಿಟ್ಟಿನಲ್ಲಿ, ಹಲವು ಸುಧಾರಣಾ ಕಾರ್ಯಕ್ರಮವನ್ನು ಜಾರಿಗೊಳಿಸುವ ಮೂಲಕ ಲಕ್ಷಾಂತರ ಕುಟುಂಬಕ್ಕೆ ದಾರಿದೀಪವಾದ ಡಿ.ದೇವರಾಜ ಅರಸ್ ಅವರು ಮೈಸೂರು ಭಾಗದವರು ಎನ್ನುವ ಅಭಿಮಾನಕ್ಕಿಂತ ಅತ್ಯುತ್ತಮ ವ್ಯಕ್ತಿತ್ವವುಳ್ಳ, ಬಡವರ ಕಾಳಜಿ ಮೆರೆದ ರಾಜಕಾರಣಿ.

ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಅವರ ಪ್ರತಿಮೆ ಸ್ಥಾಪನೆಗೆ ವಿಳಂಬವಾದರೂ ಕ್ರಮ ಕೈಗೊಂಡಿರುವುದಕ್ಕೆ ಸರ್ಕಾರವನ್ನು ಅಭಿನಂದಿಸುವುದಾಗಿ ಹೇಳಿದರು.

ಮೈಸೂರು ಪ್ರಾಂತ್ಯ ಎಂದು ಇದ್ದ ಹೆಸರನ್ನು 'ಕರ್ನಾಟಕ' ಎಂದು ನಾಮಕರಣ ಮಾಡಿ 50 ವರ್ಷ ಕಳೆದಿದೆ. ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ನಾಮಕರಣ ಮಾಡಿದಾಗ ದೇವರಾಜ ಅರಸ್ ಮುಖ್ಯಮಂತ್ರಿಯಾಗಿದ್ದರು. ಮೈಸೂರಿನ ಹೃದಯ ಭಾಗದಲ್ಲಿರುವ ರಸ್ತೆಗೆ 1978ರಲ್ಲಿ ದೇವರಾಜ ಅರಸು ರಸ್ತೆ ಎಂದು ನಾಮಕರಣ ಮಾಡಲಾಯಿತು. ದೇವರಾಜ ಅರಸ್ ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ದೇವರಾಜ ಅರಸ್ ಅವರ ಪ್ರತಿಮೆ ಸ್ಥಾಪನೆ ಮಾಡಬೇಕು ಎಂಬ ಬೇಡಿಕೆ ಇತ್ತು. ಆದರೆ ಇದೀಗ

● 6ನೇ ಪುಟಕ್ಕೆ

12 ಅಡಿ ಎತ್ತರದ ಕಪ್ಪು ಶಿಲೆಯ ಪ್ರತಿಮೆ

ಕಪ್ಪು ಶಿಲೆಯಿಂದ ದೇವರಾಜ ಅರಸ್ ಪ್ರತಿಮೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. 12 ಅಡಿ ಎತ್ತರದ ಪ್ರತಿಮೆಗೆ ರಾಜ್ಯ ಸರ್ಕಾರ ಈಗಾಗಲೇ 92 ಲಕ್ಷ ರೂ.ಬಿಡುಗಡೆ ಮಾಡಿದೆ. ಹೆಸರಾಂತ ಶಿಲ್ಪಿ ಅರುಣ್ ಯೋಗಿರಾಜ್ ಹಾಗೂ ಅವರ ಸಹೋದರ ಸೂರ್ಯ ಪ್ರಕಾಶ್ ಯೋಗಿರಾಜ್ ಪ್ರತಿಮೆ ರೂಪಿಸುತ್ತಿದ್ದಾರೆ.

ಮಾ.3ಕ್ಕೆ ಗೀತ್ ಗಾತಾ ಚಲ್–22
ಡಾಕ್ಟರ್ಸ್ ಸಂಗೀತ ರಸಸಂಜೆ



ಡಾ.ಜಗನ್ನಾಥ್ ಶೆಣೈ ಡಾ.ಪಿ.ಎ.ಕುಶಾಲಪ್ಪ

ಮೈಸೂರು,ಫೆ.19–ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕಲಾಮಂದಿರದಲ್ಲಿ ಮಾರ್ಚ್ 3ರಂದು ಸಂಜೆ 5ರಿಂದ ರಾತ್ರಿ 9ರವರೆಗೆ ಗೀತ್ ಗಾತಾ ಚಲ್–22, ಡಾಕ್ಟರ್ಸ್ ಸಂಗೀತ ರಸಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಖ್ಯಾತ ಉದ್ಯಮಿ ಹಾಗೂ ದಾನಿಗಳಾದ ಡಾ.ಎಂ. ಜಗನ್ನಾಥ್ ಶೆಣೈ ಮತ್ತು ಕುಟುಂಬ ಪ್ರಾಯೋಜಿಸಿದ್ದಾರೆ. ಪೋಷಕರಾಗಿ ಡಾ.ಸಿ.ಉಮೇಶ್ ಕಾಮತ್ ಮತ್ತು ಡಾ.ಪಿ.ಎ.ಕುಶಾಲಪ್ಪ ಸಂಘಟನಾ ಅಧ್ಯಕ್ಷರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಗಾಯಕರಾದ ಡಾ.ಎಂ.ನಟಶೇಖರ್, ಡಾ.ಯು.ಗಣೇಶ್ ರಾವ್, ಡಾ.ಯು.ಜಿ.ಶೆಣೈ, ಶ್ರೀಮತಿ ಅಪೂರ್ವ ನಟಶೇಖರ್, ಡಾ.ಸುಷ್ಮಾ ಕೃಷ್ಣಮೂರ್ತಿ, ಡಾ.ಸೀತಾಲಕ್ಷ್ಮಿ ಸೋಮನಾಥ್, ಡಾ.ಅಮೃತಾ ಉಪಾಧ್ಯಾಯ, ಡಾ.ಸ್ನೇಹಶ್ರೀ ನಿರ್ಮಲ್‌ಕುಮಾರ್, ಡಾ.ಪ್ರೀತಿ ಪ್ರಭು, ಡಾ.ಸೂರಜ್ ಉಪಾಧ್ಯಾಯ, ಡಾ.ಪಿ.ಎ.ಕುಶಾಲಪ್ಪ, ಡಾ.ಜಿ.ಡಿ.ರವಿಕುಮಾರ್, ಪೃಥ್ವಿ ಶಂಕರ್, ಆರ್.ಎಲ್.ವರ್ಷ, ಡಾ.ಸೋಮನಾಥ್ ವಾಸುದೇವ, ಸ್ಪರ್ಶ ಶೆಣೈ, ಡಾ.ಶ್ಯಾಮ್‌ಪ್ರಸಾದ್ ಮತ್ತು ರಂಜಿತಾ ತಮ್ಮ ಸುಮಧುರ ಗೀತೆಗಳ ಮೂಲಕ ಪ್ರೇಕ್ಷಕರನ್ನು ರಂಜಿಸಲಿದ್ದಾರೆ. ಪ್ರೇಕ್ಷಕರು 15 ನಿಮಿಷ ಮುಂಚಿತವಾಗಿ ಆಸೀನರಾಗಬೇಕೆಂದು ಕೋರಲಾಗಿದೆ.

ಹಿರಿಯ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮ



ಮೈಸೂರು, ಫೆ. 19– ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮ '7ನೇ ಲಹರಿಯನ್ನು' ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕಾಲೇಜಿನ ನಿರ್ದೇಶಕರು, ಬರಹಗಾರರೂ ಆದ ಹಿರಿಯ ವಿದ್ಯಾರ್ಥಿ ಮನೋಜ್ ಕುಮಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನೂರಾರು ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳು ತಮ್ಮ ಕಾಲೇಜಿನ ದಿನಗಳನ್ನು ಮೆಲುಕು ಹಾಕಿದರು. ಹುಡುಗರಿಗೆ ಹಗ್ಗ ಜಗ್ಗಾಟ, ಹುಡುಗಿಯರಿಗೆ ಪಾಸ್ ದ ಬಾಲ್ ಆಟವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎನ್.ಅರ್ಚನಾ ಸ್ವಾಮಿ, ಕಾಲೇಜಿನ ಉಪನ್ಯಾಸಕ, ಉಪನ್ಯಾಸಕೇತರ ವರ್ಗದವರು, ಇನ್ನಿತರರು ಉಪಸ್ಥಿತರಿದ್ದರು.

ಹಿರಿಯರು ಧಾರ್ಮಿಕತೆಯ ರೂವಾರಿಗಳು


ಮನೋರಂಜನಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವ ಹಿರಿಯರು.

ಮೈಸೂರು,ಫೆ.19–ಹಿರಿಯರು ಸಂಪ್ರದಾಯ, ಆದರ್ಶ, ಧಾರ್ಮಿಕತೆಯ ರೂವಾರಿಗಳು ಎಂದು ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಹೇಳಿದ್ದಾರೆ.

ಭೀಷ್ಮಾಷ್ಟಮಿಯ ಅಂಗವಾಗಿ ರಾಮಕೃಷ್ಣನಗರದ ಸಂಸ್ಥೆಯ ಆವರಣದಲ್ಲಿ ಹಿರಿಯ ನಾಗರಿಕರಿಗಾಗಿ ಆಯೋಜಿಸಿದ್ದ ಮನೋರಂಜನಾ ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯರಿರುವ ಪ್ರತಿ ಮನೆಯಲ್ಲೂ ಸಂಪ್ರದಾಯ ಮೇಳೈಸುತ್ತದೆ. ಅವರು ತೋರಿಸುವ ಮಾರ್ಗದಲ್ಲಿ ಕಿರಿಯರು ನಡೆದಾಗಲಷ್ಟೇ ಅದು ಮುಂದುವರೆಯಲು ಸಾಧ್ಯ ಎಂದರು.

ಮಹಾಭಾರತದ ಭೀಷ್ಮ ರಾಷ್ಟ್ರದ ಹಿತದೃಷ್ಟಿಯಿಂದ ತನ್ನೆಲ್ಲಾ ಆಸೆ ಆಮಿಷಗಳನ್ನು ಬದಿಗಿಟ್ಟು ಕಿರಿಯರಿಗೆ ಮಾರ್ಗದರ್ಶಿಯಾದ. ಅಂತೆಯೇ ಪ್ರತಿಮನೆಯಲ್ಲೂ ಹಿರಿಯರು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿಯೇ ಇರುತ್ತಾರೆ. ಮಾರ್ಗದರ್ಶಕರಾಗಿ ಕಿರಿಯರ ಏಳಿಗೆಯನ್ನು ರಾಷ್ಟ್ರದ ಉನ್ನತಿಯನ್ನು ಬಯಸುತ್ತಾರೆ ಎಂದರು.

ಸಂಸ್ಥೆ ಹಮ್ಮಿಕೊಂಡಿದ್ದ ವಿವಿಧ ಆಟೋಟ ಸ್ಪರ್ಧೆ, ಮಹಾಭಾರತದ ಪಾತ್ರಗಳು ಮತ್ತು ಗಾದೆಗಳು ವಿಷಯದ ಆಶುಭಾಷಣ ಸ್ಪರ್ಧೆಯಲ್ಲಿ ಹಿರಿಯರು ಭಾಗವಹಿಸಿ ಬಹುಮಾನ ಪಡೆದರು. ಕಾರ್ಯಕ್ರಮದಲ್ಲಿ ಸಾಹಿತಿ ಕೆ.ಟಿ.ಶ್ರೀಮತಿ, ಕಾರ್ಯಕಾರಿಣಿ ಸಮಿತಿ ಸದಸ್ಯೆ ವೇದಾವತಿ ಇದ್ದರು.

ಜೆಇಇ ಮೇನ್ಸ್‌ನಲ್ಲಿ ಜ್ಞಾನೋದಯ ಪಿಯು ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

ಮೈಸೂರು, ಫೆ.19– ಮೈಸೂರಿನ ಸರಸ್ವತಿಪುರಂನಲ್ಲಿರುವ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ಸುಮಾರು 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜನವರಿ ತಿಂಗಳಲ್ಲಿ ನಡೆದ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ 90ಕ್ಕಿಂತ ಅಧಿಕ ಶೇಕಡಾವಾರು ಅಂಕಗಳನ್ನು ಪಡೆದಿದ್ದಾರೆ.


ಆಕಾಶ್

ಪ್ರಥಮ್

ಆಕಾಶ್ ಎಂ.ಆರ್.(ಶೇ.99.621) ಹಾಗೂ ಪ್ರಥಮ್ ಆದಿತ್ಯ ಮೋಹನ್ (ಶೇ.99.528) ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.


ಹೆಚ್.ಡಿ.ಕೋಟೆ ತಾಲೂಕು ಆಡಳಿತ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತಿ ಆಚರಿಸಲಾಯಿತು. ತಾಲೂಕು ದಂಡಾಧಿಕಾರಿ ಶ್ರೀನಿವಾಸ್, 2ನೇ ದರ್ಜೆ ದಂಡಾಧಿಕಾರಿ ಸಣ್ಣರಾಮಪ್ಪ, ಮರಾಠ ಜನಾಂಗದ ಪ್ರಮುಖರು ಇದ್ದರು.

ನಿಧನ

ಡಾ.ಕೆ.ಎಲ್.ನಾರಾಯಣಮೂರ್ತಿ



ಮೈಸೂರು, ಫೆ.19–ಮೈಸೂರಿನ ನೇತ್ರತಜ್ಞ, ವಾಸನ್ ಐ ಕೇರ್‌ನ ಕನ್ಸಲ್ಟೆಂಟ್ ಹಾಗೂ ಮೂರ್ತಿ ಕಣ್ಣಿನ ಆಸ್ಪತ್ರೆಯನ್ನು ನಡೆಸುತ್ತಿದ್ದ ಡಾ.ಕೆ.ಎಲ್.ನಾರಾಯಣಮೂರ್ತಿ (ಖಂಡಾಟೆ) ಭಾನುವಾರ ನಿಧನರಾದರು. ಅವರಿಗೆ 67 ವರ್ಷ ವಯಸ್ಸಾಗಿತ್ತು. ಮೃತರು ನಂ.25, ಮೊದಲನೇ ಮುಖ್ಯ ರಸ್ತೆ, ಟಿ.ಕೆ. ಬಡಾವಣೆಯಲ್ಲಿ ವಾಸವಿದ್ದು, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಫೆ.20) ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್ಹಾಜ್ ಮುಮ್ತಾಜ್ ಬೇಗಂ

ಮೈಸೂರಿನ ಲಷ್ಕರ್ ಮೊಹಲ್ಲಾದ ಮೊಹಮ್ಮದ್ ಸೇಠ್ ಬ್ಲಾಕ್ ನಿವಾಸಿ ದಿವಂಗತ ನಿಸಾರ್ ಅಹಮದ್ ಅವರ ಪತ್ನಿ ಅಲ್ಹಾಜ್ ಮುಮ್ತಾಜ್ ಬೇಗಂ (75) ಭಾನುವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸೋಮವಾರ ಬೆಳಗ್ಗೆ ಲಷ್ಕರ್ ಮೊಹಲ್ಲಾದ ಸರ್ಕಾರಿ ಅತಿಥಿ ಗೃಹದ ಎದುರು ಇರುವ ಮಸೀದಿ ಎ–ಯಾ ಅಲ್ಲಾದಲ್ಲಿ ನಮಾಜ್ ಇ–ಜನಾಜ್ ನಡೆದ ನಂತರ, ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆ: ಪೊಲೀಸ್ ಸಿಬ್ಬಂದಿಗೆ ತರಬೇತಿ

ಮೈಸೂರು, ಫೆ.19(ಆರ್‌ಕೆ)– ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಸರ್ಕಾರಿ ಅಭಿಯೋಜಕಿ ಲೋಲಾಕ್ಷಿ ಅವರು ಮುಂಬರುವ ಲೋಕಸಭಾ ಚುನಾವಣೆ ಕುರಿತಂತೆ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಿದರು.


ಲೋಕಸಭಾ ಚುನಾವಣೆ ಸಂಬಂಧ ಸರ್ಕಾರಿ ಅಭಿಯೋಜಕಿ ಲೋಲಾಕ್ಷಿ ಅವರು ಇತ್ತೀಚೆಗೆ ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಿದರು. ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ. ಬಿ.ಎನ್. ನಂದಿನಿಯವರನ್ನು ಚಿತ್ರದಲ್ಲಿ ಕಾಣಬಹುದು.

ಲೋಕಸಭಾ ಚುನಾವಣೆ ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ನೀತಿ ಸಂಹಿತೆ ಜಾರಿಗೆ ಬರಲಿದ್ದು, ಭಾರತ ಚುನಾವಣಾ ಆಯೋಗದ ನಿಯಮ, ಮಾರ್ಗಸೂಚಿಗಳನ್ನು ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಚಾಚೂ ತಪ್ಪದೇ ಅನುಸರಿಸಲೇಬೇಕು ಎಂದು ಲೋಲಾಕ್ಷಿ ತಿಳಿಸಿದರು.

ಕರ್ನಾಟಕ ಪೊಲೀಸ್ ಕಾಯ್ದೆ ಜೊತೆಗೆ ಲೋಕಸಭಾ ಚುನಾವಣೆ ಜಾರಿಗೊಳಿಸುವ ಕಾನೂನು ಕಾಯ್ದೆಗಳನ್ನು ಅನುಷ್ಠಾನ ಮಾಡುವವರು ಅಧಿಕಾರಿಗಳು. ಕಾನೂನು–ಸುವ್ಯವಸ್ಥೆ, ಪ್ರಜಾಪ್ರತಿನಿಧಿ ಕಾಯ್ದೆ, ಪಾರದರ್ಶಕ ನೀತಿ ನಿಯಮಗಳಿಗೆ ಕಟಿಬದ್ಧವಾಗಿದ್ದು, ಚುನಾವಣೆ ಸುಸೂತ್ರವಾಗಿ ನಡೆಯಲು ಪೊಲೀಸರ ಪಾತ್ರ ಪ್ರಮುಖವಾದುದು ಎಂದ ಅವರು, ಕಾಲ ಕಾಲಕ್ಕೆ ಆಯೋಗ ಹೊರಡಿಸುವ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸುವ ಮೂಲಕ ಚುನಾವಣಾ ಪ್ರಕ್ರಿಯೆ ಸುಲಲಿತವಾಗಿ ನಡೆಯಲು ಕೈಜೋಡಿಸುವುದು ಆದ್ಯ ಕರ್ತವ್ಯವಾಗಿದೆ ಎಂದು ಅವರು ನುಡಿದರು.

ಹಣ ಬಲ, ತೋಳ್ಬಲದ ಮೂಲಕ ಚುನಾವಣೆ ನಡೆಸಲು ಕಾನೂನಿನಲ್ಲಿ ಅವಕಾಶವಿಲ್ಲ. ಅಬಲರು, ನಿರ್ಲಕ್ಷಿತ ವರ್ಗದವರಿಗೂ ತಮ್ಮ ಹಕ್ಕು ಚಲಾಯಿಸಲು ಅವಕಾಶವಿರುವುದರಿಂದ ನಿರ್ಭೀತಿಯಿಂದ ಮತ ಹಾಕುವ ಶಾಂತಿಯುತ ವಾತಾವರಣ ನಿರ್ಮಿಸಿಕೊಡಬೇಕು ಎಂದು ಲೋಲಾಕ್ಷಿ ಅವರು ಇದೇ ಸಂದರ್ಭ ನುಡಿದರು.

ಚುನಾವಣಾ ವೇಳೆ ಪೊಲೀಸರು ನಿರ್ವಹಿಸಬೇಕಾದ ಜವಾಬ್ದಾರಿ ಕಾಯ್ದೆಯಲ್ಲಿರುವಂತೆ ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ವಿವರಿಸಿದ ಲೋಲಾಕ್ಷಿ ಅವರು, ಒತ್ತಡಕ್ಕೆ, ಹಣದ ಆಮಿಷಕ್ಕೆ ಬಲಿಯಾಗದೆ ನಿರ್ಭೀತಿಯಿಂದ ಮತ ಚಲಾಯಿಸುವ ಬಗ್ಗೆ ಕ್ರಮ ವಹಿಸಿ ಅತೀ ಹೆಚ್ಚು ಮತದಾನ ಆಗಲು ಅವಕಾಶ ಮಾಡಿಕೊಡಬೇಕು ಎಂದು ಲೋಲಾಕ್ಷಿ ನಿಯಮ, ನಿಬಂಧನೆಗಳ ಬಗ್ಗೆ ಕಾರ್ಯಾಗಾರದಲ್ಲಿ ಪೊಲೀಸ್ ಅಧಿಕಾರಿಗಳಿಗೆ ಅರಿವು ಮೂಡಿಸಿದರು.

ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ.ಬಿ.ಎನ್.ನಂದಿನಿ ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರಲ್ಲದೆ, ಚುನಾವಣಾ ಕರ್ತವ್ಯದಲ್ಲಿದ್ದಾಗ ಎದುರಾಗಬಹುದಾದ ಸಮಸ್ಯೆಗಳನ್ನು ಎದುರಿಸಲು ಸಜ್ಜಾಗಿರಬೇಕು ಎಂಬುದನ್ನು ಮನದಟ್ಟು ಮಾಡಿಕೊಡಲಾಯಿತು.

'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಕೃತಿಗಳ ಆಹ್ವಾನ

ಮೈಸೂರು,ಫೆ.19–ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ವೀರಶೈವ, ಲಿಂಗಾಯತ ಧರ್ಮ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಹಾಗೂ ಕಲೆಗೆ ಸಂಬಂಧಿಸಿದಂತೆ 2023ನೇ ಸಾಲಿನಲ್ಲಿ ಪ್ರಕಟವಾಗಿರುವ ಕೃತಿಗಳನ್ನು 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಆಹ್ವಾನಿಸಲಾಗಿದೆ. ಲೇಖಕರು ಹಾಗೂ ಪ್ರಕಾಶಕರು ಪ್ರಕಟಿತ ಕೃತಿಗಳನ್ನು ಪ್ರಶಸ್ತಿ ಸಮಿತಿಯ ಅವಗಾಹನೆಗಾಗಿ ನಿರ್ದೇಶಕರು, ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004 ವಿಳಾಸಕ್ಕೆ ಮಾ.31ರೊಳಗಾಗಿ ಕಳುಹಿಸಲು ಕೋರಿದೆ. ಉತ್ತಮ ಕೃತಿಗಳಿಗೆ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಯನ್ನು 1983ರಿಂದ ಪ್ರತಿವರ್ಷ ನೀಡಲಾಗುತ್ತಿದೆ. ಪ್ರಶಸ್ತಿಯು ಪ್ರಶಸ್ತಿ ಫಲಕ, ಸ್ವಸ್ತಿವಾಚನ, ಫಲತಾಂಬೂಲ ಹಾಗೂ 25,000 ರೂ.ಗಳ ಗೌರವಧನ ಒಳಗೊಂಡಿರುತ್ತದೆ. ಈ ಬಗ್ಗೆ ಮಾಹಿತಿ ಲಭ್ಯವಿರುವ ಸಾಹಿತ್ಯಾಸಕ್ತರು ಕೃತಿಗಳ ವಿವರಗಳನ್ನು ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ ವೀರಭದ್ರಸ್ವಾಮಿ ಮೊ. 9964161363 ಅವರನ್ನು ಸಂಪರ್ಕಿಸಿ.

ಸಮಗ್ರ ಅಭಿವೃದ್ಧಿ ಕಾಣದ ಸಿಎಂ ತವರು ಜಿಲ್ಲೆ

ಮೈಸೂರು, ಫೆ.19 (ಎಸ್‌ಬಿಡಿ)– ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಿನಲ್ಲಿ ಸಮಗ್ರ ಅಭಿವೃದ್ಧಿ ಇಲ್ಲವಾಗಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದ್ದಾರೆ.

ಬೆಂಗಳೂರು ನಂತರ ಎರಡನೇ ಮಹಾನಗರವಾಗಿರುವ ಮೈಸೂರಿನಲ್ಲಿ ಮಹಾರಾಜರು ನಿರ್ಮಿಸಿರುವ ಅನೇಕ ಪಾರಂಪರಿಕ ಕಟ್ಟಡಗಳನ್ನು ವಿವಿಧ ಇಲಾಖೆಗಳಿಗೆ ನೀಡಲಾಗಿದ್ದು, ಸೂಕ್ತ ನಿರ್ವಹಣೆ ಇಲ್ಲದೆ ಅನೇಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ. ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ, ಅಗ್ನಿಶಾಮಕ ಠಾಣೆ ಕಟ್ಟಡದ ಭಾಗ ಕುಸಿದು ದಶಕ ಕಳೆದರೂ ಅವುಗಳಿಗೆ ಕಾಯಕಲ್ಪ ದೊರೆತಿಲ್ಲ ಎಂದು ಪ್ರಕಟಣೆಯಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರ ಹಾಗೂ ಸುತ್ತಮುತ್ತ ಹಲವು ವಿಶ್ವಪ್ರಸಿದ್ಧ ಪ್ರವಾಸಿ ತಾಣಗಳಿದ್ದು, ದೇಶ–ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡುತ್ತಾರೆ. ಆದರೆ ಇಲ್ಲಿನ ಉದ್ಯಮಕ್ಕೆ ನೆರವಾಗುವ ನಿಟ್ಟಿನಲ್ಲಿ ಪ್ರವಾಸಿಗರು ಒಂದೆರಡು ದಿನ ಇಲ್ಲಿ ವಾಸ್ತವ್ಯ ಹೂಡುವಂತೆ ಯೋಜನೆ ರೂಪಿಸುವಲ್ಲಿ ಸರ್ಕಾರ ಕ್ರಮ ವಹಿಸಿಲ್ಲ. ಪ್ರವಾಸಿ ತಾಣಗಳ ಅಭಿವೃದ್ಧಿ ಮರೀಚಿಕೆಯಾಗಿದೆ ಎಂದು ಹೇಳಿದ್ದಾರೆ.

ಹೆಬ್ಬಾಳು, ಮೇಟಗಳ್ಳಿ, ಕೂರ್ಗಳ್ಳಿ, ಹೂಟಗಳ್ಳಿ, ಬೆಳವಾಡಿ ಮತ್ತು ಯಾದವಗಿರಿ ಕೈಗಾರಿಕಾ ಪ್ರದೇಶ ಸೇರಿದಂತೆ ದಕ್ಷಿಣ ಏಷ್ಯಾದಲ್ಲೇ ಅತ್ಯಂತ ವಿಸ್ತಾರವಾದ ಕೈಗಾರಿಕಾ ಪ್ರದೇಶವನ್ನು ಮೈಸೂರು ಒಳಗೊಂಡಿದೆ. ಆದರೆ ಅಭಿವೃದ್ಧಿಗೆ ಪೂರಕವಾದ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕೆಂಬ ಉದ್ಯಮಿಗಳ ದಶಕಗಳ ಬೇಡಿಕೆ ಇನ್ನೂ ಈಡೇರಿಲ್ಲ. ಇದರ ಪರಿಣಾಮವಾಗಿ ಮುಚ್ಚಿರುವ ಹಲವು ಕೈಗಾರಿಕೆಗಳ ಪುನಶ್ಚೇತನ ಸೇರಿದಂತೆ ಕೈಗಾರಿಕಾ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಅತ್ಯಗತ್ಯವಾಗಿದೆ ಎಂದಿದ್ದಾರೆ.

ಖಾಸಗಿ ಬಡಾವಣೆಗಳು ಸೇರಿದಂತೆ ಮೈಸೂರಿನ ಹಳೇ ಬಡಾವಣೆಗಳಲ್ಲಿ ಖಾಲಿ ಬಿದ್ದಿರುವ ನಿವೇಶನಗಳ ಸರ್ವೆ ಮಾಡಿ, ನಿವೇಶನ ನಿರ್ಮಾಣವಾದ ಹತ್ತು ವರ್ಷಗಳಲ್ಲಿ ಕಟ್ಟಡ ನಿರ್ಮಿಸಬೇಕೆಂಬ ಮುಡಾ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಅಭಿವೃದ್ಧಿ ವಂಚಿತ ಎನ್.ಆರ್.ಕ್ಷೇತ್ರ



"ಅಲ್ಪಸಂಖ್ಯಾತರು ಹೆಚ್ಚಿರುವ ನರಸಿಂಹರಾಜ ಕ್ಷೇತ್ರ, ಇತರೆ ಕ್ಷೇತ್ರಗಳಿಗಿಂತ ಅಭಿವೃದ್ಧಿಯಲ್ಲಿ ತೀರ ಹಿಂದುಳಿದಿದೆ. ಲಕ್ಷಾಂತರ ಮಂದಿ ಸ್ವಂತ ಸೂರಿಲ್ಲದೆ, ಜೋಪಡಿ ಹಾಗೂ ಅತೀಸಣ್ಣ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಇವರಿಗೆ ಅಗತ್ಯ ಸೂರು ಕಲ್ಪಿಸಲು ಈವರೆಗೂ ಸಾಧ್ಯವಾಗಿಲ್ಲ. ಕ್ಷೇತ್ರದಲ್ಲಿ ಸುಸಜ್ಜಿತ ಆಸ್ಪತ್ರೆ, ಕಾಲೇಜುಗಳಿಲ್ಲ. 2013ರಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೇ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಭೂಮಿ ಗುರುತಿಸಿ, ಯೋಜನೆ ಸಿದ್ಧಪಡಿಸಲಾಗಿತ್ತಾದರೂ ಈವರೆಗೆ ಕಾರ್ಯಗತವಾಗಿಲ್ಲ. ಆದರೆ ಅನಧಿಕೃತ ಬಡಾವಣೆಗಳ ನಿರ್ಮಾಣ ಎಗ್ಗಿಲ್ಲದೆ ಮುಂದುವರೆದಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಾಗೂ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಈ ಬಗ್ಗೆ ಮೌನವಾಗಿರುವುದು ಸಾರ್ವಜನಿಕರ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

– ಸಂದೇಶ್ ಸ್ವಾಮಿ, ಮಾಜಿ ಮೇಯರ್

ಶ್ರೀ ಕೃಷ್ಣ ಗಾನಸಭಾದ ವಾರ್ಷಿಕೋತ್ಸವ
ನಾಳೆಯಿಂದ ಸಂಗೀತ, ತ್ಯಾಗರಾಜ, ಪುರಂದರದಾಸರ ಆರಾಧನಾ ಮಹೋತ್ಸವ

ಮೈಸೂರು,ಫೆ.19–ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಗಾನಸಭಾದ 22ನೇ ವಾರ್ಷಿಕೋತ್ಸವದ ಪ್ರಯುಕ್ತ ಫೆ.21ರಿಂದ 24ರವರೆಗೆ ಸಂಗೀತ, ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ ನಡೆಯಲಿದೆ. ಫೆ.21ರಂದು ಸಂಜೆ 6 ಗಂಟೆಗೆ ಪಿಟೀಲು ಚೌಡಯ್ಯನವರ ಜಯಂತಿ ನಡೆಯಲಿದ್ದು, ಇದನ್ನು ಶಿವಮೊಗ್ಗ ಕುವೆಂಪು ವಿವಿಯ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಉದ್ಘಾಟಿಸಲಿದ್ದಾರೆ. 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರನ್ನು ಸನ್ಮಾನಿಸಲಾಗುತ್ತದೆ. ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಫೆ.22ರಂದು ಸಂಜೆ 6 ಗಂಟೆಗೆ ಮಹಾರಾಜ ಶ್ರೀ 10ನೇ ಚಾಮರಾಜ ಒಡೆಯರ್ ಜಯಂತಿ ಮಹೋತ್ಸವ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರ ಅಂಶಿ ಪ್ರಸನ್ನಕುಮಾರ್ ಆಗಮಿಸಲಿದ್ದು, ಕವಿ ಕುಮಾರವ್ಯಾಸ ವಿರಚಿತ 'ಕರ್ನಾಟ ಭಾರತ' ಕಥಾಮಂಜರಿಯ ಕಾವ್ಯ ಭಾಗ ಕೃಷ್ಣ ಭೇದೋಪಾಯ, ವಾಚನ: ವಿದುಷಿ ಶುಭ ರಾಘವೇಂದ್ರ, ವ್ಯಾಖ್ಯಾನ: ವಿದ್ವಾನ್ ಮಂಜುನಾಥ್ ಕೃಪಾ ಅವರಿಂದ. ಫೆ.23ರಂದು ಸಂಜೆ 6.30ಕ್ಕೆ ಡಾ.ಸಿ.ಎಂ. ಮುನಿರಾಮಪ್ಪನವರಿಂದ ಅವರ ತಂದೆ–ತಾಯಿ ಜ್ಞಾಪಕಾರ್ಥ ಸಂಗೀತ ಕಾರ್ಯಕ್ರಮ, ವಿದ್ವಾನ್ ಮೈಸೂರು ಎನ್.ಶ್ರೀನಾಥ್–ಗಾಯನ, ವಿದ್ವಾನ್ ಎಂ.ಡಿ.ಅರ್ಜುನ–ಪಿಟೀಲು, ವಿದ್ವಾನ್ ಪಿ.ಎಸ್.ಶ್ರೀಧರ–ಮೃದಂಗ, ವಿದ್ವಾನ್ ವಿ.ಎಸ್.ರಮೇಶ್–ಮೋರ್ಚಿಂಗ್.

ಫೆ.24ರಂದು ಬೆಳಗ್ಗೆ 9.30ರಿಂದ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ ಅಂಗವಾಗಿ ಗೋಷ್ಠಿ ಗಾಯನ ನಂತರ ಸಂಗೀತ ಕಛೇರಿ. ವಿದುಷಿ ಮೇಧಾ ಮಂಜುನಾಥ್–ಗಾಯನ, ವಿದುಷಿ ಸಿ.ವಿ.ಶ್ರುತಿ–ವಯೋಲಿನ್, ವಿದ್ವಾನ್ ಎಂ.ಎಸ್.ಜಯರಾಮ–ಮೃದಂಗ, ವಿದ್ವಾನ್ ಎಂ.ಜೆ.ಕಿರಣ್‌ಕುಮಾರ್–ಘಟಂ. ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕಳಪೆ ಕಾಮಗಾರಿ ಆರೋಪ
ಕೊಳಗೇರಿ ಮಂಡಳಿ ಕಚೇರಿಗೆ ಮುತ್ತಿಗೆ

ಮೈಸೂರು,ಫೆ.19–ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.4ರಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನಡೆಯುತ್ತಿರುವ 60 ಮನೆಗಳ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಕೂಡಲೇ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿ ಬುದ್ಧ ಭೀಮ ಬ್ರಿಗೇಡ್ ಸಂಘದ ಕಾರ್ಯಕರ್ತರು ಮುಖಂಡ ಕೆ.ನಂಜಪ್ಪ ಬಸವನಗುಡಿ ನೇತೃತ್ವದಲ್ಲಿ ಸೋಮವಾರ ನಗರದ ಹೈವೇ ವೃತ್ತದ ಬಳಿಯ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿಗೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು.

ಹೊಸ ಮನೆಗಳನ್ನು ಕಟ್ಟಿಕೊಡುವುದಾಗಿ ಹೇಳಿ ನಮ್ಮ ಹಳೆಯ ಮನೆಗಳನ್ನು ಕೆಡವಿ ಸುಮಾರು ಒಂದೂವರೆ ವರ್ಷವಾಗಿದೆ. ಇಲ್ಲಿಯ ತನಕ ಕಾಮಗಾರಿ ಮುಗಿಸಿಲ್ಲ. ಅಲ್ಲದೇ ಕಾಮಗಾರಿ ತೀರ ಕಳಪೆಯಾಗಿದೆ. ಗುಣಮಟ್ಟದ ಸಿಮೆಂಟ್ ಬಳಸುತ್ತಿಲ್ಲ. ನಾವೆಲ್ಲಾ ಈ ಮನೆಗಳನ್ನು ನಂಬಿಕೊಂಡು ಬೀದಿ ಪಾಲಾಗಿದ್ದೇವೆಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಆದಿ ದ್ರಾವಿಡ ಪೌರಕಾರ್ಮಿಕ ಯುವಕರ ಅಭಿವೃದ್ಧಿ ಮಹಾಸಂಘದ ಗೌರವ ಕಾರ್ಯದರ್ಶಿ ಕೆ.ನಂಜಪ್ಪ ಬಸವನಗುಡಿ ಮಾತನಾಡಿ, ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ಪೌರಕಾರ್ಮಿಕರಿಗಾಗಿ ನಿರ್ಮಾಣ ಮಾಡುತ್ತಿರುವ ಈ ಕಾಮಗಾರಿಯು ಸಂಪೂರ್ಣ ಕಳಪೆಯಾಗಿದೆ. ಅಧಿಕಾರಿಗಳು ಗುಣಮಟ್ಟವನ್ನು ಪರಿಶೀಲಿಸದೆ ಕಾಮಗಾರಿ ನಡೆಸುತ್ತಿದ್ದಾರೆ. ಈ ಬಗ್ಗೆ ಕೇಳಿದರೆ ಅದು ಈ ಹಿಂದೆಯೇ ಟೆಂಡರ್ ಆಗಿತ್ತು, ಆಗ ಕಡಿಮೆ ಬೆಲೆ ಇತ್ತು, ಈಗ ನಿರ್ಮಾಣ ವೆಚ್ಚ ಹೆಚ್ಚಾಗಿದೆ. ಕಾಮಗಾರಿ ನಡೆಸಲು ಯಾರೂ ಮುಂದೆ ಬರುತ್ತಿಲ್ಲ ಎಂದು ಉದಾಸೀನವಾಗಿ ಮಾತನಾಡುತ್ತಾರೆ. ಇದರಿಂದ ಅಧಿಕಾರಿಗಳು ಗುತ್ತಿಗೆದಾರರ ಜತೆ ಶಾಮೀಲಾಗಿದ್ದಾರೆ ಎಂಬ ಅನುಮಾನ ಮೂಡಿದೆ. ಹೀಗಾಗಿ ಕಾಮಗಾರಿ ಗುಣಮಟ್ಟ ತೀರ ಕಳಪೆಯಾಗಿದೆ ಎಂದು ಆರೋಪಿಸಿದರು.


ಬುದ್ಧ ಭೀಮ ಬ್ರಿಗೇಡ್ ಸಂಘದ ಕಾರ್ಯಕರ್ತರು ಸೋಮವಾರ ಮೈಸೂರಿನಲ್ಲಿರುವ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿಗೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು.

"ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಒಂದು ವರ್ಷದ ಹಿಂದೆ ಹೆಬ್ಬಾಳ್ ಕಾಲೋನಿ ಸೇರಿದಂತೆ ವಿವಿಧ ಕಡೆಗಳಲ್ಲಿ 500ಕ್ಕೂ ಹೆಚ್ಚು ಮನೆಗಳನ್ನು ಕಟ್ಟಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹೆಬ್ಬಾಳ್ ಕಾಲೋನಿಯಲ್ಲಿ ಕಟ್ಟುತ್ತಿರುವ 60 ಮನೆಗಳ ಕಾಮಗಾರಿ ತೀರ ಕಳಪೆಯಾಗಿದೆ. ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು.

–ಕೆ.ನಂಜಪ್ಪ, ಬಸವನಗುಡಿ, ಮುಖಂಡರು

ಬಳಿಕ ಪ್ರತಿಭಟನಾಕಾರರು ಕೊಳಗೇರಿ ಅಭಿವೃದ್ಧಿ ಮಂಡಳಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಿ.ಎನ್.ರಾಮಚಂದ್ರ ಅವರಿಗೆ ಮನವಿ ಸಲ್ಲಿಸಿ, ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ರಾಮು, ಪೌರಕಾರ್ಮಿಕರ ಸಂಘದ ಉನ್ನತ ಸಮಿತಿ ಕಾರ್ಯದರ್ಶಿ ಟಿ.ಶ್ರೀನಿವಾಸ್, ಆರ್.ಮಾರ, ಪಿ.ರವಿ, ಸುರೇಶ್, ಮಂಗಳಮ್ಮ, ಲಲಿತಾ, ದಸಂಸ ಮುಖಂಡ ಎಂ.ಬಿ.ವೆಂಕಟೇಶ್ ಮತ್ತಿತರರು ಇದ್ದರು.

ಪಿಹೆಚ್.ಡಿ ಪದವೀಧರರು

ಎಲ್. ಸಂತೋಷ



ಮೈಸೂರು,ಫೆ.19–ಡಾ.ಜಿ.ವಿಜಯ ಸಾರಥಿ ಅವರ ಮಾರ್ಗದರ್ಶನದಲ್ಲಿ ಎಲ್.ಸಂತೋಷ ಅವರು ಭಾಷಾಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎನ್.ಎಂ.ಮುತ್ತುಕುಮಾರ್



ಡಾ.ಮೈಲಹಳ್ಳಿ ರೇವಣ್ಣ ಅವರ ಮಾರ್ಗದರ್ಶನದಲ್ಲಿ ಎನ್.ಎಂ.ಮುತ್ತುಕುಮಾರ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ

ಎನ್.ಆಶಾ



ಡಾ.ರಾಮೇಶ್ವರಿ ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಎನ್. ಆಶಾ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕೊಯಮತ್ತೂರು ಭಾರತಿಯಾರ್ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.2.2024 ಮಂಗಳವಾರ, ಮಳೆ ನಕ್ಷತ್ರ: ಶತಭಿಷ 20.2.2024ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಹಗಲು–ರಾತ್ರಿ ಪೂಜೆ, ಬಲಿಪ್ರಧಾನ ಉತ್ಸವ, ಸ್ಥಳ: ದೇವಸ್ಥಾನ, ಅರಮನೆ ಆವರಣ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಸಂತ ಕವಿ ಸರ್ವಜ್ಞ ಜಯಂತಿ, ಘನ ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು : ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಅತಿಥಿಗಳು: ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಜಿ.ಡಿ.ಹರೀಶ್‌ಗೌಡ, ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ಮುಖ್ಯ ಭಾಷಣ: ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರಭಾಕರ ಹೆಗ್ಗಂದೂರು, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ:** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ವಿದ್ವಾನ್ ಆಶೀಷ್ ನಾಯಕ್, ವಿದುಷಿ ಚಂದನಾ ಮುರಳೀಧರ್, ಪಂಡಿತ್ ನರಸಿಂಹಾಚಾರ್ಯ ಗೋರೆ ಅವರಿಂದ ಸುಮಧ್ವವಿಜಯ 5 ಮತ್ತು 6ನೇ ವರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ–ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ –ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಕೆ.ಪಿ. ನಾರಾಯಣ–ನಾದಸ್ವರ ವಾದನ, ಶಿವಿ ಪಿ.– ಡೋಲು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ : 12.30 ದೇವರನಾಮ–ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, 12.45 'ನೆಮ್ಮದಿಯ ಸೂಚ್ಯಂಕ' ಕುರಿತು ಮಾತನಾಡುತ್ತಾರೆ ಡಾ.ಜಿ. ಅಚ್ಯುತರಾವ್, 1.20 ಭಾವಗೀತೆಗಳು–ಸಾವಿತ್ರಿ ಪ್ರಭಾಕರ್, 3.00 ನ್ಯಾಯಂತಿಂಕರ ವಾಸುದೇವನ್– ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, ಭೀಷ್ಮಾಚಾರ್ಯ, ಪ್ರಸ್ತುತಿ– ಸಂತ ಕೇಶವದಾಸರು, 6.50 ಕೃಷಿರಂಗ–ರೇಷ್ಮೆ ಸಿರಿ ಬಾನುಲಿ ಸರಣಿ–ಸುಧಾರಿತ ಹಿಪ್ಪುನೇರಳೆ ತಳಿಗಳು ಕುರಿತು ಡಾ.ಎಂ.ಕೆ. ರಘುನಾಥ್ ಅವರೊಂದಿಗೆ ಸಂದರ್ಶನ, 9.30 ಮೈಸೂರು ಎ. ಚಂದನ್ ಕುಮಾರ್–ವೇಣುವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಲಲಿತಾ ಎಸ್. ಶೇಖರ್, ವ್ಯಾಖ್ಯಾನ– ಸುಮಾ ವಸಂತ್, 10.30 ಸವಿನೆನಪು

ಯುಗಾದಿ ನಂತರ ರಾಜ್ಯದಲ್ಲಿ ಒಳ್ಳೆಯ ಮಳೆ-ಬೆಳೆ

ಧಾರ್ಮಿಕ ಮುಖಂಡನ ಸಾವು: ಕೋಡಿಶ್ರೀ ಭವಿಷ್ಯ



ಕೋಲಾರ: ಯುಗಾದಿ ಕಳೆದ ನಂತರ ರಾಜ್ಯದಲ್ಲಿ ಒಳ್ಳೆ ಮಳೆ ಮತ್ತು ಬೆಳೆಯಾಗುವ ಲಕ್ಷಣಗಳಿವೆ ಎಂದು ಕೋಡಿಮಠದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

ಸದ್ಯ ಮಳೆ-ಬೆಳೆ ಇಲ್ಲದೇ ಕಂಗಾಲಾಗಿರುವ ರೈತರಿಗೆ ಒಂದು ಸಮಾಧಾನಕರ ಭವಿಷ್ಯವೊಂದನ್ನು ಹೇಳಿದ್ದಾರೆ. ಅಲ್ಲದೇ ಮತಾಂಧತೆ ಹೆಚ್ಚಾಗುತ್ತದೆ. ಬಾಂಬ್ ಸ್ಫೋಟ, ಭೂಕಂಪವೂ ಆಗುತ್ತದೆ ಧಾರ್ಮಿಕ ಮುಖಂಡನ ಸಾವು ಸಹ ಆಗಲಿದೆ ಎಂದು ಆಘಾತಕಾರಿ ಭವಿಷ್ಯ ನುಡಿದಿದ್ದಾರೆ.

ಕೋಲಾರ ಜಿಲ್ಲೆ ಮಾಲೂರು ಪಟ್ಟಣದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಕೋಡಿ ಮಠದ ಡಾ.ಶಿವಾನಂದ ಶಿವಯೋಗಿ ಸ್ವಾಮೀಜಿ, ಯುಗಾದಿ ಕಳೆದ ನಂತರ ರಾಜ್ಯದಲ್ಲಿ ಒಳ್ಳೆ ಮಳೆ ಮತ್ತು ಬೆಳೆಯಾಗುವ ಲಕ್ಷಣಗಳಿವೆ ಎಂದು ಭವಿಷ್ಯ ನುಡಿದರು. ಇನ್ನು ಇದೇ ವೇಳೆ ರಾಜ್ಯ ರಾಜಕೀಯ ಬಗ್ಗೆ ಯುಗಾದಿ ಕಳೆದ ನಂತರ ಹೇಳುವೆ, ಇನ್ನು ಸಾಕಷ್ಟು ಸಮಯವಿದೆ ಎಂದರು.

ಜಾಗತಿಕ ಮಟ್ಟದಲ್ಲಿ ತೊಂದರೆ ಇದೆ. ಬೆಂಕಿ ಹಾವಳಿ,ನೀರಿನ ಹಾವಳಿ, ಯುದ್ಧ ಆಗುತ್ತೆ. ಅನೇಕ ಸಾವು ನೋವುಗಳು ಆಗುತ್ತೆ. ಮತಾಂಧತೆ ಹೆಚ್ಚಾಗುತ್ತದೆ.

ಅರ್ಪಿತಾ ನಾಯಕ ಭರತನಾಟ್ಯ ರಂಗ ಪ್ರವೇಶ

- ಹಿರಿಯ ಭರತನಾಟ್ಯ ವಿದುಷಿ ರೂಪಶ್ರೀ ಅಭಿಮತ
- ತಲ್ಲೀನತೆ, ಶ್ರದ್ಧಾ ಭಾವಗಳೇ ಕ್ರಿಯಾಶೀಲತೆ ಪ್ರತೀಕ



ನಾದವಿದ್ಯಾಲಯ ಸಂಸ್ಥೆ ಮೈಸೂರಿನ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಆಯೋಜಿಸಿದ್ದ ಯುವ ಕಲಾವಿದೆ ಅರ್ಪಿತಾ ನಾಯಕ ಅವರ ರಂಗಪ್ರವೇಶ ಕಾರ್ಯಕ್ರಮದಲ್ಲಿ ವಿದುಷಿಯರಾದ ಮಿತ್ರಾ ನವೀನ್, ರೂಪಶ್ರೀ, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸುವರ್ಣಾ, ಉದಯ ನಾಯಕ ಇತರರಿದ್ದರು.

ಮೈಸೂರು, ಫೆ. 19- ಕಲೆ ಮೂಲಕ ಬಿಂಬಿಸುವ ತಲ್ಲೀನತೆ ಮತ್ತು ಶ್ರದ್ಧಾ ಭಾವಗಳೇ ನೃತ್ಯಪಟುವಿನ ಕ್ರಿಯಾಶೀಲತೆ ಪ್ರತೀಕ ಎಂದು ಹಿರಿಯ ಭರತನಾಟ್ಯ ವಿದುಷಿ ರೂಪಶ್ರೀ ಮಧುಸೂದನ ಹೇಳಿದರು.

ನಗರದ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ವಿದುಷಿ ಮಿತ್ರಾ ನವೀನ್ ಅವರ ನಾದವಿದ್ಯಾಲಯ ಸಂಸ್ಥೆ ಆಯೋಜಿಸಿದ್ದ ಯುವ ಕಲಾವಿದೆ ಅರ್ಪಿತಾ ನಾಯಕ ಅವರ ರಂಗಪ್ರವೇಶ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಅರ್ಪಿತಾ ಹೆಸರಿಗೆ ತಕ್ಕಂತೆ ನೃತ್ಯವನ್ನು ಅರ್ಪಿಸಿ ಧನ್ಯತೆ ಮೆರೆದಿದ್ದಾರೆ. ಅವರೊಬ್ಬ ಕ್ರಿಯಾಶೀಲ ಯುವ ನೃತ್ಯಪಟು ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ನೃತ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸಮರ್ಥವಾಗಿ ಕೊಡುಗೆಯಾಗಿ ನೀಡಬಲ್ಲ ಕಲಾವಿದೆ ಅರ್ಪಿತಾ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಲಾವಿದೆ ಅರ್ಪಿತಾ ಅವರ ತಂದೆ ಉದಯ ನಾಯಕ, ತಾಯಿ ಸುವರ್ಣಾ ನಾಯಕ, ಗುರು ಮಿತ್ರಾ ನವೀನ್ ಇತರರು ಇದ್ದರು. ಕಲಾವಿದೆ ಅರ್ಪಿತಾ ಅವರ ರಂಗಪ್ರವೇಶಕ್ಕೆ ಗುರು ಮಿತ್ರಾ ನವೀನ್ ನಟುವಾಂಗ, ವಿದ್ವಾನ್ ಎಂ. ಎಸ್. ನವೀನ್ ಅಂದಗಾರ್ ಗಾಯನ, ವಿದ್ವಾನ್ ಜಿ.ಎಸ್. ನಾಗರಾಜ್ ಮೃದಂಗ ಮತ್ತು ವಿದ್ವಾನ್ ವಿವೇಕ ಕೃಷ್ಣ ಕೊಳಲು ಪಕ್ಕವಾದ್ಯದಲ್ಲಿ ಸಹಕರಿಸಿದರು.

ಹಾಸನದಲ್ಲಿ ಮದುವೆ ಮುಗಿಸಿ ವಾಪಸಾಗುತ್ತಿದ್ದ ದಂಪತಿ ಬೈಕ್‌ಗೆ ಕಾರು ಡಿಕ್ಕಿ, ಸ್ಥಳದಲ್ಲೇ ದಂಪತಿ ದುರ್ಮರಣ

ಹಾಸನ: ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬರಗೂರು ಹ್ಯಾಂಡ್ ಪೋಸ್ಟ್ ಬಳಿ ಅಪಘಾತ ಸಂಭವಿಸಿದೆ.

ಮೃತರನ್ನು 52 ವರ್ಷದ ಚಂದ್ರೇಗೌಡ ಮತ್ತು 45 ವರ್ಷದ ಹೇಮಲತಾ ಎಂದು ತಿಳಿದುಬಂದಿದೆ. ಉದಯಪುರ ಗ್ರಾಮದಲ್ಲಿ ಮದುವೆ ಮುಗಿಸಿ ಬೈಕ್‌ನಲ್ಲಿ ಚನ್ನರಾಯಪಟ್ಟಣಕ್ಕೆ ವಾಪಸ್ ಆಗುತ್ತಿದ್ದ ವೇಳೆ ಕಾರು ಹಿಂಬದಿಯಿಂದ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಡಿಕ್ಕಿ ರಭಸಕ್ಕೆ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಚನ್ನರಾಯಪಟ್ಟಣ ಸಂಚಾರಿ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಲೋಕಸಭಾ ಚುನಾವಣೆಗೆ ಸಕಲ ರೀತಿಯಲ್ಲಿ ಸಜ್ಜಾಗಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ



ಲೋಕಸಭಾ ಚುನಾವಣೆ ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲೆಯ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಫೆ.19(ಎಸ್‌ಬಿಡಿ)- ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಸಮಸ್ಯೆಯಾಗದಂತೆ ಅತ್ಯಂತ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಲೋಕಸಭಾ ಚುನಾವಣೆ ಸಂಬಂಧ ಮುಖ್ಯ ಚುನಾವಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದದ ಬಳಿಕ ತಮ್ಮ ಕಚೇರಿಯಲ್ಲಿ ಜಿಲ್ಲೆಯ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳ ಸಭೆ ನಡೆಸಿ, ಚುನಾವಣೆಯ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು.

ಚುನಾವಣಾ ಸಂದರ್ಭದಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಉಂಟಾಗದ ರೀತಿಯಲ್ಲಿ ಬಹಳ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ತಾಲೂಕುಗಳಲ್ಲಿ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಪ್ರತಿ ಮತಗಟ್ಟೆಗಳಲ್ಲೂ ಕನಿಷ್ಠ ಸೌಲಭ್ಯಗಳನ್ನು ಖಾತ್ರಿಪಡಿಸಿಕೊಳ್ಳಬೇಕು. ಮುಖ್ಯವಾಗಿ ವಿದ್ಯುತ್, ಶೌಚಾಲಯ, ಕುಡಿಯುವ ನೀರು, ಮತಗಟ್ಟೆಗೆ ವಿಶೇಷಚೇತನರು ಹಾಗೂ ಹಿರಿಯರ ಪ್ರವೇಶಕ್ಕೆ ಅಗತ್ಯವಾದ ರ್‍ಯಾಂಪ್ ಇನ್ನಿತರ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಸೂಚಿಸಿದರು. ಚುನಾವಣಾ ನೀತಿ ಸಂಹಿತೆ ಜಾರಿಯಾದಾಗಿನಿಂದ ಹೆಚ್ಚಿನ ನಿಗಾ ವಹಿಸಬೇಕು. ಜಿಲ್ಲೆಯಾದ್ಯಂತ ಎಲ್ಲೂ ಫ್ಲೆಕ್ಸ್, ಬ್ಯಾನರ್, ಕಟೌಟ್‌ಗಳನ್ನು ಅಳವಡಿಸದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಚೆಕ್‌ಪೋಸ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಟ್ಟೆಚ್ಚರ ವಹಿಸಬೇಕು. ಇವರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ತಿಳಿಸಿದರು. ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವಾಗ ಸಾರ್ವಜನಿಕರು ಯಾವುದೇ ರೀತಿಯ ಸಭೆ-ಸಮಾರಂಭ ಆಯೋಜಿಸುವ ಮುನ್ನ ಆ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಯಾರಾದರೂ ಅನುಮತಿ ಪಡೆಯದೆ ಸಭೆ-ಸಮಾರಂಭ ನಡೆಸಿದ್ದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಜಾತ್ರೆ, ಉತ್ಸವಗಳು ಹೆಚ್ಚಾಗಿ ನಡೆಯುತ್ತವೆ. ನೂರಾರು-ಸಾವಿರಾರು ಜನ ಸೇರುತ್ತಾರೆ. ಚುನಾವಣೆ ಸಮೀಪಿಸುತ್ತಿರುವುದರಿಂದ ಜಾತ್ರೆ-ಉತ್ಸವಗಳಲ್ಲಿ ಯಾವುದೇ ರೀತಿಯ ಗಲಾಟೆ, ಗದ್ದಲಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕು. ಸಣ್ಣ ಗಲಾಟೆಗಳೂ ರಾಜಕೀಯ ತಿರುವು ಪಡೆದು ಕಾನೂನು-ಸುವ್ಯವಸ್ಥೆಗೆ ಸಮಸ್ಯೆಯಾಗುವ ಸಾಧ್ಯತೆ ಇರುತ್ತದೆ. ಇದಕ್ಕೆ ಆಸ್ಪದವಾಗದಂತೆ ಮುಂಜಾಗ್ರತೆ ವಹಿಸಿ ಎಂದು ಹೇಳಿದರು.

ಚುನಾವಣೆಗೆ ಸಕಲ ರೀತಿಯಲ್ಲೂ ಸಜ್ಜಾಗಿರಬೇಕು. ಸಹಾಯಕ ಪರಿಶೀಲನಾ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳು ಹಾಗೂ ಸಮಸ್ಯೆಗಳನ್ನು ಪರಿಶೀಲಿಸಬೇಕು. ಅಗತ್ಯವಿರುವ ವ್ಯವಸ್ಥೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಸೇರಿದಂತೆ ಜಿಲ್ಲಾ ಮಟ್ಟದ ಹಲವು ಅಧಿಕಾರಿಗಳು ಹಾಜರಿದ್ದರು.

ಸುಮಧ್ವ-ವಿಜಯ ಎಕ್ಸ್‌ಪ್ರೆಸ್ ಭಕ್ತಿ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ



ಸುಮಧ್ವ-ವಿಜಯ ಎಕ್ಸ್‌ಪ್ರೆಸ್'(ಮಧ್ವ-ಪುರಂದರ ನಮನ) ಭಕ್ತಿ ಸಂಗೀತ ಕಾರ್ಯಕ್ರಮಕ್ಕೆ ಶ್ರೀ ಉತ್ತರಾದಿ ಮಠ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ ಚಾಲನೆ ನೀಡಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬ್ರಾಹ್ಮಣ ಮುಖಂಡ ಡಿ.ಟಿ.ಪ್ರಕಾಶ್ ಮತ್ತಿತರರಿದ್ದರು.

ಮೈಸೂರು,ಫೆ.19(ಎಂಕೆ)-ನಗರದ ಕೃಷ್ಣಮೂರ್ತಿ ಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಎಂಟು ದಿನಗಳ 'ಸುಮಧ್ವ-ವಿಜಯ ಎಕ್ಸ್‌ಪ್ರೆಸ್'(ಮಧ್ವ-ಪುರಂದರ ನಮನ) ಭಕ್ತಿ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿರುವ ಗಾನಸಿರಿ-ವೇದಾಂತ ಲಹರಿ 11ನೇ ಭಾಗವಾದ ಭಕ್ತಿ ಸಂಗೀತಕ್ಕೆ ಶ್ರೀ ಉತ್ತರಾದಿ ಮಠ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ ಚಾಲನೆ ನೀಡಿದರು. ಬಳಿಕ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಯಾವುದೇ ಸೌಕರ್ಯ, ಸೌಲಭ್ಯ, ಆಧುನಿಕ ಶಿಕ್ಷಣವಿಲ್ಲದ ಕಾಲದಲ್ಲಿ ಮಧ್ವರ, ಪುರುಂದರ ವಿಚಾರ, ಚಿಂತನೆ ಪ್ರಚುರಪಡಿಸಿದ ಕೀರ್ತಿ ವಿದ್ವಾಂಸರಿಗೆ ಸಲ್ಲಬೇಕು. ಮುಂದಿನ ಪೀಳಿಗೆಗೆ ಭಕ್ತಿ ಪರಂಪರೆ ತಲುಪಿಸುವ ಧೋರಣೆಯನ್ನು ಹಿರಿಯರ ಕಲ್ಪನೆಯಲ್ಲಿ ಕಾಣಬಹುದಾಗಿದ್ದು, ಬದುಕಿನ ಸಂಕೀರ್ಣತೆಗಾಗಿ ಇಂತಹ ಕಾರ್ಯಕ್ರಮ ಅವಶ್ಯಕ ಎಂದರಲ್ಲದೆ ದಾಸ ಸಾಹಿತ್ಯ ಉಳಿಸಿ ಬೆಳೆಸುವ ಉದ್ದೇಶದಿಂದ ಮೈಸೂರಿನಲ್ಲಿ ಕಳೆದ ಹಲವು ವರ್ಷಗಳಿಂದ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿಯಿಂದ ಅನೇಕ ವಿನೂತನ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಪುರಂದರದಾಸರು ಮಧ್ವರ ಶಿಷ್ಯರಾಗಿ ಕರ್ನಾಟಕ ಸಂಗೀತವನ್ನು ನಾಡಿನೆಲ್ಲೆಡೆ ಪ್ರಚುರ ಪಡಿಸಿದ್ದಾರೆ. ಮಧ್ವ-ಪುರಂದರ ಸ್ಮರಣೆ ನಮ್ಮ ಕರ್ತವ್ಯವಾಗಿದೆ. ಮುಖ್ಯವಾಗಿ ಬ್ರಾಹ್ಮಣ ಸಮುದಾಯದ ತ್ರಿಮತಸ್ಥರು ಒಗ್ಗಟ್ಟಾಗಬೇಕು. ಒಗ್ಗಟ್ಟಿನಿಂದಷ್ಟೇ ಸಮುದಾಯದ ಮುಂದಿರುವ ಸವಾಲುಗಳನ್ನು ಎದುರಿಸಲು ಸಾಧ್ಯ. ಕೆಲ ಅಲ್ಪರಿಂದ ಒಗ್ಗಟ್ಟಿನಲ್ಲಿ ಬಿರುಕಾಗುತ್ತಿದೆ. ಆದ್ದರಿಂದ ತ್ರಿಮತಸ್ಥ ಆಚಾರ್ಯರು ಒಂದೇ ವೇದಿಕೆಯಲ್ಲಿ ಸೇರಿ ಒಗ್ಗಟ್ಟಿನ ಕರೆ ನೀಡಬೇಕಾಗಿದೆ ಎಂದು ಹೇಳಿದರು.

ಭಕ್ತಿ ಸುಧೆ: ಬಳಿಕ ಪಂ.ಪ್ರವೀಣಾಚಾರ್ಯ ಹುನಗುಂದ ಹಾಗೂ ರಮೇಶ್ ಕುಲಕರ್ಣಿ ಅವರಿಂದ ಮಧ್ವ-ಪುರಂದರದಾಸ ಭಕ್ತಿಗಳ ಗಾಯನ ಕೇಳುಗರ ಮನದಲ್ಲಿ ಭಕ್ತಿ ಸುಧೆ ಹರಿಸಿತು. ಮಧುಸೂದನ್ ಆಚಾರ್ಯ, ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿಯ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಏ.13ರಿಂದ 23ರವರೆಗೆ ವಿಶ್ವವಿಖ್ಯಾತ ಬೆಂಗಳೂರು ಕರಗ



ಬೆಂಗಳೂರು: ವಿಶ್ವವಿಖ್ಯಾತ ಬೆಂಗಳೂರು ಕರಗ ಶಕ್ತ್ಯೋತ್ಸವಕ್ಕೆ ದಿನಾಂಕ ಫಿಕ್ಸ್ ಆಗಿದೆ. ಏಪ್ರಿಲ್ 15 ರಿಂದ 23ರವರೆಗೆ ಬೆಂಗಳೂರು ಕರಗ ಮಹೋತ್ಸವ ನಡೆಯಲಿದೆ. ಕರಗ ಉತ್ಸವ ಸಂಬಂಧ ಭಾನುವಾರ ಸಭೆ ನಡೆದಿತ್ತು. ಈ ಸಭೆಯಲ್ಲಿ ದಿನಾಂಕ ಫಿಕ್ಸ್ ಮಾಡಲಾಗಿದೆ. ಜೊತೆಗೆ ಮುಜರಾಯಿ ಇಲಾಖೆ ಮತ್ತು ಧರ್ಮರಾಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿಯು ಕರಗ ಹೊರಲು ಜ್ಞಾನೇಂದ್ರ ಸ್ವಾಮಿ ಅವರನ್ನು ಆಯ್ಕೆ ಮಾಡಿದೆ. ಯಾವುದೇ ಸಮಸ್ಯೆಯಾಗದಂತೆ ಶಾಸ್ತ್ರೋಕ್ತವಾಗಿ ಕರಗ ನಡೆಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಕಳೆದ ವರ್ಷ ಕೆಲ ಕಿಡಿಗೇಡಿಗಳು ಎ. ಜ್ಞಾನೇಂದ್ರ ಅವರ ಮೇಲೆ ಕೆಮಿಕಲ್ ಎರಚಿ ಕರಗಕ್ಕೆ ಅಡ್ಡಿಪಡಿಸಲು ಮುಂದಾಗಿದ್ದರು. ಆದರೂ ಜ್ಞಾನೇಂದ್ರ ಅವರು ಯಶಸ್ವಿಯಾಗಿ ದ್ರೌಪದಿದೇವಿ ಕರಗವನ್ನು ರಾಜಬೀದಿ ಉತ್ಸವ ಮುಗಿಸಿ ಧರ್ಮರಾಯ ಸ್ವಾಮಿ ದೇವಾಲಯ ತಲುಪಿಸಿದ್ದರು.

ಸಿಎಂ ಸಿದ್ದರಾಮಯ್ಯ ವಿರುದ್ಧದ ವಿಚಾರಣೆಗೆ ಸುಪ್ರೀಂಕೋರ್ಟ್ ತಡೆ



ಬೆಂಗಳೂರು: 2022 ರಲ್ಲಿ ರಾಜ್ಯದಲ್ಲಿ ನಡೆದಿದ್ದ ಪ್ರತಿಭಟನಾ ಮೆರವಣಿಗೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧದ ವಿಚಾರಣೆಗೆ ಸುಪ್ರೀಂಕೋರ್ಟ್ ಸೋಮವಾರ ತಡೆ ನೀಡಿದೆ. ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಪಿ.ಕೆ. ಮಿಶ್ರಾ ಅವರ ಪೀಠವು ಕರ್ನಾಟಕ ಸರ್ಕಾರ ಮತ್ತು ಪ್ರಕರಣದ ದೂರುದಾರರಿಗೆ ನೋಟಿಸ್ ಜಾರಿ ಮಾಡಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಸಚಿವರಾದ ಎಂ ಬಿ ಪಾಟೀಲ್ ಮತ್ತು ರಾಮಲಿಂಗಾ ರೆಡ್ಡಿ ಅವರಿಗೆ 10,000 ರೂಪಾಯಿ ದಂಡ ವಿಧಿಸಿದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದ್ದು, ಮಾರ್ಚ್ 6 ರಂದು ವಿಶೇಷ ನ್ಯಾಯಾಲಯ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಗೆ ಆಗ್ರಹಿಸಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬೆಂಗಳೂರಿನ ನಿವಾಸಕ್ಕೆ ಮುತ್ತಿಗೆ ಹಾಕಿದ ಕಾಂಗ್ರೆಸ್ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈಶ್ವರಪ್ಪ ತಮ್ಮ ಗ್ರಾಮದ ಸಾರ್ವಜನಿಕ ಕಾಮಗಾರಿಗೆ ಶೇ.40ರಷ್ಟು ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಪೊಲೀಸರ ಪ್ರಕಾರ ಈ ಪ್ರಕರಣ ರಸ್ತೆಗಳನ್ನು ಬಂದ್ ಮಾಡಿ, ಪ್ರಯಾಣಿಕರಿಗೆ ತೊಂದರೆ ಉಂಟು ಮಾಡಿದ್ದಕ್ಕೆ ಸಂಬಂಧಿಸಿದ್ದಾಗಿದೆ.

ಬಿಎಂಟಿಸಿ ನೌಕರರಿಗೆ 1 ಕೋಟಿ ರೂ. ಅಪಘಾತ ವಿಮೆ ಜಾರಿ

ಬೆಂಗಳೂರು: ಬಿಎಂಟಿಸಿ ನೌಕರರ ಕುಟುಂಬಕ್ಕೆ ಸಾರಿಗೆ ಇಲಾಖೆ ಗುಡ್‌ನ್ಯೂಸ್ ಕೊಟ್ಟಿದೆ. ಇನ್ನುಮುಂದೆ ಕೆಎಸ್‌ಆರ್‌ಟಿಸಿ ಮಾದರಿಯಲ್ಲೇ ಬಿಎಂಟಿಸಿ ನೌಕರರಿಗೂ 1 ಕೋಟಿ ರೂ. ಅಪಘಾತ ವಿಮೆ ಸಿಗಲಿದೆ.

ಇಂದಿನಿಂದಲೇ (ಫೆ.19) ಈ ವಿಮಾ ಸೌಲಭ್ಯ ಜಾರಿಯಾಗಿದ್ದು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚನೆ ಮೇರೆಗೆ ಈ ವಿಮಾ ಸೌಲಭ್ಯ ನೀಡಲಾಗಿದೆ ಬಿಎಂಟಿಸಿಯ 28,000 ನೌಕರರ ಕುಟುಂಬಕ್ಕೆ ಲಭಿಸಲಿದೆ.

ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ: ಹೊಸ ಘೋಷವಾಕ್ಯ ಚರ್ಚೆಗೆ ಗ್ರಾಸ!



ವಿಜಯಪುರ: ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಶಾಲೆಗಳ ಪ್ರವೇಶದ್ವಾರದಲ್ಲಿರುವ ಘೋಷವಾಕ್ಯ ಬದಲಾವಣೆ ವಿಚಾರ ಇದೀಗ ಭಾರಿ ಚರ್ಚೆಗೆ ಗ್ರಾಸವಾಗಿದೆ. ಈ ಮೊದಲು ಶಾಲೆಗಳ ಪ್ರವೇಶದ್ವಾರದಲ್ಲಿದ್ದ 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ" ಘೋಷವಾಕ್ಯವನ್ನು ಬದಲಾಯಿಸಲಾಗಿದೆ, 'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸು' ಎಂದು ಬದಲಾವಣೆ ಮಾಡಲಾಗಿದೆ.

ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರವೇಶ ದ್ವಾರದಲ್ಲಿ ಕುವೆಂಪು ಅವರ ಬರಹವನ್ನು ಬದಲಿಸಿ ವಿವಾದಕ್ಕೆ ನಾಂದಿ ಹಾಡಲಾಗಿದೆ. ಕುವೆಂಪು ಅವರ 'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಸಾಲುಗಳ ಬದಲಾಗಿ 'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ' ಎಂದು ಬರೆಯಲಾಗಿದೆ. ಮೊರಾರ್ಜಿ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪೋಷಕರು ಧೈರ್ಯವಾಗಿ ಪ್ರಶ್ನೆ ಮಾಡಲಿ ಎಂಬ ಉದ್ದೇಶದಿಂದ ಹೀಗೆ ಬರೆಯಲಾಗಿದೆ ಎನ್ನಲಾಗಿದೆ.

ಘೋಷವಾಕ್ಯ ಬದಲಾವಣೆಗೆ ಸರ್ಕಾರದಿಂದ ಯಾವುದೇ ಅಧಿಕೃತ ಆದೇಶ ವಿಲ್ಲ. ಆದೇಶ ನೀಡಿದರೆ ಮತ್ತೊಂದು ವಿವಾದಕ್ಕೆ ಕಾರಣವಾಗುತ್ತದೆಂದು ಆದೇಶವಿಲ್ಲದೆ ಕೇವಲ ಮೌಖಿಕವಾಗಿ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಘೋಷವಾಕ್ಯ ಬದಲಾವಣೆ ಮಾಡಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕ್ಯಾ.ಮಣಿವಣ್ಣನ್ ಸೂಚನೆ ಮೇರೆಗೆ ಘೋಷವಾಕ್ಯ ಬದಲಾವಣೆ ಮಾಡಲಾಗಿದೆ ಎನ್ನಲಾಗಿದೆ. ಮಕ್ಕಳ ಶಿಕ್ಷಣ ವಸತಿ ಊಟ ಸೇರಿದಂತೆ ವಸತಿ ಶಾಲೆಯ ಎಲ್ಲಾ ವಿಚಾರಗಳ ಕುರಿತು ಪ್ರಶ್ನೆ ಮಾಡಲಿ. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗಲಿ, ಪೋಷಕರು ಧೈರ್ಯವಾಗಿ ಮಾತನಾಡಲಿ ಎನ್ನುವ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬಡ ಶಾಲಾ ಮಕ್ಕಳ ಬ್ರೈನ್ ವಾಶ್ ಮಾಡಲು 'ಧ್ಯೇಯ ವಾಕ್ಯ' ಬದಲಾವಣೆ

ತಾಲಿಬಾನ್ ಮಾಡೆಲ್ ಜಾರಿಗೆ ಯತ್ನ: ಸರ್ಕಾರದ ವಿರುದ್ಧ ಬಿಜೆಪಿ ಕಿಡಿ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿನ 'ಧ್ಯೇಯ ವಾಕ್ಯ' ಬದಲಾವಣೆ ಕುರಿತು ರಾಜ್ಯ ಸರ್ಕಾರದ ವಿರುದ್ಧ ತೀವ್ರ ಕಿಡಿಕಾರಿರುವ ಪ್ರತಿಪಕ್ಷ ಬಿಜೆಪಿ, ಬಡ ಶಾಲಾ ಮಕ್ಕಳ ಬ್ರೈನ್ ವಾಶ್ ಮಾಡಲು 'ಧ್ಯೇಯ ವಾಕ್ಯ' ಬದಲಾವಣೆ ಮಾಡಲಾಗಿದೆ ಎಂದು ಕಿಡಿಕಾರಿದೆ.

ಸರ್ಕಾರಿ ಶಾಲೆಗಳಲ್ಲಿ 'ಜ್ಞಾನ ದೇಗುಲವಿದು.. ಕೈ ಮುಗಿದು ಒಳಗೆ ಬಾ' ಧ್ಯೇಯವಾಕ್ಯವನ್ನು 'ಜ್ಞಾನ ದೇಗುಲವಿದು.. ಧೈರ್ಯವಾಗಿ ಪ್ರಶ್ನಿಸು' ಎಂಬುದಾಗಿ ಬದಲಾಯಿಸಲಾಗಿದೆ. ಈ ಕುರಿತ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವೈರಲ್ ಆಗುತ್ತಿದೆ. ಇದೇ ವಿಚಾರವಾಗಿ ಇದೀಗ ರಾಜ್ಯ ಸರ್ಕಾರದ ವಿರುದ್ಧ ಪ್ರತಿಪಕ್ಷ ಬಿಜೆಪಿ ತೀವ್ರ ಕಿಡಿಕಾರಿದೆ. ಈ ಕುರಿತು ಟ್ವೀಟ್ ಮಾಡಿರುವ ಕರ್ನಾಟಕ ಬಿಜೆಪಿ, ಕುವೆಂಪು ಅವರ "ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬನ್ನಿ" ಎಂಬ ಧ್ಯೇಯವಾಕ್ಯವನ್ನು ಕಾಂಗ್ರೆಸ್ ಸರ್ಕಾರ ಬಡ ಶಾಲಾ ಮಕ್ಕಳ ಬ್ರೈನ್ ವಾಶ್ ಮಾಡಲು ಬದಲಾಯಿಸಿದೆ. ಈ ಮೂಲಕ ಹಿಂದುಳಿದ ಬಡ ವಿದ್ಯಾರ್ಥಿಗಳು ಹಿಂದೂ ಸಂಸ್ಕೃತಿ, ಸಂಸ್ಕಾರವನ್ನು ವಿರೋಧಿಸುವಂತೆ ವಿಷ ಬೀಜ ಬಿತ್ತಿ, ಎಡಬಿಡಂಗಿ ಸಿದ್ಧಾಂತವನ್ನು ಹೇರಲಾಗುತ್ತಿದೆ ಎಂದು ಹೇಳಿದೆ. ಅಲ್ಲದೆ ಸಮಾಜ ಕಲ್ಯಾಣ ಇಲಾಖೆ ಮೂಲಕ ಹಿಂದುಳಿದ, ದಲಿತ ಬಡ ಮಕ್ಕಳಿಗೆ ಮದರಸಾ ಶಿಕ್ಷಣ ನೀಡಿ ಬೀದಿಗೆ ಬಿಟ್ಟು ಪಿಎಫ್‌ಐ ಗೂಂಡಾಗಳಂತೆ ಕಲ್ಲು ತೂರಿಸಲು ಪ್ರಚೋದನೆ ಕೊಡುವ ಉದ್ದೇಶದ ಮೊದಲ ಹಂತವೇ ಇದು! "ತಾಲಿಬಾನ್ ಮಾಡೆಲ್" ಅನ್ನು ರಾಜ್ಯದಲ್ಲಿ ಜಾರಿಗೊಳಿಸಲು ಸಿದ್ದರಾಮಯ್ಯ ಅವರು ಹಂತ ಹಂತವಾಗಿ ಮುನ್ನುಡಿ ಇಟ್ಟಿದ್ದಾರೆ. ಬಡವರ ಮಕ್ಕಳನ್ನು ಹಳ್ಳಕ್ಕೆ ದೂಡಿ ಮಜಾ ತೆಗೆದುಕೊಳ್ಳುವುದೇ ಮಜಾವಾದಿ ಸರ್ಕಾರದ ಹಿಡನ್ ಅಜೆಂಡಾ ಎಂದು ಕಿಡಿಕಾರಿದೆ.


ವಸತಿ ಶಾಲೆಗಳಲ್ಲಿ ಘೋಷವಾಕ್ಯ ಏಕೆ ಬದಲಿಸಿದ್ದಾರೋ ಕಾರಣ ಗೊತ್ತಿಲ್ಲ



ಬೆಂಗಳೂರು: ಮೊರಾರ್ಜಿ ದೇಸಾಯಿ ವಸತಿ ಶಾಲೆ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಅನೇಕ ವಸತಿ ಶಾಲೆಗಳ ಪ್ರವೇಶ ದ್ವಾರದಲ್ಲಿ ಕುವೆಂಪು ಅವರ ಕವಿತೆಯ ಘೋಷವಾಕ್ಯ ಬದಲಾವಣೆಗೆ ಕಾರಣ ಏನೆಂಬುದು ಗೊತ್ತಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ವಿಧಾನಸೌಧದಲ್ಲಿ ಈ ಸಂಬಂಧ ಪ್ರತಿಕ್ರಿಯಿಸಿದ ಅವರು, ಯಾವ ನಿಟ್ಟಿನಲ್ಲಿ ಈ ರೀತಿಯಾಗಿ ಘೋಷವಾಕ್ಯ ಬದಲಾವಣೆ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಯಾಕೆಂದರೆ ಅದು ಕುವೆಂಪು ಅವರ ಕವಿತೆಯ ಸಾಲುಗಳು. ನಾವು ಕುವೆಂಪು ಆಶಯದ ರೀತಿಯಲ್ಲೇ ನಡೆದುಕೊಂಡು ಹೋಗುತ್ತೇವೆ ಎಂದು ಅವರು ಹೇಳಿದರು. ವಿದ್ಯೆ ಅಂದರೆ ಸರಸ್ವತಿ. ಕೈ ಮುಗಿಯುವುದು ನಮ್ಮ ಸಂಪ್ರದಾಯ. ಅದು ಭಿಕ್ಷೆ ಬೇಡುವುದು ಅಲ್ಲ ಎಂಬುದು ನನ್ನ ಅಭಿಪ್ರಾಯ. ಏನಾದರೂ ಉದಾಹರಣೆಗಾಗಿ ಆ ರೀತಿ ಮಾಡಿರಬಹುದು. ಮಕ್ಕಳ ಹಕ್ಕು ಚ್ಯುತಿಯಾಗಿ ಈ ರೀತಿ ಮಾಡಿದ್ದಾರೋ ಗೊತ್ತಿಲ್ಲ. ಕೈ ಮುಗಿದು ಒಳಗೆ ಬಂದು ನಿಮ್ಮ ಹಕ್ಕನ್ನು ಪ್ರತಿಪಾದಿಸಿ ಎಂದು ಇದ್ದರೆ ಚೆನ್ನಾಗಿ ಇರುತ್ತಿತ್ತು. ಬಿಜೆಪಿಯವರು ವಿರೋಧ ಮಾಡಲಿ. ಯಾವುದೇ ಕಾರಣಕ್ಕೂ ಕುವೆಂಪು ಅವರಿಗೆ ನಮ್ಮ ಸರ್ಕಾರ ಅವಮಾನ ಮಾಡಲ್ಲ ಎಂದು ಮಧು ಬಂಗಾರಪ್ಪ ಸ್ಪಷ್ಟ ಪಡಿಸಿದ್ದಾರೆ. ಕುವೆಂಪು ಅವರ ಕವಿತೆಯ ಸಾಲುಗಳನ್ನು ತೆಗೆಯದೇ ಇನ್ನಷ್ಟು ಚೆನ್ನಾಗಿ ಘೋಷವಾಕ್ಯ ಮಾಡಬಹುದಿತ್ತು. ಸರಸ್ವತಿ ಹಾಗೂ ಜ್ಞಾನಕ್ಕೆ ಜಾತಿ, ಧರ್ಮ ಇರಲ್ಲ. ಬಿಜೆಪಿ ಅವರು ಹೇಳಿದ್ದಾರೆ ಅಂತ ಬದಲಾವಣೆ ಮಾಡಬೇಕು ಅಂತೇನಿಲ್ಲ. ವೈಯಕ್ತಿಕವಾಗಿ ಇದನ್ನು ಇಟ್ಕೊಂಡು ಹಕ್ಕನ್ನು ಪ್ರತಿಪಾದಿಸು ಅಂತ ಇದ್ದರೆ ಒಳ್ಳೆಯದು. ಅದರಿಂದ ಅಂಬೇಡ್ಕರ್ ಅವರಿಗೂ ಗೌರವ ಕೊಟ್ಟಂತೆ ಆಗುತ್ತದೆ. ಕೈ ಮುಗಿದು ಒಳಗೆ ಬಾ ಅನ್ನೋದು ನಮ್ಮ ಸಂಪ್ರದಾಯ. ಹೊರದೇಶಗಳಲ್ಲೂ ಈ ಸಂಪ್ರದಾಯ ಪಾಲಿಸುತ್ತಾರೆ ಎಂದು ಮಧು ಬಂಗಾರಪ್ಪ ಹೇಳಿದರು.

ಧೈರ್ಯವಾಗಿ ಪ್ರಶ್ನಿಸಿ ಎಂದಿದ್ದರಲ್ಲಿ ತಪ್ಪಿಲ್ಲ: ಕುವೆಂಪು ಬರಹ ಬದಲಿಕೆಗೆ ಸರ್ಕಾರ ಸಮರ್ಥನೆ



ಬೆಂಗಳೂರು: ವಸತಿ ಶಾಲೆಗಳಲ್ಲಿ ಘೋಷವಾಕ್ಯ ಬದಲಾವಣೆ ವಿಚಾರ ಭಾರಿ ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ ಸರ್ಕಾರ ಈ ಬಗ್ಗೆ ಸಮರ್ಥನೆ ನೀಡಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿರುವ ಸಚಿವ ಪ್ರಿಯಾಂಕ್ ಖರ್ಗೆ, ಸಾಮಾಜಿಕ ಸ್ಥಿತಿಗಳ ತಕ್ಕಂತೆ ಬದಲಾವಣೆ ಆಗಬೇಕು. ಧೈರ್ಯವಾಗಿ ಪ್ರಶ್ನಿಸಿ ಎಂದಿದ್ದರಲ್ಲಿ ತಪ್ಪಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಕುತೂಹಲ ಇಲ್ಲ ಅಂದರೆ ಕಲಿಕೆ ಬರಲ್ಲ. ಕಲಿಕೆಯೇ ಬರಲಿಲ್ಲ ಎಂದರೆ ಜ್ಞಾನ ಬರಲ್ಲ. ಸಮಾಜದಲ್ಲಿ ಪ್ರಬುದ್ಧತೆ ಇರಲ್ಲ. ಪ್ರಬುದ್ಧ ಭಾರತ, ಪ್ರಬುದ್ಧ ಸಮಾಜ ಕಟ್ಟಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ಅದು ಬೆಳೆಯಬೇಕು ಎಂದರೆ ಪ್ರಶ್ನೆ ಮಾಡಲೇಬೇಕು ಅಲ್ಲವೇ ಎಂದು ಪ್ರಶ್ನಿಸಿದರು.

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಬೇಕು. ಅದಕ್ಕೆ ಪ್ರಶ್ನೆ ಕೇಳುವುದು ಮುಖ್ಯ. ಎಲ್ಲದಕ್ಕೂ ಉತ್ತರ ಸಿಗುವುದಿಲ್ಲ. ಪ್ರಶ್ನೆ ಮಾಡಿದರೆ ವೈಜ್ಞಾನಿಕ ಮನೋಭಾವ ಬೆಳೆಯುತ್ತೆ. ಶಿಕ್ಷಕರಿಗೆ ಹೊಸ ರೂಪದಲ್ಲಿ ಕಲಿಕೆ ಆಗುತ್ತದೆ ಎಂದು ಹೇಳಿದರು. ಇದೇ ವೇಳೆ ಹಿಂದೂ ಪರ ಸಂಘಟನೆಗಳ ಟೀಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾವೇನು ಬೇರೆ ವಿಚಾರ ಹೇಳಿಲ್ಲ. ಜ್ಞಾನಕ್ಕೆ ನಾವು ತಲೆಬಾಗಲೇಬೇಕು. ಗ್ರಂಥಾಲಯಗಳಿಗೆ ಅರಿವು ಕೇಂದ್ರ ಎಂದು ಬದಲಾವಣೆ ಮಾಡಿದ್ದೇವೆ. ಅರಿವೇ ಗುರು ಎಂದು ಬಸವಣ್ಣ ಹೇಳಿದ್ದಾರೆ. ಇದು ತಪ್ಪಾ?. ಅರಿವು ಮೂಡಿಸಲು ಏನು ಮಾಡಬೇಕು ಅದನ್ನು ಸರ್ಕಾರ ಮಾಡುತ್ತಿದೆ ಎಂದು ತಿಳಿಸಿದರು. ನಾಲೆಡ್ಜ್ ಬೇಸ್ ಸೊಸೈಟಿ ಕ್ರಿಯೇಟ್ ಮಾಡುತ್ತಿದ್ದೇವೆ. ವಿಶ್ವಗುರು ಆಗಬೇಕು ಎಂದರೆ, ಜ್ಞಾನಕ್ಕೆ ಅಗ್ರಸ್ಥಾನ ನೀಡಬೇಕು. ಹಾಸ್ಟೆಲ್‌ಗಳು ಎಲ್ಲ ವಸತಿ ಶಾಲೆಗಳು ಜ್ಞಾನ ಕೇಂದ್ರವಾಗಬೇಕು. ಆಗ ಪ್ರಬುದ್ಧ ಮತ್ತು ಸಮೃದ್ಧ ಭಾರತ ಕಟ್ಟಬಹುದು ಎಂದರು.

ದಿ.ಜಯಲಲಿತಾ ಒಡವೆ ಹಿಂದಿರುಗಿಸಲು ದಿನಾಂಕ ನಿಗದಿಪಡಿಸಿದ ಕೋರ್ಟ್: 6 ಟ್ರಂಕ್ ತರಲು ಸೂಚನೆ



ಬೆಂಗಳೂರು, ಫೆ. 19- ದಿ.ಜಯಲಲಿತಾ ವಿರುದ್ಧದ ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಪ್ತಿಯಾದ ಜಯಲಲಿತಾ ಒಡವೆಯನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸಲು ಕರ್ನಾಟಕ ಹೈಕೋರ್ಟ್ ಮಾರ್ಚ್ 6 ಮತ್ತು 7ರಂದು ದಿನಾಂಕ ನಿಗದಿಪಡಿಸಿದೆ. ಒಡವೆ ಸ್ವೀಕರಿಸಲು ತಮಿಳುನಾಡಿನಿಂದ ಇಬ್ಬರು ಅಧಿಕಾರಿಗಳ ನೇಮಕ ಮಾಡಲಾಗಿದೆ. ತಮಿಳುನಾಡು ಗೃಹ ಪ್ರಧಾನ ಕಾರ್ಯದರ್ಶಿ ಮತ್ತು ಐಜಿಪಿ ವಿಜಿಲೆನ್ಸ್ ಹಾಜರಿರಬೇಕು. ಒಡವೆ ತೆಗೆದುಕೊಂಡು ಹೋಗಲು 6 ಟ್ರಂಕ್‌ಗಳನ್ನು ತರುವಂತೆ ಕೋರ್ಟ್ ಸೂಚನೆ ನೀಡಿದೆ. ವಿಡಿಯೋಗ್ರಾಫರ್, ಫೋಟೋಗ್ರಾಫರ್, ಎರಡೂ ದಿನಗಳು ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಭದ್ರತೆ ಒದಗಿಸುವಂತೆ ವಿಶೇಷ ನ್ಯಾಯಾಧೀಶ ಮೋಹನ್‌ರಿಂದ ಸೂಚನೆ ನೀಡಲಾಗಿದೆ.

ಕರ್ನಾಟಕಕ್ಕೆ ಕೊಡಬೇಕಾದ 5 ಕೋಟಿ ರೂ. ವ್ಯಾಜ್ಯ ಶುಲ್ಕ ಇನ್ನೂ ಪಾವತಿಯಾಗಿಲ್ಲ. ಕೋರ್ಟ್‌ಗೆ ಎಸ್‌ಪಿಪಿ ಕಿರಣ್ ಜವಳಿ ಮಾಹಿತಿ ನೀಡಿದ್ದು, ಮುಂದಿನ ವಿಚಾರಣೆ ಮಾರ್ಚ್ 6ಕ್ಕೆ ನಿಗದಿಪಡಿಸಲಾಗಿದೆ. 1996ರಲ್ಲಿ ಜಯಲಲಿತಾ ಅವರು ಅಕ್ರಮ ಆಸ್ತಿಗಳಿಸಿದ್ದಾರೆಂಬ ಆರೋಪದಲ್ಲಿ ಸಿಬಿಐ ದಾಳಿ ಅಧಿಕಾರಿಗಳು ಮಾಡಿದ್ದರು. 1997ರಲ್ಲಿ ಪ್ರಕರಣದ ಚಾರ್ಜ್‌ಶೀಟ್ ಕೂಡ ಸಲ್ಲಿಕೆಯಾಗಿತ್ತು. ಇದರ ವಿಚಾರಣೆ ನಡೆದು ಶಿಕ್ಷೆ ಪ್ರಕಟವಾಗುವ ಮುನ್ನವೇ ಜಯಲಲಿತಾ ಅವರು 2016 ರಲ್ಲಿ ಮೃತಪಟ್ಟಿದ್ದರು.

ಜಯಲಲಿತಾ ಅವರು 1991ರಿಂದ 96 ನಡುವೆ ಆದಾಯ ಮೀರಿ ಆಸ್ತಿ ಗಳಿಸಿರುವ ಆರೋಪ ಕೇಳಿಬಂದಿತ್ತು. ಚೆನ್ನೈನಲ್ಲಿ ಐಷಾರಾಮಿ ಬಂಗಲೆಗಳನ್ನು ಹೊಂದಿದ್ದರು, ಹೈದರಾಬಾದ್ ಬಳಿ ಫಾರ್ಮ್ ಹೌಸ್, ತಮಿಳುನಾಡಿನ ನೀಲಗಿರಿ ಪ್ರದೇಶದಲ್ಲಿ ಭಾರಿ ಚಹಾ ತೋಟ, ಬೆಲೆಬಾಳುವ ಆಭರಣ, ಕಾರ್ಖಾನೆಗಳು, ಬ್ಯಾಂಕ್ ಖಾತೆಗಳಲ್ಲಿ ಸಂಪತ್ತು ಕ್ರೋಢೀಕರಣ, ಐಷಾರಾಮಿ ಕಾರುಗಳನ್ನು ಹೊಂದಿದ್ದರು. ಜೆ.ಜಯಲಲಿತಾ ಜತೆ ಸೇರಿ ಅಕ್ರಮ ಆಸ್ತಿ ಸಂಪಾದನೆಗೆ ಶಶಿಕಲಾ ಸಂಚು ನಡೆಸಿದ್ದರು. ಇತರೆ ಅಪರಾಧಿಗಳೊಂದಿಗೆ ಸೇರಿ ಒಳಸಂಚು ನಡೆಸಿದ್ದ ಶಶಿಕಲಾ, ಜಯಾ ಹಣದಿಂದಲೇ ಸಾವಿರಾರು ಎಕರೆ ಭೂಮಿ ಖರೀದಿಸಿದ್ದರು. ವಿವಿಧ ಕಂಪನಿಗಳು, ವೈಯಕ್ತಿಕ ಹೆಸರಿನಲ್ಲಿ ಜಮೀನು ಖರೀದಿಸಿದ್ದರು. ಜಯಲಲಿತಾ ಶಶಿಕಲಾರನ್ನು ಇರಿಸಿಕೊಂಡಿದ್ದಕ್ಕೆ ಕಾರಣವಿಲ್ಲ, ಮಾನವೀಯ ಅಥವಾ ಸಾಮಾಜಿಕ ಕಾರಣವಾಗಲೀ ಇಲ್ಲ. ಜಯಲಲಿತಾ ಆಸ್ತಿ ಹಂಚಿಕೊಳ್ಳಲೆಂದೇ ಇವರೆಲ್ಲರೂ ಜೊತೆಯಲ್ಲಿ ವಾಸವಾಗಿದ್ದರು ಎಂದು ಸುಪ್ರೀಂಕೋರ್ಟ್ ತಿಳಿಸಿತ್ತು. ಜಯಲಲಿತಾ ಗಳಿಸಿದ ಅಕ್ರಮ ಹಣ ವರ್ಗಾವಣೆಗೆ ಅಪರಾಧಿಗಳು ಸಂಚು ನಡೆಸಿದ್ದರು. ಅಕ್ರಮ ಹಣವನ್ನು ವಿವಿಧ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದರು. ಒಬ್ಬರ ಖಾತೆಯಿಂದ ಮತ್ತೊಬ್ಬರ ಖಾತೆಗೆ ಹಣ ವರ್ಗಾವಣೆಯಾಗಿತ್ತು. ಈ ಹಣದಿಂದಲೇ ಅಪರಾಧಿಗಳು ಅಕ್ರಮವಾಗಿ ಆಸ್ತಿ ಗಳಿಸಿದ್ದರು. ಅಪರಾಧಿಗಳು ಒಳಸಂಚಿನಲ್ಲಿ ಭಾಗಿಯಾಗಿದ್ದಕ್ಕೆ ಇದು ಸಾಕ್ಷಿ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿತ್ತು.

ಮೈಸೂರು ಮಿತ್ರ

ಮಂಗಳವಾರ, 20 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮಹತ್ತರವಾದ ಕಾರ್ಯಗಳನ್ನು ಸಾಧಿಸುವುದಕ್ಕಾಗಿ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅರಿಯಿರಿ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

ನಿಮ್ಮ ಪತ್ರಗಳು

■ ಡೈವೋರ್ಸ್ ಪೇಪರ್ @ ಕಿರುತೆರೆ!

ಮಾನ್ಯರೆ,

ತಾಯಿಯೊಬ್ಬರು ತಮ್ಮ ಮಗಳೊಂದಿಗೆ ಕೋರ್ಟಿಗೆ ಬಂದಿದ್ದರು. 'ಇಲ್ಲಿ ಡೈವೋರ್ಸ್ ಪೇಪರ್ ಎಲ್ಲಿ ಸಿಗುತ್ತೆ ?' ಎಂದು ವಕೀಲರನ್ನು ಪ್ರಶ್ನಿಸುತ್ತಿದ್ದರು. ಬಹುಶಃ ಅವರು ಧಾರಾವಾಹಿಗಳನ್ನು ನೋಡಿ ದಾರಿತಪ್ಪಿರಬಹುದು ಎಂದು ಭಾಸವಾಯಿತು! ಕಾರಣ.... ಬಹುತೇಕ ಕನ್ನಡದ ಕಿರುತೆರೆಯ ಎಲ್ಲಾ ಧಾರಾವಾಹಿಗಳಲ್ಲಿ ಡೈವೋರ್ಸ್ ಪೇಪರ್ಸ್‌ಗೆ ಸೈನ್ ತೆಗೆದುಕೊಳ್ಳುವ ಡೈಲಾಗ್ ಸರ್ವೇಸಾಮಾನ್ಯವಾಗಿದೆ.

ಧಾರಾವಾಹಿಯ ನಿರ್ದೇಶಕರಿಗೆ ಕಾನೂನಿನ ಕನಿಷ್ಠ ಜ್ಞಾನ ಇರದಿದ್ದರೂ ಕಾನೂನು ಸಲಹೆಯನ್ನಾದರೂ ಪಡೆದು ಕತೆ ಮಾಡಬಹುದು. ದಂಪತಿ ಪರಸ್ಪರ ಒಪ್ಪಿ ವಿವಾಹ ವಿಚ್ಛೇದನ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ, ಸಾಕ್ಷ್ಯ ನುಡಿದು ನ್ಯಾಯಾಲಯಕ್ಕೆ ಮನವರಿಕೆ ಮಾಡಿದರೆ ಮಾತ್ರ ನ್ಯಾಯಾಲಯವು ಡೈವೋರ್ಸ್ ನೀಡಬಹುದು.

ಅದರ ಹೊರತಾಗಿ ಡೈವೋರ್ಸ್ ಪೇಪರ್ಸ್‌ಗೆ ಸಹಿ ಪಡೆದೊಡನೆ ಡೈವೋರ್ಸ್ ಆಗಿಬಿಡುತ್ತದೆ ಎಂಬುದು ನಿರ್ದೇಶಕರ ಮೂರ್ಖತನ! ಮಳೆ ಬರುವುದಕ್ಕಾಗಿ ಕಪ್ಪೆ ಮದುವೆ ಮಾಡುವುದಕ್ಕೂ ಧಾರಾವಾಹಿಗಳಲ್ಲಿ ಡೈವೋರ್ಸ್ ನೀಡುವುದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಟಿವಿಯನ್ನು ಮೂರ್ಖರ ಪೆಟ್ಟಿಗೆ ಎಂದು ಕರೆಯುವುದಕ್ಕೆ ಇಂತಹ ಧಾರಾವಾಹಿಗಳ ನಿರ್ದೇಶಕರ ಡೈವೋರ್ಸ್ ಪೇಪರ್ಸುಗಳೇ ಕಾರಣ!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಜನಪ್ರತಿನಿಧಿಗಳು ಜವಾಬ್ದಾರಿ ಅರಿತು ನಡೆಯಿರಿ

ಮಾನ್ಯರೆ,

ಪ್ರಜೆಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನೇ ಮರೆತಂತಿದೆ. ಜನರ ಆಶೋತ್ತರಗಳನ್ನು ಈಡೇರಿಸಬೇಕಾದ ಜನಪ್ರತಿನಿಧಿಗಳು ಪ್ರಚಾರಕ್ಕಾಗಿ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಅದರಲ್ಲೂ ರಾಜ್ಯದ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವಾಗ ಶಾಂತಿಯುತವಾಗಿ ಕುಳಿತು ಕೇಳಿಸಿಕೊಳ್ಳಬೇಕು ಎಂಬ ಅರಿವಿಲ್ಲದೆ ಭಿತ್ತಿಪತ್ರಗಳನ್ನು ಹಿಡಿದು ಪ್ರತಿಭಟನೆ ಮಾಡುವುದು ನಿಮ್ಮ ಸ್ಥಾನಕ್ಕೆ ಶೋಭೆ ತರುವುದಿಲ್ಲ. ಬಜೆಟ್ ಮುಗಿದ ನಂತರ ಬಜೆಟ್ ಮೇಲಿನ ಚರ್ಚೆಗೆ ಮತ್ತು ಆಡಳಿತ ಪಕ್ಷ ಅದಕ್ಕೆ ಉತ್ತರಿಸುವುದಕ್ಕೆ ಪ್ರತ್ಯೇಕ ಸಮಯವಿದೆ ಎಂಬುದು ನಿಮಗೆ ಅರಿವಿಲ್ಲವೇ? ನಿಮ್ಮ ಪ್ರಚಾರಕ್ಕಾಗಿ ಅಧಿವೇಶನ ಸಮಯವನ್ನು ವ್ಯರ್ಥ ಮಾಡದೆ ಬರ ಸಂಕಷ್ಟದಲ್ಲಿರುವ ರಾಜ್ಯದ ಜನತೆಯ ಬಗ್ಗೆ ಆರೋಗ್ಯಕರ ಚರ್ಚೆ ನಡೆಸಿ ಪರಿಹಾರವನ್ನು ಕಂಡುಕೊಳ್ಳಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಿರುವುದು ಸ್ವಾಭಾವಿಕ. ಆಡಳಿತ ಪಕ್ಷಗಳು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಹಾಗೂ ವಿರೋಧ ಪಕ್ಷಗಳು ರಚನಾತ್ಮಕ ಟೀಕೆಗಳ ಮೂಲಕ ಸಹಕರಿಸಬೇಕು. ಆಗ ಮಾತ್ರ ಜನರ ಆಶೋತ್ತರಗಳನ್ನು ಈಡೇರಿಸಲು ಸಾಧ್ಯ.

–ಕೆ.ಎಸ್.ಸುರೇಶ್, ಶಿಕ್ಷಕರು, ಹೆಚ್.ಡಿ.ಕೋಟೆ.

■ ಸಿದ್ದರಾಮಯ್ಯನವರ ಬಜೆಟ್ : ಶ್ರೀಮಂತ ವರ್ಗದವರಿಗೆ ಮಣೆ

ಮಾನ್ಯರೆ,

ಈ ಸಾಲಿನ ರಾಜ್ಯ ಬಜೆಟ್, ಮಂಡನೆಯಾಗಿದೆ. ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ತವರು ಜಿಲ್ಲೆ ಮೈಸೂರಿಗೆ ಈ ಸಾಲಿನ ಬಜೆಟ್‌ನಲ್ಲೂ, ಮೈಸೂರು ನಗರಕ್ಕೆ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಲಿಲ್ಲ.

ಕಳೆದ ಎರಡು ತಿಂಗಳ ಹಿಂದೆ, ಮೈಸೂರಿನ ಹಲವು ಕನ್ನಡ ಸಂಘ – ಸಂಸ್ಥೆಗಳು ಈ ಸಾಲಿನ ಬಜೆಟ್‌ನಲ್ಲಾದರೂ, ಮೈಸೂರಿಗೊಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಿ ಎಂದು ಪ್ರತಿಭಟನೆ ಮಾಡಿ, ಬೇಡಿಕೆ ಸಲ್ಲಿಸಿದ್ದರು. ಅದನ್ನು ಪರಿಗಣಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದರು. ಆದರೆ ಕಡೆಗೂ ಮಂಜೂರು ಮಾಡಲಿಲ್ಲ. ಮೈಸೂರು ನಗರದಲ್ಲಿ 9 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿದ್ದು, ಇವುಗಳೆಲ್ಲಾ ಒಂದು ರೀತಿಯಲ್ಲಿ ಶ್ರೀಮಂತ ವರ್ಗದ ಪಾಲಾಗಿವೆ. ಆದರೆ ಬಡ– ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕಡೆಗಣಿಸಿದಂತೆ ಆಗಿದೆ. ಇದು ಒಂದು ರೀತಿಯಲ್ಲಿ ಶ್ರೀಮಂತ ವರ್ಗದವರಿಗೆ ಮಣೆ ಹಾಕಿದಂತಾಗಿದೆ.

–ಬೂಕನಕೆರೆ ವಿಜೇಂದ್ರ,ಕುವೆಂಪು ನಗರ, ಮೈಸೂರು

■ ನಿರಂತರವಾಗಿ ನೀರು ಸರಬರಾಜು ಮಾಡಲಿ

ಮಾನ್ಯರೆ,

ನಾವು ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುತ್ತೇವೆ. ನಮಗೆ ಕಬಿನಿ ನದಿಯ ನೀರು ಬರುತ್ತದೆ ಎನ್ನುತ್ತಾರೆ. ಈ ಮೊದಲು ನೀರು ದಂಡಿಯಾಗಿ ಬರುತ್ತದೆ ಎನ್ನಲಾಗದಿದ್ದರೂ ಪರವಾಗಿರಲಿಲ್ಲ. ಆದರೆ ಈಗ ಮೂರು ದಿನದಿಂದ ಒಂದು ಹನಿ ನೀರು ಬಂದಿಲ್ಲ. ಕುಡಿಯಲು ಇರಲಿ ಶೌಚಾಲಯಕ್ಕೆ ಹೋದರೂ ತೊಳೆಯಲು ನೀರಿಗೆ ತತ್ವಾರ ಆಗಿದೆ. ತಮಿಳುನಾಡಿಗೆ ದಾನಶೂರರಂತೆ ನೀರು ಬಿಟ್ಟ ಪರಿಣಾಮ ಪುಗಸಟ್ಟೆ ಭಾಗ್ಯ ನೀಡಿದ ಸರ್ಕಾರವು ಜನಗಳಿಗೆ ಮೂಲಭೂತ ಸೌಲಭ್ಯವಾದ ನೀರನ್ನು ನಿರಂತರವಾಗಿ ಸರಬರಾಜು ಮಾಡಲಿ.


– ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ.

■ ಸಂಪರ್ಕಗಳ ಸ್ಪಂದನ ಕಾರ್ಯಕ್ರಮದಲ್ಲಿ ವಿಶೇಷ ಚೇತನರಿಗೆ, ವೃದ್ಧರಿಗೆ ಮೊದಲ ಆದ್ಯತೆ ನೀಡಿ

ಮಾನ್ಯರೆ,

ಹಲವಾರು ಸಂದರ್ಭದಲ್ಲಿ ಜನಸ್ಪಂದನೆ ಕಾರ್ಯಕ್ರಮ ನಡೆಯುತ್ತದೆ. ಇದರಲ್ಲಿ ಸಾರ್ವಜನಿಕರು ಕುಂದುಕೊರತೆ ಹಾಗೂ ಉದ್ಯೋಗ ಮಾಹಿತಿಗಳ ಬಗ್ಗೆ ಇದೇ ತರಹದ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ. ಈ ಕಾರ್ಯಕ್ರಮದಲ್ಲಿ ವಯೋಮಾನದ ಮಿತಿ ಇಲ್ಲದೆ ಜನರು ಭಾಗವಹಿಸುತ್ತಾರೆ. ಮನದ ಬಯಕೆಯನ್ನು ಈಡೇರಿಸಿಕೊಳ್ಳಲು ಸಮಸ್ಯೆಗಳನ್ನು ಹೇಳಿಕೊಳ್ಳಲು ಬಿಸಿಲು, ಮಳೆ ಎನ್ನದೆ ಕಾಯುತ್ತಾ ಇರುತ್ತಾರೆ. ಇಂತಹ ಕಾರ್ಯಕ್ರಮಗಳಲ್ಲಿ ವಿಶೇಷಚೇತನರು, ವೃದ್ಧರು, ಅನಾರೋಗ್ಯ ಪೀಡಿತರು ಆಗಮಿಸಿ ಗಂಟಾನುಗಟ್ಟಲೆ ಸರತಿ ಸಾಲಿನಲ್ಲಿ ಕಾಯುತ್ತಾ ಇರುತ್ತಾರೆ. ಇವರಿಗೆ ತಿಂಡಿ ಊಟದ ಸಮಯ ಮೀರಿ ಬಿಸಿಲಿನ ತಾಪವು ಹೆಚ್ಚಾಗಿ ನಿಶ್ಶಕ್ತಿಯಿಂದ ನಿಲ್ಲಲು ತ್ರಾಣವಿಲ್ಲದೆ ಕೆಲವೊಮ್ಮೆ ಪ್ರಜ್ಞೆ ತಪ್ಪಿದ ಘಟನೆಗಳು ನಡೆದಿರುತ್ತದೆ. ಆದ್ದರಿಂದ ಇಂತಹವರನ್ನು ಸರದಿ ಸಾಲಿನಲ್ಲಿ ನಿಲ್ಲಿಸದೆ ನೇರ ಭೇಟಿ ಮಾಡಲು ಅವಕಾಶ ನೀಡಿ. ಇದರಿಂದ ಇವರ ಕೆಲಸ ಕಾರ್ಯಗಳು ಮುಗಿದ ಕೂಡಲೇ ಸುರಕ್ಷಿತವಾಗಿ ಮನೆಗೆ ಹೋಗಲು ಅನುಕೂಲವಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬೇಸರವಾಗ್ತಿದೆ ಬೇಸಾಯ...!?

ದಿನಗಳೆದಂತೆ ಜೀವನ ದುಸ್ತರವಾಗುತ್ತಿದೆ ಎನ್ನಿಸುತ್ತಿದೆ. ಬವಣೆಪಡುವವರ ಸ್ಥಿತಿಯಂತೂ ನಿರಂತರ ಬವಣೆ ಬದುಕು ಎಂಬಂತಾಗಿದೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾದರೆ ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ. ಮಧ್ಯಮ ವರ್ಗದವರ ಬದುಕು ಆರಕ್ಕೆ ಏರಲಾಗದೆ ಮೂರಕ್ಕೆ ಇಳಿಯಲಾಗದೆ ಪರಿತಪಿಸುವಂತಾಗುತ್ತಿದೆ. ದಿನಬಳಕೆ ವಸ್ತುಗಳು ಪೈಪೋಟಿಯಲ್ಲಿ ದುಬಾರಿಯಾಗುತ್ತಾ ಸಾಗುತ್ತಿವೆ. ಇಂದಿನ ಬೆಲೆ ನಾಳೆಗಿಲ್ಲ ಎಂಬಂತೆ. ಇದನ್ನು ತಪ್ಪಿಸಲು ಒಂದಷ್ಟು ವಸ್ತುಗಳನ್ನು ಹೆಚ್ಚಾಗಿ ಖರೀದಿ ಮಾಡಿಟ್ಟುಕೊಳ್ಳಲೂ ಆಗುತ್ತಿಲ್ಲ. ಪದಾರ್ಥಗಳ ಗುಣಮಟ್ಟ ಹೀಗೆ ಹೆಚ್ಚು ಹೊಂದಿಸಿಟ್ಟುಕೊಳ್ಳಲೂ ಆಗದ ಸ್ಥಿತಿಯಂತಾಗಿದೆ. ಕಾಳಸಂತೆ ನಿಯಂತ್ರಿಸುವವರು ಯಾರ ಬಗ್ಗೆಯೂ ಅನುಕಂಪ ಇಟ್ಟುಕೊಳ್ಳದೆ ತಮ್ಮ ಲಾಭ ಗಳಿಕೆಯತ್ತಲೇ ಗಮನ ಹರಿಸುತ್ತಾರೆ. ಬೆಳೆ ಬೆಳೆಯುವ ರೈತನಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಇದನ್ನೆಲ್ಲಾ ಗಮನಿಸಿದಾಗ ಜೀವನ ದುರ್ಬರವಾಗುತ್ತಿದೆಯೇನೋ ಎನಿಸತೊಡಗಿದೆ. ಅಲ್ಲದೆ ಹೇಗೋ ದುಡ್ಡು ಹೊಂದಿಸಿ ಒಂದಷ್ಟು ಮನೆ ಸಾಮಾನುಗಳನ್ನು ಖರೀದಿಸಿದರೂ ಅದರ ಗುಣಮಟ್ಟ ಅಷ್ಟಕ್ಕಷ್ಟೇ ಎಂಬಂತಾಗಿಬಿಟ್ಟಿದೆ.

ಇದಕ್ಕೆ ಪರಿಹಾರವೇ ಇಲ್ಲವೇನೋ? ಎನ್ನಿಸುತ್ತದೆ. ಇಂತಹ ದುರವಸ್ಥೆಗೆ ಮುಖ್ಯವಾಗಿ ಅಪನಂಬಿಕೆ ಕಾರಣ. ನಮ್ಮಲ್ಲಿ ಈ ಹಿಂದೆ ಹಣದ ವಹಿವಾಟು ಆರಂಭವಾಗುವ ಮುಂಚೆ ಎಲ್ಲವನ್ನೂ ದವಸ–ಧಾನ್ಯಗಳ ಮೂಲಕ ಅಳೆಯಲಾಗುತ್ತಿತ್ತು, ನಿರ್ಧರಿಸಲಾಗುತ್ತಿತ್ತು.

ಅಂದರೆ ವಿನಿಮಯ ಪದ್ಧತಿ: ನನ್ನ ಹತ್ತಿರ ಎರಡು ಮೂಟೆ ಭತ್ತ ಇದೆ ಎಂದಾದರೆ ಅದಕ್ಕೆ ಏನೇನು ದೊರಕಬಹುದು? ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಒಂದು ಮೂಟೆ ಭತ್ತಕ್ಕೆ ಇಷ್ಟು ಬೇಳೆ, ಇಷ್ಟು ಎಣ್ಣೆ, ಇಷ್ಟು ಬಟ್ಟೆ ಇತ್ಯಾದಿಗಳ ಲೆಕ್ಕವಾಗುತ್ತಿತ್ತು. ಭತ್ತ ಬೆಳೆದವನು ಭತ್ತ/ಅಕ್ಕಿಯಿಂದಲೇ ಜೀವನ ಮಾಡಲಾಗುವುದಿಲ್ಲ. ತನಗೆ ಬೇಕಾದಷ್ಟು ಭತ್ತವನ್ನು ಇರಿಸಿಕೊಂಡು ಉಳಿದಿದ್ದನ್ನು ತನ್ನ ಅಗತ್ಯತೆಗೆ ತಕ್ಕ ಹಾಗೆ ಬೇಳೆ, ಎಣ್ಣೆ ಇತ್ಯಾದಿಗಳನ್ನು ಖರೀದಿಸುತ್ತಿದ್ದ. ಒಂದು ಮೂಟೆ ಭತ್ತದ ಬೆಲೆ ಇಂತಿಷ್ಟು ಎಂದು ಸಂದರ್ಭಕ್ಕೆ ತಕ್ಕಂತೆ ನಿರ್ಧಾರವಾಗುತ್ತಿತ್ತು. ಇದು ಒಂದು ರೀತಿಯ ಸಹಕಾರದ ರೀತಿ. ನಾನು ಇದನ್ನು ಕೊಡುತ್ತೇನೆ, ಅದಕ್ಕೆ ಪ್ರತಿಯಾಗಿ ನಿನ್ನಲ್ಲಿರುವ ಪದಾರ್ಥದಲ್ಲಿ ಇಷ್ಟನ್ನು ನನಗೆ ಕೊಡಬೇಕು. ಅದರಂತೆಯೇ ಜೀವನ ನಡೆಯುತ್ತಿತ್ತು. ಯಾರಾದರೂ ಪಡೆದ ಮೌಲ್ಯಕ್ಕೆ ತಕ್ಕುದಾದ ಪದಾರ್ಥ ಕೊಡದಿದ್ದರೆ ನ್ಯಾಯಪಂಚಾಯತಿಯಲ್ಲಿ ದೂರು ದಾಖಲಾಗುತ್ತಿತ್ತು. ನ್ಯಾಯಾಧೀಶರು, ಅಂದರೆ ಪಂಚರು, ಪ್ರಕರಣದ ವಿಚಾರಣೆಯನ್ನು ನ್ಯಾಯಬದ್ಧವಾಗಿ ನಡೆಸಿ ತೀರ್ಪು ನೀಡುತ್ತಿದ್ದರು. ಅದನ್ನು ಉಭಯತ್ರರೂ ಒಪ್ಪಿಕೊಳ್ಳಬೇಕಾಗಿತ್ತು. ಹೀಗೆಯೇ ನೂರಾರು ವರ್ಷಗಳು ನೆಮ್ಮದಿಯ ಸಮಾಜ ನಡೆಯುತ್ತಿತ್ತು.

ಯಾವಾಗ ಹಣದ ಪರಿಚಯ, ಚಲಾವಣೆ ಬಂದಿತೋ ಆಗ ಮೌಲ್ಯ ಪದಾರ್ಥಕ್ಕಿಂತ ಹಣಕ್ಕೆ ಪ್ರಾಧಾನ್ಯತೆ ದೊರೆಯಿತು. ನನ್ನಲ್ಲಿ ಇಷ್ಟು ಹಣವಿದೆ, ಇದು ನನಗೆ ಬೇಕು ಎಂದರೆ ಮಾರುವವನು ಲಾಭದ ದೃಷ್ಟಿಯಿಂದ ಇಂತಿಷ್ಟು ನೀಡುವುದು ಎಂದಾಯಿತು. ಅಲ್ಲಿ ವ್ಯಾಪಾರಿ ಮನೋಭಾವ ಆರಂಭವಾಯಿತು. ಅಲ್ಲಿಯವರೆಗೆ ಊರವರು ನಾವೆಲ್ಲಾ ಒಂದು ಎಂಬ ಭಾವನೆ ಇಟ್ಟುಕೊಂಡಿದ್ದವರಲ್ಲಿ ಪ್ರತ್ಯೇಕ ಭಾವನೆ ಬೆಳೆಯತೊಡಗಿದವು. ಊರಿನ ಪಂಚರ ನ್ಯಾಯವನ್ನು ನಾವು ಒಪ್ಪಲೇಬೇಕೆಂದಿಲ್ಲ ಎಂಬ ಮನೋಭಾವ ಮೂಡತೊಡಗಿತು. ಇದರಿಂದಾಗಿ ಹಣವಿದ್ದವನು ಕೆಲವು ಆಹಾರ ಪದಾರ್ಥಗಳನ್ನು ತನ್ನಲ್ಲಿರುವ ಹಣದಿಂದ ಹೆಚ್ಚಾಗೇ ಖರೀದಿಸಿ ತನ್ನ ಗೋದಾಮಿನಲ್ಲಿ ಶೇಖರಿಸಿಟ್ಟು, ಮುಂದೆ ಮಾರುಕಟ್ಟೆಯಲ್ಲಿ ಆ ಪದಾರ್ಥದ ಕೊರತೆ ಉಂಟಾದಾಗ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾರಂಭಿಸಿದರು. ಆದರೆ ಜೀವಿಸಲು ಆಹಾರ ಪದಾರ್ಥ ಅನಿವಾರ್ಯ ಎಂದಾದಾಗ ಜನರು ಹೆಚ್ಚಿನ ಬೆಲೆಗೆ ಅದನ್ನು ಕೊಳ್ಳಲೇಬೇಕಾಯಿತು. ಇದೊಂದು ರೀತಿಯ ಶೋಷಣೆ.

ಇತ್ತೀಚೆಗೆ ಭೇಟಿಯಾದ ಒಬ್ಬ ಕೃಷಿತಜ್ಞರೊಡನೆ ಮಾತನಾಡಿದಾಗ ಈಗಲೂ ನಾವು ಸಹಕಾರ ತತ್ವವನ್ನು ಸರಿಯಾಗಿ ಅಳವಡಿಸಿಕೊಂಡರೆ ಜೀವನದಲ್ಲಿ ಸ್ವಲ್ಪ ನೆಮ್ಮದಿ ಕಾಣಬಹುದು ಎಂದರು. ಆದರೆ ಇದಕ್ಕೆ ಅಡ್ಡಿಯಾಗುವುದು ನಮ್ಮ ಅಹಮಿಕೆ ಎಂದರು. ಇಂದು ಗ್ರಾಮಗಳಲ್ಲಿ ಜಮೀನಿನಲ್ಲಿ ದುಡಿಯುವವರು, ಕೂಲಿ ಕೆಲಸದವರು ಸಿಗುವುದು ಕಷ್ಟ, ಆದ್ದರಿಂದ ವ್ಯವಸಾಯ ಮಾಡುವುದು ಕಷ್ಟವಾಗುತ್ತಿದೆ ಎಂದು ಜಮೀನು ಹೊಂದಿರುವವರು ಹೇಳುತ್ತಾರೆ. ಭತ್ತ, ಕಬ್ಬು ಬೆಳೆದುನಿಂತು ಕಟಾವು ಮಾಡಬೇಕಾದಾಗ ಕೂಲಿಕಾರರು ದೊರಕದೆ ಪಾಡುಪಡಬೇಕಾಗುತ್ತಿದೆ. ಆಗೆಲ್ಲಾ ವ್ಯವಸಾಯವೇ ಬೇಡ ಎನಿಸುವಂತಾಗುತ್ತದೆ ಎಂದು ವ್ಯವಸಾಯ ಮಾಡುವವರು ಹೇಳುತ್ತಾರೆ.

ಕೆಲಸಕ್ಕೆ ಜನರು ಸಿಗುವುದಿಲ್ಲ ಎಂದರೆ, ಗ್ರಾಮದ ಯುವಕರು ಯಾವ ಕೆಲಸ ಮಾಡುತ್ತಾರೆ? ಅವರ ಜೀವನ ನಿರ್ವಹಣೆ ಹೇಗೆ ಮಾಡುತ್ತಾರೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಗ್ರಾಮದ ಯುವಕರೂ ಸ್ವತಃ ಅಲ್ಪಸ್ವಲ್ಪ ಜಮೀನು ಹೊಂದಿದವರೇ. ಆದರೆ ಜಮೀನು ಮಳೆಯಾಶ್ರಿತ. ಮಳೆ ಇಲ್ಲವೆಂದಾಗ ಬೆಳೆ ಬೆಳೆಯಲಾಗದು. ಜಮೀನಿನ ಕೆಲಸ ಇಲ್ಲವೆಂದಾದರೆ, ಜಮೀನು ಇರುವವರ ಜಮೀನಿನಲ್ಲಿ ಕೆಲಸ ಮಾಡಬಹುದು. ಆದರೆ ಇಲ್ಲಿ ಅಹಮಿಕೆ ಕೆಲಸ ಮಾಡುತ್ತದೆ. ಅವರೂರಿನಲ್ಲಿ ಪರಿಚಯವಿರುವವರ ಜಮೀನಿನಲ್ಲಿ ಕೂಲಿ ಕೆಲಸ ಮಾಡಲು ಅವರಿಗೆ ಮನಸ್ಸು ಒಪ್ಪದು. ಹಾಗಾಗಿ ಜಮೀನಿನ ಕೆಲಸಕ್ಕೆ ಹೋಗುವುದಿಲ್ಲ. ಆದರೆ ಹಣ ಬೇಕು. ಕೊನೆಗೆ ಅವರು ಆರಿಸಿಕೊಳ್ಳುವುದು ಪಟ್ಟಣದ ಕೂಲಿ ಕೆಲಸವನ್ನು, ಅದರಲ್ಲೂ ಕಟ್ಟಡ ನಿರ್ಮಾಣದ ಕೆಲಸ. ಬೆಳಿಗ್ಗೆ ಬಂದರೆ ಸಂಜೆಯಾಗುತ್ತಿದ್ದಂತೆ ಕೂಲಿ ಪಡೆದು ಊರಿಗೆ ಮರಳುತ್ತಾರೆ. ಇನ್ನು ಕೆಲವರು ತಮ್ಮದಲ್ಲದ ಜಮೀನಿನಲ್ಲಿ ದುಡಿಯಲು ಇಷ್ಟವಿಲ್ಲ. ಅದೇ ರೀತಿ ಊರಿನ ಅರಳಿಕಟ್ಟೆಯ ಬಳಿ ಅಥವಾ ಬಸ್ ನಿಲ್ದಾಣದ ಬಳಿಯ ಟೀ ಅಂಗಡಿಯಲ್ಲಿ ಸಾಕಷ್ಟು ಯುವಕರು ಕಂಡುಬರುತ್ತಾರೆ. ಅವರು ಎಲ್ಲಿಯೂ ಕೆಲಸಕ್ಕೆ ಹೋಗುವುದಿಲ್ಲ. ಅವರಿಗೆ ಬೇಸಾಯ ಹೊರತುಪಡಿಸಿ ಬೇರೆ ಕೆಲಸ ಗೊತ್ತಿಲ್ಲ. ಬೇರೆಯವರ ಜಮೀನಿನಲ್ಲಿ ದುಡಿಯಲು ಮನಸ್ಸಿಲ್ಲದೆ ಟೀ ಅಂಗಡಿಗಳ ಮುಂದೆ ನಿಂತು ಕೂತು ಕಾಲಹರಣ ಮಾಡುತ್ತಾರೆ. ಜಮೀನಿದ್ದವರಿಗೆ ಕೆಲಸಗಾರರು ಸಿಗುವುದಿಲ್ಲ. ಕೆಲಸವಿಲ್ಲದವರಿಗೆ ಕೆಲಸ ಮಾಡಲು ಇಚ್ಛೆ ಇಲ್ಲ. ಹೀಗೆ ಗೊಂದಲದ ವಾತಾವರಣ ಎಲ್ಲೆಡೆ ಕಂಡುಬರುತ್ತದೆ. ಕೆಲಸವಿಲ್ಲದ ಯುವಕರನ್ನು ಈ ಕುರಿತು ಮಾತನಾಡಿಸಿದರೆ ಅದೇ ಸಿದ್ಧಾಂತ ಹೇಳುತ್ತಾರೆ. ನಮಗೆ ಜಮೀನಿನ ಕೆಲಸ ಮಾಡುವ ಆಸೆ. ಆದರೆ ನಮಗಿರುವುದು ಸ್ವಲ್ಪ ಜಮೀನು. ಅಲ್ಲಿ ಹೆಚ್ಚು ಬೆಳೆ ಬೆಳೆಯಲಾಗುವುದಿಲ್ಲ. ಬೆಳೆದರೂ ಅದು ನಮ್ಮ ಮನೆಗೇ ಸಾಕಾಗುವುದಿಲ್ಲ. ಜೊತೆಗೆ ಜಮೀನಿಗೆ ನೀರಿನ ಕೊರತೆ. ಹಾಗಾಗಿ ಏನೂ ಮಾಡಲಾಗದ ಪರಿಸ್ಥಿತಿ ನಮ್ಮದಾಗಿದೆ, ನಮಗೆ ಕೂಲಿ ಕೆಲಸ ಮಾಡಲೂ ಮನಸ್ಸಿಲ್ಲ. ಹಾಗಾಗಿ ನಿರುದ್ಯೋಗಿಗಳಾಗಿ ಕಾಲ ಕಳೆಯುತ್ತಿದ್ದೇವೆ ಎನ್ನುತ್ತಾರೆ. ಅವರಲ್ಲಿ ಕ್ರಮೇಣ ಸೋಮಾರಿತನ ಆವರಿಸುತ್ತದೆ. ಮುಂದೆ ಅವರು ಯಾವ ಕೆಲಸಕ್ಕೂ ಬಾರದವರಾಗಿ ಬಿಡುವ ಅಪಾಯವಿದೆ.



ಜಮೀನಿದ್ದವರಿಗೆ ಕೆಲಸಗಾರರು ಸಿಗುವುದಿಲ್ಲ. ಕೆಲಸವಿಲ್ಲದವರಿಗೆ ಕೆಲಸ ಮಾಡಲು ಇಚ್ಛೆ ಇಲ್ಲ. ಹೀಗೆ ಗೊಂದಲದ ವಾತಾವರಣ ಎಲ್ಲೆಡೆ ಕಂಡುಬರುತ್ತದೆ. ಕೆಲಸವಿಲ್ಲದ ಯುವಕರನ್ನು ಈ ಕುರಿತು ಮಾತನಾಡಿಸಿದರೆ ಅದೇ ಸಿದ್ಧಾಂತ ಹೇಳುತ್ತಾರೆ. ನಮಗೆ ಜಮೀನಿನ ಕೆಲಸ ಮಾಡುವ ಆಸೆ. ಆದರೆ ನಮಗಿರುವುದು ಸ್ವಲ್ಪ ಜಮೀನು. ಅಲ್ಲಿ ಹೆಚ್ಚು ಬೆಳೆ ಬೆಳೆಯಲಾಗುವುದಿಲ್ಲ. ಬೆಳೆದರೂ ಅದು ನಮ್ಮ ಮನೆಗೇ ಸಾಕಾಗುವುದಿಲ್ಲ. ಜೊತೆಗೆ ಜಮೀನಿಗೆ ನೀರಿನ ಕೊರತೆ. ಹಾಗಾಗಿ ಏನೂ ಮಾಡಲಾಗದ ಪರಿಸ್ಥಿತಿ ನಮ್ಮದಾಗಿದೆ, ನಮಗೆ ಕೂಲಿ ಕೆಲಸ ಮಾಡಲೂ ಮನಸ್ಸಿಲ್ಲ. ಹಾಗಾಗಿ ನಿರುದ್ಯೋಗಿಗಳಾಗಿ ಕಾಲ ಕಳೆಯುತ್ತಿದ್ದೇವೆ ಎನ್ನುತ್ತಾರೆ. ಅವರಲ್ಲಿ ಕ್ರಮೇಣ ಸೋಮಾರಿತನ ಆವರಿಸುತ್ತದೆ. ಮುಂದೆ ಅವರು ಯಾವ ಕೆಲಸಕ್ಕೂ ಬಾರದವರಾಗಿ ಬಿಡುವ ಅಪಾಯವಿದೆ.

ಈ ಹಿಂದೆ ಹೀಗಿರಲಿಲ್ಲ. ಅವಿಭಜಿತ ಕುಟುಂಬಗಳಿದ್ದಾಗ ಅವರ ಕುಟುಂಬದಲ್ಲಿ ಸಾಕಷ್ಟು ಜಮೀನು, ತೋಟ, ಗದ್ದೆಗಳಿರುತ್ತಿದ್ದವು. ಮನೆಯವರೆಲ್ಲರೂ ಸೇರಿ ದುಡಿಯುತ್ತಿದ್ದರು. ಅವರ ಮನೆಯಲ್ಲಿ ಸಾಕುಪ್ರಾಣಿಗಳು ಸಮೃದ್ಧವಾಗಿರುತ್ತಿದ್ದವು. ಮನೆಯಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ಆದರೆ ನಂತರದ ಮಕ್ಕಳು ಪಾಲು ಕೇಳುವುದರೊಂದಿಗೆ ಮನೆಯಲ್ಲಿ ಶಿಥಿಲತೆ ಹೆಚ್ಚಾಯಿತು. ದೊಡ್ಡವರ ಮಾತನ್ನು ಕಡೆಗಣಿಸಲಾಯಿತು. ಮನೆಗಿದ್ದ ಜಮೀನುಗಳು ತುಂಡಾಗುತ್ತಾ ಬಂದವು. ಈಗ ಅರ್ಧ ಎಕರೆ, ಮುಕ್ಕಾಲು ಎಕರೆಗೆ ಬಂದು ನಿಂತಿದೆ. ವ್ಯವಸಾಯ ಗೊತ್ತಿಲ್ಲದವರು ಜಮೀನನ್ನು ಮಾರಿಕೊಂಡು ಪಟ್ಟಣ ಸೇರಿದ್ದಾರೆ. ಒಟ್ಟು ಕುಟುಂಬದಲ್ಲಿದ್ದ ಜಮೀನಿನ ಮಧ್ಯೆ ಈಗ ಬೇರೆಯವರ ಒಡೆತನದ ಜಮೀನಿದೆ. ಕೊನೆಗೆ ಇವರ ಜಮೀನಿಗೆ ಹೋಗಲೂ ದಾರಿ ಇಲ್ಲ, ಕಾಲುವೆಗಳಿಂದ ಹರಿಯುವ ನೀರು ಇವರ ಜಮೀನಿಗೆ ಬರುವುದಿಲ್ಲ. ಹೀಗಾಗಿ ಇವರೆಲ್ಲಾ ಕೆಲಸವಿಲ್ಲದೆ ಕುಳಿತಿದ್ದಾರೆ. ಹತ್ತಾರು ಜಮೀನು ಈಗಲೂ ಕುಟುಂಬದ ನೆಂಟರಿಷ್ಟರ ಬಳಿ ಇದ್ದರೂ ದಾಯಾದಿ ಮತ್ಸರ ಎಂಬಂತೆ ಒಬ್ಬರ ಬಳಿ ಒಬ್ಬರು ಮಾತನಾಡುವುದಿಲ್ಲ. ಕೊನೆಗೆ ಎಲ್ಲರೂ ಬವಣೆ ಪಡುತ್ತಾರೆ.

ಹಿಂದೆ ಇಂತಹ ಪ್ರಸಂಗಗಳನ್ನು ಸುಧಾರಿಸುವ ದೃಷ್ಟಿಯಲ್ಲೇ ಸಹಕಾರ ತತ್ವ ಜಾರಿಗೆ ಬಂದಿತು. ನಮ್ಮೆಲ್ಲಾ ಜಮೀನನ್ನು ಒಟ್ಟಾಗಿ ಸೇರಿಸಿ ಎಲ್ಲರೂ ದುಡಿಮೆ ಮಾಡಿ ಅವರವರ ಪಾಲು ಪಡೆಯಬಹುದಾದಂತಹ ತತ್ವ ಅದು. ಆದರೆ ಅಲ್ಲೂ ಅಪನಂಬಿಕೆಗಳು ಮೂಡಿ ಈ ತತ್ವವೂ ಯಶಸ್ಸು ಕಾಣಲಾಗುತ್ತಿಲ್ಲ.

ಇತ್ತೀಚೆಗೆ ಬೆಂಗಳೂರು, ಮೈಸೂರಿನಲ್ಲಿ ಕೆಲಸ ಮಾಡಿ ಸ್ವಲ್ಪ ಹೆಚ್ಚಾಗಿ ಹಣ ಗಳಿಸುವವರು (ಐಟಿ, ಬಿಟಿ) ಒಂದಷ್ಟು ಜನರು ಸೇರಿ ಹಣ ಸೇರಿಸಿ ಜಮೀನು ಕೊಳ್ಳುತ್ತಿದ್ದಾರೆ. ಅದೂ ಹತ್ತಾರು ಎಕರೆ. ಅವರಿಗೆ ವಾರದ ಕೊನೆಗೆ ಆ ಜಮೀನಿನಲ್ಲಿದ್ದು ಬರುವ ಹಂಬಲ. ಅದು ನಮ್ಮದೇ ಜಮೀನು ಎಂದಾಗ ಅದರ ಸವಿ ಜಾಸ್ತಿ. ಅವರು ಆ ಜಮೀನಿನಲ್ಲಿ ಸಣ್ಣದಾದ ಅತಿಥಿಗೃಹ ನಿರ್ಮಿಸಿಕೊಂಡಿದ್ದಾರೆ. ಜೊತೆಗೆ ಹಸು ಸಾಕಾಣಿಕೆಯನ್ನೂ ಆರಂಭಿಸಿದ್ದಾರೆ. ನೋಡಿಕೊಳ್ಳಲು ನಂಬಿಕಸ್ಥ ಜನರನ್ನು ನೇಮಕ ಮಾಡಿಕೊಂಡಿದ್ದಾರೆ. ಹಣದ ಕೊರತೆ ಇಲ್ಲದಿರುವುದರಿಂದ ಕೊಳವೆ ಬಾವಿ ಕೊರೆಸಿ ನೀರಾವರಿಗೆ ದಾರಿ ಮಾಡಿಕೊಂಡಿದ್ದಾರೆ. ಸಾಕಷ್ಟು ಹಣ್ಣು ತರಕಾರಿಯನ್ನು ಬೆಳೆಯುತ್ತಾರೆ. ಅದನ್ನು ಮಾರಾಟ ಮಾಡದೇ ತಮ್ಮ ಕುಟುಂಬದ ಉಪಯೋಗಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಜಮೀನು ಬೆಂಗಳೂರು, ಮೈಸೂರಿನ ಹತ್ತಿರ ಇರಲೇಬೇಕೆಂದೇನೂ ಇಲ್ಲ. ನಲವತ್ತು, ಐವತ್ತು ಕಿಲೋಮೀಟರು ಆದರೂ ಆಗಬಹುದು. ಎಲ್ಲರಲ್ಲೂ ವಾಹನವಿದೆ. ಈಗ ಅವರು ತಮ್ಮದೇ ಜಮೀನಿನ ಹಣ್ಣು, ತರಕಾರಿ, ಮೊಸರು, ಬೆಣ್ಣೆ ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದಾರೆ. ಕೆಲವರು ಭತ್ತವನ್ನೂ ಬೆಳೆದು ತಮ್ಮ ಮನೆಗೆ ಆಗುವಷ್ಟು ಅಕ್ಕಿ ಪಡೆಯುತ್ತಾರೆ. ಇದೊಂದು ಉತ್ತಮ ಪ್ರಯೋಗ. ಇದು ಇಂದು ಸಾಕಷ್ಟು ಜನರನ್ನು ಆಕರ್ಷಿಸುತ್ತಿದೆ. ಸಹಕಾರದ ತತ್ವ ಇಲ್ಲಿ ಈ ರೀತಿ ಉಪಯೋಗಕ್ಕೆ ಬರುತ್ತಿದೆ.

ನಮ್ಮ ಸ್ನೇಹಿತರೊಡನೆ ಈ ಬಗ್ಗೆ ಮಾತನಾಡಿದಾಗ ಕೆಲವೆಡೆ ಈಗೊಂದು ಜಾಗೃತಿ ಮೂಡುತ್ತಿದೆ ಎಂದರು. ನಮಗೆ ವ್ಯವಸಾಯ ಗೊತ್ತಿಲ್ಲ. ಆದರೆ ಕಲಬೆರಕೆ ಆಹಾರ ನಮ್ಮ ಹಾಗೂ ನಮ್ಮ ಕುಟುಂಬದವರ ಆರೋಗ್ಯ ಹಾಳು ಮಾಡುತ್ತಿದೆ ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಅವರು ಸಮೀಪದ ಗ್ರಾಮದ ಜಮೀನಿರುವವರೊಡನೆ ಮಾತನಾಡಿ, ತಮಗೆ ಪ್ರತಿತಿಂಗಳೂ ಇಂತಿಂತಹ ಆಹಾರ ಪದಾರ್ಥಗಳು, ತರಕಾರಿ, ಬೆಣ್ಣೆ ತುಪ್ಪ ಬೇಕು. ಇದಕ್ಕಾಗಿ ನಾವು ನಮ್ಮೂರಿನಲ್ಲಿ ಪ್ರತಿತಿಂಗಳೂ ಸುಮಾರು ಇಪ್ಪತ್ತು ಸಾವಿರ ವೆಚ್ಚ ಮಾಡುತ್ತೇವೆ. ಆದರೂ ನಮಗೆ ಬೇಕಾದ ಶುದ್ಧವಾದ ಆಹಾರ ಪದಾರ್ಥ ದೊರಕುತ್ತಿಲ್ಲ. ಆ ಹಣವನ್ನು ನಾವು ನಿಮಗೆ ಪ್ರತಿತಿಂಗಳೂ ನೀಡುತ್ತೇವೆ. ನಾವು ಹತ್ತಾರು ಜನರು ಸೇರಿ ಪ್ರತಿ ತಿಂಗಳೂ ಸುಮಾರು ಎರಡು ಲಕ್ಷ ರೂಪಾಯಿ ಹೊಂದಿಸಿ ಕೊಡುತ್ತೇವೆ. ನಿಮಗೆ ಜಮೀನಿದೆ. ನಿಮಗೆ ವ್ಯವಸಾಯ ಮಾಡಲು ಹಣವಿಲ್ಲ. ನಾವು ಪ್ರತಿ ತಿಂಗಳೂ ಇಷ್ಟು ಹಣ ಹೊಂದಿಸಿ ಕೊಡುತ್ತೇವೆ. ನೀವು ನಮಗೆ ಬೇಕಾದ್ದನ್ನು ಬೆಳೆದು ಕೊಡುತ್ತೀರಾ? ಎಂದಾಗ ಹಲವಾರು ರೈತರು ಸಂತಸದಿಂದ ಒಪ್ಪಿಕೊಂಡಿದ್ದಾರೆ. ಪ್ರತಿ ತಿಂಗಳು ಒಂದು ಅಥವಾ ಎರಡು ಲಕ್ಷ ಹಣ ಬಂದರೆ ಅವರ ಜೀವನವೂ ಸಲೀಸು. ಇದು ಇಂದು ಹಲವೆಡೆ ಕಂಡುಬರುತ್ತಿದೆ ಎಂದು ಸ್ನೇಹಿತರು ಹೇಳುತ್ತಾರೆ.

ಇದೊಂದು ಅಪೂರ್ವವಾದ ಯೋಜನೆ ಎನಿಸುತ್ತದೆ. ರೈತ ಹಣವಿಲ್ಲದೆ ಬೆಳೆ ಬೆಳೆಯಲಾರ, ಪ್ರತಿ ತಿಂಗಳೂ ಇಂತಿಷ್ಟು ಹಣ ಬರುತ್ತದೆ ಎಂದಾದಾಗ ಉತ್ತಮವಾಗಿಯೇ ವ್ಯವಸಾಯ ಮಾಡಬಹುದು ಎಂಬುದು ಇಂದು ಕಂಡುಬರುತ್ತಿದೆ. ಹೀಗೇ ಒಂದಷ್ಟು ಜನರು ಸೇರಿ ಒಂದಷ್ಟು ಹಸುಗಳನ್ನು ಕೊಂಡು ಸಾಕುವ ವ್ಯವಸ್ಥೆ ಮಾಡಿಕೊಂಡರೆ ಅವರಿಗೆ ಬೇಕಾದ ಶುದ್ಧವಾದ ಹಾಲು ಮೊಸರು ಇತ್ಯಾದಿಗಳೂ ದೊರಕುತ್ತವೆ. ಇಂತಹ ವ್ಯವಸ್ಥೆಯನ್ನು ಪ್ರೋತ್ಸಾಹಿಸುವುದು ಸೂಕ್ತ ಎಂದು ಕಂಡುಬರುತ್ತದೆ.

ಟಾಟಾ ಸಮೂಹ ಸಂಸ್ಥೆಯಿಂದ ರಾಜ್ಯದಲ್ಲಿ 2300 ಕೋಟಿ ಹೂಡಿಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಒಡಂಬಡಿಕೆಗೆ ಸಹಿ



ಬೆಂಗಳೂರು, ಫೆ.19(ಕೆಎಂಶಿ)– ಟಾಟಾ ಸಮೂಹದ ಭಾಗವಾಗಿರುವ ಏರ್ ಇಂಡಿಯಾ ಮತ್ತು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ರಾಜ್ಯದಲ್ಲಿ ವಿವಿಧ ಯೋಜನೆಗಳಿಗೆ 2,300 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿವೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸಮ್ಮುಖದಲ್ಲಿ ಇಂದಿಲ್ಲಿ ಒಡಂಬಡಿಕೆಗೆ ಅಂಕಿತ ಹಾಕಲಾಯಿತು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಏರ್ ಇಂಡಿಯಾ ಮುಖ್ಯ ವಾಣಿಜ್ಯ ವ್ಯವಹಾರ ಅಧಿಕಾರಿ ನಿಪುಣ್ ಅಗರವಾಲ್ ಹಾಗೂ ಟಿಎಎಸ್‌ಎಲ್ ಸಿಇಒ ಸುಕರಣ್ ಸಿಂಗ್ ಒಡಂಬಡಿಕೆ ಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

1650 ಉದ್ಯೋಗ: ವಿಧಾನಸೌಧದಲ್ಲಿ ನಡೆದ ಒಡಂಬಡಿಕೆ ನಂತರ ಮಾತನಾಡಿದ ಸಚಿವ ಪಾಟೀಲ್, 'ಟಾಟಾ ಸಮೂಹದ ಈ ಹೂಡಿಕೆಯಿಂದ ನೇರವಾಗಿ 1,650 ಉದ್ಯೋಗ ಸೃಷ್ಟಿಯಾಗಲಿವೆ. ಒಟ್ಟು ಹೂಡಿಕೆಯ ಪೈಕಿ ಏರ್ ಇಂಡಿಯಾ ಕಂಪನಿ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಓವರ್–ಹಾಲ್ (ಎಂಆರ್‌ಒ) ಘಟಕವನ್ನು ಸ್ಥಾಪಿಸಲು 1,300 ಕೋಟಿ ರೂ. ಹೂಡುತ್ತಿದೆ ಎಂದರು.

ಇದರಿಂದಾಗಿ 1,200 ಜನರಿಗೆ ನೇರವಾಗಿ ಉದ್ಯೋಗ ಸಿಗಲಿದ್ದು, ಪರೋಕ್ಷವಾಗಿ 25 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ, ಭಾರತದಲ್ಲಿ ಇದು ಇಂತಹ ಮೊಟ್ಟಮೊದಲ ಯೋಜನೆಯಾಗಿದೆ. ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಕಂಪನಿ ಮೂರು ಯೋಜನೆಗಳಿಗೆ 1,030 ಕೋಟಿ ರೂ. ಬಂಡವಾಳ ಹೂಡಲಿದೆ, ಇವುಗಳ ಪೈಕಿ 420 ಕೋಟಿ ರೂ.ಗಳನ್ನು ನಾಗರಿಕ ವಿಮಾನಗಳನ್ನು ಸರಕು ಸಾಗಣೆ ವಿಮಾನಗಳನ್ನಾಗಿ (ಫ್ರೈಟರ್) ಪರಿವರ್ತಿಸುವ ಘಟಕ ಸ್ಥಾಪನೆಗೆ ವಿನಿಯೋಗಿಸಲಿದೆ. ಜೊತೆಗೆ 310 ಕೋಟಿ ರೂ. ಹೂಡಿಕೆಯೊಂದಿಗೆ ಗನ್ ತಯಾರಿಕೆ ಘಟಕ ಮತ್ತು 300 ಕೋಟಿ ರೂ. ವೆಚ್ಚದಲ್ಲಿ ವಿಮಾನಯಾನ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಕೈಗೆತ್ತಿಕೊಳ್ಳಲಿದೆ. ಇದರಿಂದ 450 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದರು.

●1650 ಮಂದಿಗೆ ಉದ್ಯೋಗಾವಕಾಶ ಲಭ್ಯ

ಬೆಂಗಳೂರು ವಿಮಾನ ನಿಲ್ದಾಣ ಸಮೀಪ ಮತ್ತು ಕೋಲಾರದಲ್ಲಿ ಟಿಎಎಸ್‌ಎಲ್ ಸ್ಥಾಪಿಸಲಿರುವ ಗನ್ ತಯಾರಿಕೆ ಘಟಕದ ಮೂಲಕ ತನಗೆ ಅಗತ್ಯವಿರುವ 13 ಸಾವಿರ ಬಿಡಿಭಾಗಗಳ ಪೈಕಿ ಶೇಕಡ 50ರಷ್ಟನ್ನು ಪೂರೈಸಿಕೊಳ್ಳುವ ಆಲೋಚನೆ ಹೊಂದಿದೆ. ಇದರಿಂದಾಗಿ 300ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 2–3 ಸಾವಿರ ಜನರಿಗೆ ಉದ್ಯೋಗಗಳು ಸಿಗಲಿವೆ, 1939ರಲ್ಲಿಯೇ ಬೆಂಗಳೂರಿನಲ್ಲಿ ಎಚ್‌ಎಎಲ್ ಸ್ಥಾಪನೆಯೊಂದಿಗೆ ರಾಜ್ಯ ವೈಮಾನಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ರಕ್ಷಣಾ ಇಲಾಖೆಗೆ ಬೇಕಾಗುವ ವಿಮಾನಗಳು ಮತ್ತು ಹೆಲಿಕಾಪ್ಟರುಗಳ ಪೈಕಿ ಶೇಕಡ 67ರಷ್ಟು ಕರ್ನಾಟಕದಲ್ಲೇ ತಯಾರಾಗುತ್ತಿದೆ, ಜತೆಗೆ ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದ ರಫ್ತು ವಹಿವಾಟಿಗೆ ರಾಜ್ಯವು ಶೇಕಡ 65ರಷ್ಟು ಕೊಡುಗೆ ನೀಡುತ್ತಿದೆ. ದೇಶದಲ್ಲಿ ಈ ವಲಯದಲ್ಲಿರುವ ಕಂಪನಿಗಳ ಪೈಕಿ ಶೇ.70ರಷ್ಟು ಕಂಪನಿಗಳು ಕರ್ನಾಟಕದಲ್ಲೇ ನೆಲೆ ಹೊಂದಿವೆ ಎಂದರು.

ಇಂದು ಸಂತ ಕವಿ ಸರ್ವಜ್ಞ ಜಯಂತಿ

ಮೈಸೂರು,ಫೆ.19–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂತ ಕವಿ ಸರ್ವಜ್ಞ ಜಯಂತಿಯನ್ನು ಫೆ.20ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಸಿ.ಅನಿಲ್‌ಕುಮಾರ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ವಿಧಾನಸಭೆ ಸದಸ್ಯರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕೆ.ಆರ್ ನಗರ ತಾಲೂಕಿನ ಕರ್ನಾಟಕ ಜಾನಪದ ಪರಿಷತ್‌ನ ಅಧ್ಯಕ್ಷ ಪ್ರಭಾಕರ ಹೆಗ್ಗಂದೂರು ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶತಮಾನ ಪೂರೈಸಿದ ಮೈಷುಗರ್‌ಗೆ ಹೊಸ ಕಾರ್ಖಾನೆಯ ಭಾಗ್ಯ

ಕಾರ್ಖಾನೆಯ ಆವರಣ, ಇಲ್ಲವೇ ಸಾತನೂರಿನಲ್ಲಿ ತಲೆ ಎತ್ತಲಿದೆ 500 ಕೋಟಿ ವೆಚ್ಚದ ನೂತನ ಫ್ಯಾಕ್ಟರಿ

ಎಂ.ಕೆ.ಮೋಹನ್‌ರಾಜ್



ಮಂಡ್ಯ,ಫೆ.19– ಮಂಡ್ಯ ಜಿಲ್ಲೆಯ ರೈತರ ಜೀವನಾಡಿ ಮೈಷುಗರ್ ಸಕ್ಕರೆ ಕಾರ್ಖಾನೆಗೆ ನೂರು ವರ್ಷದ ಇತಿಹಾಸವಿದ್ದು, ಬ್ರಿಟೀಷರ ಕಾಲದಲ್ಲಿ ಆರಂಭವಾಗಿದ್ದ ಈ ಸಕ್ಕರೆ ಕಾರ್ಖಾನೆಗೆ ಆಧುನೀಕರಣದ ಸ್ಪರ್ಶ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಮುಂದಾಗಿದೆ. ಪ್ರಸ್ತುತ ಕಾರ್ಖಾನೆ ಇರುವ ಆವರಣದಲ್ಲಿ ನೂತನ ಫ್ಯಾಕ್ಟರಿ ತಲೆ ಎತ್ತಲಿದೆ.

ಶುಕ್ರವಾರ ತಮ್ಮ 15ನೇ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಷುಗರ್ ಸಕ್ಕರೆ ಕಾರ್ಖಾನೆ ಬಳಿ ನೂತನ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲಾಗುವುದು. ಇದಕ್ಕೆ ಕಾರ್ಖಾನೆ ಆಸ್ತಿಗಳನ್ನು ಬಳಕೆ ಮಾಡಿಕೊಳ್ಳಲಾಗುವುದು ಎಂದಿದ್ದರು.

ಏಕೆ ಹೊಸ ಕಾರ್ಖಾನೆ?: ಮಂಡ್ಯ ಮೈಷುಗರ್‌ಗೆ ನೂರು ವರ್ಷದ ಇತಿಹಾಸವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಲೆಸ್ಲಿ ಕೋಲ್ಮನ್ ಬ್ರಿಟೀಷ್ ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಮಂಡ್ಯ ನಗರದಲ್ಲಿ ತಲೆ ಎತ್ತಿದ್ದ ಬೃಹತ್ ಸಕ್ಕರೆ ಕಾರ್ಖಾನೆ ಈ ಮೈಷುಗರ್. ಸದ್ಯ ಇಡೀ ಏಷ್ಯಾ ಖಂಡದಲ್ಲೇ ಸರ್ಕಾರಿ ಸ್ವಾಮ್ಯದಲ್ಲಿ ಉಳಿದುಕೊಂಡಿರುವ ಏಕೈಕ ಸಕ್ಕರೆ ಕಾರ್ಖಾನೆ ಎಂಬ ಕೀರ್ತಿಗೆ ಮೈಷುಗರ್ ಪಾತ್ರವಾಗಿದೆ.

ಆದರೆ ನೂರು ವರ್ಷ ಕಳೆದಿರುವ ಹಿನ್ನೆಲೆಯಲ್ಲಿ ಕಾರ್ಖಾನೆಯ ಕೆಲವು ಮಿಷನರಿಗಳು ಕೆಟ್ಟಿದ್ದು, ಆಗಾಗ ರಿಪೇರಿಗೆ ಬರುತ್ತಿರುತ್ತವೆ. ಅದರ ಬಿಡಿಭಾಗಗಳನ್ನು ಹೊರ ರಾಜ್ಯ ಅಥವಾ ಹೊರ ದೇಶಗಳಿಂದ ದುಪ್ಪಟ್ಟು ಬೆಲೆಗೆ ತರಿಸಬೇಕಾದ ಪರಿಸ್ಥಿತಿ ಇದೆ. ಅದರ ಬದಲು ಹೊಸ ಕಾರ್ಖಾನೆಯನ್ನು ನಿರ್ಮಿಸಿದರೆ ಕಾರ್ಖಾನೆ ಸುಸಜ್ಜಿತವಾಗಿ ನಡೆಯಲು ಯಾವುದೇ ಸಮಸ್ಯೆ ಇರುವುದಿಲ್ಲ ಎಂಬುದು ಸರ್ಕಾರದ ಚಿಂತನೆಯಾಗಿದೆ ಎನ್ನಲಾಗಿದೆ.

ಈ ನಿರ್ಧಾರವನ್ನು ಹೆಚ್ಡಿಕೆ ಸರ್ಕಾರ ಮಾಡಿತ್ತು: 2018ರಲ್ಲಿ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ತಾಲೂಕಿನ ಸಾತನೂರು ಬಳಿ ನೂತನ ಸರ್ಕಾರಿ ಕಾರ್ಖಾನೆ ನಿರ್ಮಿಸಲು ಚಿಂತನೆ ನಡೆಸಿ ಇದಕ್ಕೆ 150 ಕೋಟಿ ಹಣ ಬಿಡುಗಡೆ ಮಾಡುವುದಾಗಿಯೂ ಸಹ ಬಜೆಟ್‌ನಲ್ಲಿ ಘೋಷಿಸಿದ್ದರು. ಆದರೆ ಕಾರ್ಖಾನೆಗೆ ಗುದ್ದಲಿ ಪೂಜೆ ನೆರವೇರಿಸಬೇಕೆಂಬ ಚಿಂತನೆಯಲ್ಲಿರುವಾಗ ಮೈತ್ರಿ ಸರ್ಕಾರ ಪತನವಾಯಿತು. ಆಗ ಈ ಯೋಜನೆ ನನೆಗುದಿಗೆ ಬಿದ್ದಿತು.

ಹಣ ಕ್ರೋಢೀಕರಣ ಹೇಗೆ?: ಸದ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಷ್ಟು ಹಣ ಖರ್ಚಾಗಲಿದೆ ಎಂಬ ಬಗ್ಗೆ ಏನು ಹೇಳಿಲ್ಲವಾದರೂ ಕಾರ್ಖಾನೆ ನಿರ್ಮಾಣಕ್ಕೆ 500 ಕೋಟಿ ವೆಚ್ಚ ತಗುಲಲಿದ್ದು, ಈ ಪೈಕಿ ರಾಜ್ಯ ಸರ್ಕಾರ 100 ಕೋಟಿ ಬಿಡುಗಡೆ ಮಾಡಿದರೆ ಉಳಿದ 400 ಕೋಟಿ ಹಣವನ್ನು ಸಾಲದ ರೂಪದಲ್ಲಿ ನೀಡಲಿದೆಯಂತೆ.

ಕಾಂಗ್ರೆಸ್ ಸರ್ಕಾರ ಬಂದಾಗಲೇ ಕಾರ್ಖಾನೆಗೆ 50 ಕೋಟಿ ರೂ. ಹಾಗೂ ಈಗ ಮತ್ತೆ 25 ಕೋಟಿ ರೂ. ಸೇರಿದಂತೆ 75 ಕೋಟಿ ರೂ. ಕಾರ್ಖಾನೆಗೆ ನೀಡಿದೆ. ಬಜೆಟ್‌ನಲ್ಲಿ ಸರ್ಕಾರ ಹೊಸ ಕಾರ್ಖಾನೆಗೆ 100 ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದ್ದು, ಉಳಿದ 400 ಕೋಟಿ ರೂ. ಹಣವನ್ನು ಸರ್ಕಾರವೇ ಸಾಲ ಸೌಲಭ್ಯ ಕೊಡಿಸುವ ಮೂಲಕ ಅತ್ಯಾಧುನಿಕ ತಂತ್ರಜ್ಞಾನದ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಮೈಷುಗರ್ ಆಸ್ತಿ ಬಳಕೆ ಸಾಧ್ಯತೆ: ನೂತನ ಕಾರ್ಖಾನೆ ನಿರ್ಮಾಣಕ್ಕೆ ಮೈಷುಗರ್ ಒಡೆತನದ ಆಸ್ತಿ ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಮೈಷುಗರ್ ಸುಪರ್ದಿಗೆ ಬರುವ ಮಂಡ್ಯ ತಾಲೂಕಿನ ಸಾತನೂರು ಫಾರಂ ಬಳಿ ಕಾರ್ಖಾನೆ ನಿರ್ಮಿಸಲಾಗುವುದು ಎಂದು ಮೂಲಗಳು ಹೇಳಿವೆ. ಸಿಎಂ ಸಹ ನಿನ್ನೆಯ ಬಜೆಟ್‌ನಲ್ಲಿ ಆಸ್ತಿಯ ಆದಾಯ ಬಳಕೆ ಮಾಡಿಕೊಳ್ಳಲಾಗುವುದು ಎಂದಿದ್ದಾರೆ. ಸದ್ಯ ಮೈಷುಗರ್ ಒಡೆತನದಲ್ಲಿ ಬೆಂಗಳೂರು ನಗರದಲ್ಲಿ ಒಂದು ಎಕರೆ ಜಾಗ, ಮಂಡ್ಯ ನಗರದ ಗಿರಿಜಾ ಚಿತ್ರ ಮಂದಿರದ ಎದುರು 2 ಎಕರೆ ಜಾಗ, ಮಳವಳ್ಳಿಯ ಬ್ಲಫ್ ಬಳಿಯೂ 2 ಎಕರೆ ಜಾಗ ಸೇರಿದಂತೆ ಹಲವೆಡೆ ಮೈಷುಗರ್ ಒಡೆತನದ ಆಸ್ತಿ ಇದ್ದು, ಸದ್ಯ ಇದರಿಂದ ಅಲ್ಪಸ್ವಲ್ಪ ಬಾಡಿಗೆ ಹಣ ಬರುತ್ತಿದ್ದು, ಈ ಜಾಗದಲ್ಲಿ ಮತ್ತಷ್ಟು ವಾಣಿಜ್ಯ ಕಟ್ಟಡಗಳನ್ನು ಕಟ್ಟಿ ಅಲ್ಲಿಂದ ಬರುವ ಆದಾಯವನ್ನು ಕಾರ್ಖಾನೆ ಅಭಿವೃದ್ಧಿಗೆ ಬಳಸಿಕೊಳ್ಳಬೇಕೆಂಬ ಚಿಂತನೆ ಸಹ ಇದೆ.

ಹೊಸ ಹೆಸರು ನಾಮಕರಣಕ್ಕೆ ಯತ್ನ?

ಶಾಸಕ ರವಿಕುಮಾರ್ ಗಣಿಗ ವಿರುದ್ಧ ರೈತ ಸಂಘ ತೀವ್ರ ಆಕ್ರೋಶ

- ಮನೆಮನೆಯಿಂದ ಮಣ್ಣು ಸಂಗ್ರಹಿಸುವ ಬದಲು ಜಮೀನಿನಿಂದ ಕಬ್ಬು ತರಲಿ
- ಮೈಷುಗರ್ ಆಸ್ತಿ ಖಾಸಗಿಯವರಿಗೆ ಪರಭಾರೆ ಮಾಡಲು ಮುಂದಾಗಿದ್ದಾರೆ?
- ಮೈಷುಗರ್ ಸ್ಥಳದಲ್ಲೇ ಹೊಸ ಕಾರ್ಖಾನೆ ನಿರ್ಮಾಣವಾಗಬೇಕು

ಮಂಡ್ಯ: ಮೈಷುಗರ್ ಸಕ್ಕರೆ ಕಾರ್ಖಾನೆಗೆ ಹೊಸ ಹೆಸರು ನಾಮಕರಣ ಮಾಡಲು ಮುಂದಾಗಿರುವ ಶಾಸಕ ರವಿಕುಮಾರ್ ಗಣಿಗ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ನಗರದ ಸರ್‌ಎಂವಿ ಪ್ರತಿಮೆ ಮುಂದೆ ನಡೆದ ಕಾವೇರಿಗಾಗಿ ವಾರಕ್ಕೊಮ್ಮೆ ಚಳವಳಿ ಸ್ಥಳದಲ್ಲಿ ಮಾತನಾಡಿದ ಅವರು, ಮೈಷುಗರ್ ಕಾರ್ಖಾನೆ ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿಯ ಫಲ, ಕೋಲ್ಮನ್ ಚಿಂತನೆಯ ಸಾಕಾರವಾಗಿದೆ. ಇದೀಗ ಶಾಸಕರು ಭಾವನಾತ್ಮಕ ವಿಚಾರ ಮುಂದಿಟ್ಟು ದೇವಾಲಯಗಳಿಗೆ ಹೋಲಿಕೆ ಮಾಡಿ ಮೌಢ್ಯ ಬಿತ್ತುವ ಜೊತೆಗೆ ಹೊಸ ನಾಮಧೇಯ ಮಾಡಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಹೊಸ ಕಾರ್ಖಾನೆ ನಿರ್ಮಾಣಕ್ಕೆ ಮನೆ ಮನೆಯಿಂದ ಮಣ್ಣು ಸಂಗ್ರಹಿಸಲಾಗುವುದು ಎಂದು ಶಾಸಕ ರವಿಕುಮಾರ್ ಗಣಿಗ ಹೇಳಿದ್ದಾರೆ. ರೈತರ ಜಮೀನಿನಲ್ಲಿ ಕಬ್ಬು ಇದ್ದರೂ ಸಹ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆ ಸ್ಥಗಿತ ಮಾಡಲಾಯಿತು. ಮನೆ–ಮನೆ ತಿರುಗಿ ಕಬ್ಬು ತರುವ ಕೆಲಸ ಮಾಡಲಿ ಅದನ್ನು ಬಿಟ್ಟು ಭಾವನಾತ್ಮಕ ವಿಚಾರದಲ್ಲಿ ಮೈಷುಗರ್ ಘನತೆಗೆ ಚ್ಯುತಿ ತರಬಾರದು ಎಂದು ಹೇಳಿದರು.



ರವಿಕುಮಾರ್ ಗಣಿಗ



ಸುನಂದಾ ಜಯರಾಂ

ಸರ್ಕಾರ ಕಾರ್ಖಾನೆ ಆವರಣದಲ್ಲಿ ಹೊಸ ಕಾರ್ಖಾನೆ ನಿರ್ಮಾಣ ಮಾಡಲಾಗುವುದು ಎಂದು ಘೋಷಿಸಿದೆ. ಆದರೆ ಶಾಸಕರು ಸಾತನೂರು ಫಾರಂ ಬಳಿ ನೂತನ ಕಾರ್ಖಾನೆ ನಿರ್ಮಾಣ ಆಗಲಿದೆ ಎಂದಿದ್ದಾರೆ. ಹೊಸ ಕಾರ್ಖಾನೆ ಮೈಷುಗರ್ ಇರುವ ಸ್ಥಳದಲ್ಲಿಯೇ ನಿರ್ಮಾಣ ಆಗಬೇಕು. ಯಾರಾದರೂ ಐಟಿ ಬಿಟಿ ಪಾರ್ಕ್ ಕೇಳಿದ್ದೀವಾ, ಈಗಾಗಲೇ ಐಟಿಬಿಟಿ ಕಥೆ ನೋಡಿಲ್ಲವಾ, ಖಾಸಗಿಯವರಿಗೆ ಕಾರ್ಖಾನೆಯ ಆಸ್ತಿಯನ್ನು ನೀಡಲು ಹುನ್ನಾರ ನಡೆಸಲು ಮುಂದಾಗಿದ್ದಾರಾ ಎಂದು ಪ್ರಶ್ನಿಸಿದರು.

ಸಾವಿರಾರು ಎಕರೆ ಪ್ರದೇಶ ಇದ್ದ ಕಾರ್ಖಾನೆ ಆಸ್ತಿ 109 ಎಕರೆಗೆ ಕುಸಿದಿದೆ, ಇದೀಗ ಇರುವ ಆಸ್ತಿಯನ್ನು ಖಾಸಗಿ ಕಂಪನಿಗಳಿಗೆ ಪರಭಾರೆ ಮಾಡಲು ಶಾಸಕರು ಮುಂದಾಗಿದ್ದಾರಾ? ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ, ಡಿಸ್ಟಿಲರಿ ಘಟಕ, ಎಥನಾಲ್ ಘಟಕ ಯಾವುದೂ ಚಾಲನೆಯಲ್ಲಿಲ್ಲ, ಕಾರ್ಖಾನೆಗೆ ಆಧುನಿಕ ಸ್ಪರ್ಶ ಅಗತ್ಯವಿತ್ತು, ಸರ್ಕಾರ ಹೊಸ ಕಾರ್ಖಾನೆ ನಿರ್ಮಾಣ ಮಾಡಲು ಮುಂದಾಗಿರುವುದು ಸ್ವಾಗತಾರ್ಹ. ಆದರೆ ಬೇರೆಡೆ ಕಾರ್ಖಾನೆ ನಿರ್ಮಾಣ ಮಾಡಬಾರದು ಎಂದು ಹೇಳಿದರು.

ಸಂವಿಧಾನ ಜಾಗೃತಿ ಜಾಥಾಗೆ ಅದ್ದೂರಿ ಸ್ವಾಗತ



ಭಾರತೀನಗರ, ಫೆ.19– ಮದ್ದೂರು ತಾಲೂಕಿನ ಗಡಿಭಾಗವಾದ ಚಂದೂಪುರ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಮದ್ದೂರು ತಾಲೂಕಿಗೆ ಸ್ವಾಗತಿಸಿ ರಥಯಾತ್ರೆಗೆ ತಹಶೀಲ್ದಾರ್ ಸೋಮಶೇಖರ್ ಚಾಲನೆ ನೀಡಿದರು.

ಸಂವಿಧಾನ ಜಾಗೃತಿ ಜಾಥಾ ರಾಜ್ಯಾದ್ಯಂತ ಯಾತ್ರೆ ನಡೆಸುತ್ತಿದ್ದು ಈ ರಥಯಾತ್ರೆಯು ಸೋಮವಾರ ಮದ್ದೂರು ತಾಲೂಕಿಗೆ ಪ್ರವೇಶಿಸಿತು. ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಕೂಡ ಹಾಜರಿದ್ದು ಸಂವಿಧಾನ ಜಾಗೃತಿ ಜಾಥಾವನ್ನು ಗಡಿಯಲ್ಲಿ ಸ್ವಾಗತಿಸಿ ಸಂಚಾರಕ್ಕೆ ಬೀಳ್ಕೊಟ್ಟರು.

ಸಂವಿಧಾನ ಜಾಗೃತಿ ಜಾಥಾವು ಎಸ್.ಐ.ಹೊನ್ನಲಗೆರೆ ಗ್ರಾಪಂ, ತೊರೆಬೊಮ್ಮನಹಳ್ಳಿ ಗ್ರಾಪಂ, ಮಣಿಗೆರೆ ಗ್ರಾಪಂನ ಎಲ್ಲಾ ಗ್ರಾಮಗಳಿಗೂ ತೆರಳಿ ಭಾರತದ ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಸಿತು. ಈ ಸಂದರ್ಭದಲ್ಲಿ ಚಂದೂಪುರ ಸರ್ಕಾರಿ ಪ್ರೌಢಶಾಲೆ, ಡಿ.ಕೆ.ಗೌಡ ಪ್ರೌಢಶಾಲೆ, ಶಾಂತಿನಿಕೇತನ, ಮಡೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ರಥವನ್ನು ಕುಂಭಮೇಳದೊಂದಿಗೆ ಸ್ವಾಗತಿಸಿದರು.

ಆದಿಚುಂಚನಗಿರಿಯಲ್ಲಿ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳಕ್ಕೆ ಚಾಲನೆ

ನಾಗಮಂಗಲ,ಫೆ19– ಶಿಕ್ಷಣವೇ ಜ್ಞಾನ, ಶಿಕ್ಷಣವೇ ಬದುಕು, ಶಿಕ್ಷಣವು ಕೇವಲ ಸರ್ಟಿಫಿಕೇಟ್ ಆಗಬಾರದು, ಬಡವರ ನಿರ್ಗತಿಕರ ಕಣ್ಣೀರು ಒರೆಸುವ ರಕ್ಷಾ ಕವಚವಾಗಬೇಕು ಎಂದು ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಆದಿಚುಂಚನಗಿರಿಯಲ್ಲಿ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರ 11ನೇ ವಾರ್ಷಿಕ ಪಟ್ಟಾಭಿಷೇಕೋತ್ಸವ ನಿಮಿತ್ತ ಏರ್ಪಡಿಸಿದ್ದ 'ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳ–24' ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗೆ ಉತ್ತಮ ನಡವಳಿಕೆ ಬದುಕಲು ಕಲಿಸುತ್ತದೆ. ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸುತ್ತದೆ, ಜೀವನದಲ್ಲಿ ಏನಾದರೂ ಸಾಧಿಸುವ ಛಲವನ್ನು ಹುಟ್ಟು ಹಾಕುತ್ತದೆ. ಇಂದು ಜಗತ್ತಿನಲ್ಲಿ ಅಸಾಮಾನ್ಯ ಸಾಧನೆಗೈದಿರುವ ಸರ್ವರೂ ಸಾಮಾನ್ಯ ಕುಟುಂಬದಿಂದ ಬಂದವರೇ ಆಗಿದ್ದಾರೆ. ಶಿಕ್ಷಣ ಮತ್ತು ಸಂಸ್ಕಾರ ಒಟ್ಟಿಗೆ ದೊರೆತರೆ ಸಾಮಾನ್ಯ ಮನುಷ್ಯನು ಅಸಾಮಾನ್ಯ ಸಾಧನೆ ಮಾಡುತ್ತಾನೆ. ಪುಸ್ತಕಗಳೇ ಜ್ಞಾನವನ್ನು ಹೆಚ್ಚಿಸುವ ಮಾಧ್ಯಮಗಳು, ಭವಿಷ್ಯದ ಬುನಾದಿಯೇ ಸ್ಪರ್ಧಾತ್ಮಕ ಪರೀಕ್ಷೆಗಳು ಇವುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳಲು ಸಲಹೆ ನೀಡಿದರು.



ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮಾಜಿ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಆದಿಚುಂಚನಗಿರಿಯಲ್ಲಿ ಜ್ಞಾನ ವಿಜ್ಞಾನ ತಂತ್ರಜ್ಞಾನ ಮೇಳಕ್ಕೆ ಚಾಲನೆ ನೀಡಿದರು.

ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾತನಾಡಿ, ಡಾ. ಸಿ.ಎನ್.ಮಂಜುನಾಥ್ ಅವರು ಕೇಂದ್ರದ ಆರೋಗ್ಯ ಸಚಿವರಾಗಿ ದೇಶದ ಉದ್ದಗಲಕ್ಕೂ ಹೃದಯ ಆರೋಗ್ಯ ಕಾಪಾಡುವ ಶಕ್ತಿಯನ್ನು ದೇವರು ದಯಪಾಲಿಸಲಿ ಹಾಗೂ ಶ್ರೀಗಳು ಆಶೀರ್ವದಿಸಲಿ ಎಂದು ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿದರು. ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಶಿಕ್ಷಣದ ಉದ್ದೇಶ ಕೇವಲ ಬದುಕಿನ ಧ್ಯೇಯವಲ್ಲ. ಅದು ಜ್ಞಾನವನ್ನು ಕೊಡುವಂತದ್ದು ಎಂದು ಬಾಲಗಂಗಾಧರನಾಥ ಸ್ವಾಮೀಜಿಯವರ ಚಿಂತನೆ ಮತ್ತು ಸಂಕಲ್ಪವನ್ನು ಸ್ಮರಿಸಿಕೊಂಡರು. ಬದುಕಿಗೆ ಜ್ಞಾನದ ಹೊಳಪನ್ನು ಹೆಚ್ಚಿಸುವುದೇ ವಿಜ್ಞಾನ, ವಿಜ್ಞಾನಕ್ಕೆ ತಂತ್ರಜ್ಞಾನ ಬಳಕೆಯ ಕಲೆಯನ್ನು ತಿಳಿದ, ಜ್ಞಾನದ ವಿವೇಕ ಇರುವವನೇ ವಿಜ್ಞಾನಿ. ಈ ವಿಶಿಷ್ಟ ಜ್ಞಾನದ ಬೆಳಕಲ್ಲಿ ವಿಜ್ಞಾನ–ತಂತ್ರಜ್ಞಾನವನ್ನು ಅರಿಯೋಣ ಎಂದು ವಿಜ್ಞಾನ ಮೇಳದ ಸಂಕಲ್ಪವನ್ನು ವಿವರಿಸಿದರು.

ವಿಧಾನಪರಿಷತ್ ಸದಸ್ಯ ಬೋಜೆಗೌಡ ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಸಿ.ಕೆ.ಸುಬ್ಬರಾಯ ಮಾತನಾಡಿದರು. ಶಿಕ್ಷಣ ಟ್ರಸ್ಟ್‌ನ ಮುಖ್ಯ ಆಡಳಿತಾಧಿಕಾರಿ ಡಾ. ಎನ್ ಎಸ್. ರಾಮೇಗೌಡ ತಮ್ಮ ಪ್ರಾಸ್ತಾವಿಕ ನುಡಿದರು.

ಒಂದನೇ ಪುಟದಿಂದ

ದೇವರಾಜ ಅರಸು ಪ್ರತಿಮೆ ಸ್ಥಾಪನೆ

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಮೆ ಸ್ಥಾಪನೆ ಮಾಡಲಾಗುತ್ತಿರುವುದು ಸಂತೋಷವನ್ನುಂಟು ಮಾಡಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸಿ, ಉಳುಮೆ ಮಾಡುತ್ತಿದ್ದ ವ್ಯಕ್ತಿಯನ್ನು ಒಡೆಯನನ್ನಾಗಿ ಮಾಡಿದ ಕೀರ್ತಿ ದೇವರಾಜ ಅರಸ್ ಅವರಿಗೆ ಸಲ್ಲುತ್ತದೆ ಎಂದರು.

ಜೂನ್ ತಿಂಗಳಲ್ಲಿ ದೇವರಾಜ ಅರಸ್ ಅವರ ಪುಣ್ಯಸ್ಮರಣೆ, ಆಗಸ್ಟ್‌ನಲ್ಲಿ ಜನ್ಮ ದಿನದ ಕಾರ್ಯಕ್ರಮ ಇರುತ್ತದೆ. ಅಷ್ಟರೊಳಗೆ ಪ್ರತಿಮೆ ಪ್ರತಿಷ್ಠಾಪನೆ ಮಾಡುವ ಗುರಿ ಹೊಂದಬೇಕು. ಈ ಹಿಂದೆ ಅರಸು ಅವರ ಹುಟ್ಟೂರು ಕಲ್ಲಹಳ್ಳಿ ಗ್ರಾಮವನ್ನು ಅಭಿವೃದ್ಧಿ ಮಾಡಲು ಎರಡು ವರ್ಷ ದೀರ್ಘಾವಧಿ ಬೇಕಾಯಿತು. ಈ ಹಿನ್ನೆಲೆಯಲ್ಲಿ ನಿಗದಿತ ಅವಧಿಯಲ್ಲಿ ಪ್ರತಿಮೆ ಸ್ಥಾಪನೆ ಮಾಡುವ ಅನಿವಾರ್ಯತೆ ಇದೆ. ವಿಳಂಬ ಮಾಡಬಾರದು. ಪ್ರತಿಮೆ ಉದ್ಘಾಟನೆ ವೇಳೆ ಅರಸು ಅವರು ಜಾರಿಗೆ ತಂದ ಕಾರ್ಯಕ್ರಮಗಳ ಫಲಾನುಭವಿಗಳಿಗೆ ಸನ್ಮಾನ ಮಾಡುವ ಮೂಲಕ ಅದ್ದೂರಿ ಕಾರ್ಯಕ್ರಮ ನಡೆಸಬೇಕು ಎಂದು ಸಲಹೆ ನೀಡಿದರು. ದೇವರಾಜ ಅರಸ್ ಪ್ರತಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆಸಕ್ತಿ ವಹಿಸಿದ್ದರು. ವಿಧಾನಸಭಾ ಅಧಿವೇಶನ ನಡೆಯುತ್ತಿರುವುದರಿಂದ ಮುಖ್ಯಮಂತ್ರಿಗಳು ಬಂದಿಲ್ಲ. ಅನಾರೋಗ್ಯ ಕಾರಣದಿಂದ ಜಿಲ್ಲಾ ಮಂತ್ರಿಗಳು ಆಗಮಿಸಿಲ್ಲ. ಮುಂದಿನ ವಾರ ಅಥವಾ ಹತ್ತು ದಿನದಲ್ಲಿ ಲೋಕಸಭಾ ಚುನಾವಣೆಯ ನೀತಿ ಸಂಹಿತ ಜಾರಿಯಾಗುವ ಸಾಧ್ಯತೆ ಇರುವುದರಿಂದ ಇಂದು ಸರಳವಾಗಿ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು.

ಸಾಮಾಜಿಕ ನ್ಯಾಯಕ್ಕೆ ಭೂಮಿಕೆ ಹಾಕಿದ ಧೀರ: ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿ, ಹಾವನೂರು ಆಯೋಗದ ವರದಿಯನ್ನು ಜಾರಿಗೊಳಿಸಿ ಎಲ್ಲ ಜಾತಿ, ಧರ್ಮದವರಿಗೂ ರಾಜಕೀಯ ಮೀಸಲಾತಿ ಕಲ್ಪಿಸಿದ ಧೀಮಂತ ನಾಯಕ ದೇವರಾಜ ಅರಸ್. ಸಾಮಾಜಿಕ ನ್ಯಾಯಕ್ಕೆ ಭೂಮಿಕೆ ಹಾಕಿದವರು. 30 ಲಕ್ಷ ಎಕರೆ ಭೂಮಿಯನ್ನು ಲಕ್ಷಾಂತರ ಕುಟುಂಬಕ್ಕೆ ನೀಡಿದ್ದಾರೆ. ಈಗಿನ ಸರ್ಕಾರಗಳು 20x30 ಅಳತೆಯ ನಿವೇಶನ ಕೊಡಲು ಸಾಧ್ಯವಾಗದ ಸಂದರ್ಭದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಹಂಚಿ ಭೂ ಒಡೆಯರನ್ನಾಗಿ ಮಾಡಿದ್ದಾರೆ. ಮೈಸೂರಿನಿಂದ ಚಿಮ್ಮಿದ ಚಿಲುಮೆಯೊಂದು ಕರ್ನಾಟಕದಲ್ಲಿ ಮಾಡಿದ ಕ್ರಾಂತಿಯು ಇಡೀ ದೇಶದ ಜನರನ್ನು ಗಮನ ಸೆಳೆದಿತ್ತು. 1978ರಲ್ಲಿ ನನ್ನಂತಹವನನ್ನು ಗುರುತಿಸಿ ಶಾಸಕನನ್ನಾಗಿ ಮಾಡಿದರು. ಅಂದು 70 ಮಂದಿ 30 ವರ್ಷದೊಳಗಿನವರು ಶಾಸಕರಾಗುವ ಜತೆಗೆ ಎಲ್ಲಾ ವರ್ಗದ ಜನರಿಗೂ ಅಧಿಕಾರ ಸಿಗುವಂತೆ ಮಾಡಿದರು. ಎಂ.ಮಲ್ಲಿಕಾರ್ಜುನಖರ್ಗೆ, ಜನಾರ್ಧನ ಪೂಜಾರಿ, ಎಂ.ವೀರಪ್ಪ ಮೊಯ್ಲಿ ಸೇರಿದಂತೆ ಅನೇಕರು ಡಿ.ದೇವರಾಜ ಅರಸು ಅವರ ನೆರಳಿನಲ್ಲಿ ಬೆಳೆದವರು ಎಂದು ತಿಳಿಸಿದರು.

ಚಿನ್ನಪ್ಪರೆಡ್ಡಿ, ವೆಂಕಟಸ್ವಾಮಿ ಆಯೋಗ ರಚನೆ ಮಾಡಿ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ವರ್ಗದವರಿಗೆ ಮೀಸಲಾತಿ ನೀಡಿದರು. ಬರೀ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡಲಿಲ್ಲ. ವೀರಶೈವ–ಲಿಂಗಾಯಿತರು, ಒಕ್ಕಲಿಗರಿಗೂ ಮೀಸಲಾತಿ ನೀಡಿದ್ದನ್ನು ಮರೆಯಬಾರದು. ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿ ಶಿಕ್ಷಣ ಸಿಗುವಂತೆ ಮಾಡಿದರು. ದುಡಿಯುವ ಕೈಗಳಿಗೆ ಉದ್ಯೋಗ ನೀಡಿದರು. ಅನ್ನ, ಶಿಕ್ಷಣ ಹಾಗೂ ರಾಜಕೀಯ ಅಧಿಕಾರ ನೀಡಿದ ಫಲವಾಗಿ ಇಂದು ಕೋಟ್ಯಾಂತರ ಜನರು ಅವರನ್ನು ನೆನಪಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ದೇವರಾಜ ಅರಸ್ ಅವರು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಲವು ಕ್ರಾಂತಿಕಾರಕ ಯೋಜನೆಗಳನ್ನು ಜಾರಿಗೆ ತಂದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಎರಡು ಬಾರಿ ಅಧಿಕಾರಿಗಳು ಮತ್ತು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಸಭೆಗಳನ್ನು ನಡೆಸಿ, ಸರ್ಕಾರದಿಂದ ಅನುಮೋದನೆ ಕೊಡಿಸಿದರು ಎಂದು ತಿಳಿಸಿದರು.

ಇದಕ್ಕೂ ಮುನ್ನ ಸರ್ವಧರ್ಮ ಪ್ರಾರ್ಥನೆ ನೆರವೇರಿತು. ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಮಾಜಿ ಮೇಯರ್‌ಗಳಾದ ದಕ್ಷಿಣಾ ಮೂರ್ತಿ, ಪುರುಷೋತ್ತಮ್, ದೇವರಾಜ ಅರಸ್ ಅವರ ಮೊಮ್ಮಗ ಸೂರಜ್ ಹೆಗಡೆ, ಮುಖಂಡರಾದ ಬಿ.ಎಸ್.ಶ್ರೀಧರ್‌ರಾಜೇ ಅರಸ್, ಪ್ರೊ.ಪಿ.ವಿ.ನಂಜರಾಜೇ ಅರಸ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ದೇವರಾಜ ಅರಸ್ ಪ್ರತಿಮೆ ಪ್ರತಿಷ್ಠಾನದ ಜಾಕಿರ್ ಹುಸೇನ್, ಡೈರಿ ವೆಂಕಟೇಶ್, ಕಸಾಪ ಮಾಜಿ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮತ್ತೆ ಅಧಿಕಾರ

ಪರಿಗಣಿಸಿ, ಸೂಕ್ತ ಕ್ರಮ ವಹಿಸದಿದ್ದರೆ ಬ್ಯಾಂಕ್ ಮತ್ತೆ ನಷ್ಟಕ್ಕೆ ಗುರಿಯಾಗುವುದು ನಿಶ್ಚಿತ ಎಂದು ಎಚ್ಚರಿಸಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೇಮಕಗೊಂಡ ಆಡಳಿತಾಧಿಕಾರಿಯ ಅವಧಿ ಮೂರು ತಿಂಗಳನ್ನು ಮೀರಬಾರದೆಂದು ಕಾಯ್ದೆಯಲ್ಲಿ ತಿಳಿಸಲಾಗಿದೆ. ಆದರೆ ರಾಜ್ಯ ಸರ್ಕಾರ ತಿದ್ದುಪಡಿ ತರುವ ಮೂಲಕ ಇಷ್ಟ ಬಂದಂತೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ. ಮೂರು ತಿಂಗಳ ಅವಧಿಯನ್ನು ಕಾಯ್ದೆಯಿಂದ ಕಿತ್ತುಹಾಕಿ ಆಡಳಿತಾಧಿಕಾರಿಯನ್ನು ಅನಿರ್ದಿಷ್ಟಾವಧಿಗೆ ಮುಂದುವರೆಸುವ ನಿರ್ಧಾರ ಸಹಕಾರ ಕ್ಷೇತ್ರಕ್ಕೆ ಅಘಾತಕಾರಿಯಾಗಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ಸರ್ಕಾರ, ಸಹಕಾರ ನಿಯಮಕ್ಕೆ ತಿಲಾಂಜಲಿ ಬಿಡುತ್ತಿದೆ. ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳಲ್ಲಿ ಮೂವರು ನಾಮನಿರ್ದೇಶನ ಸದಸ್ಯರನ್ನು ನೇಮಿಸಲು ಕಾಯ್ದೆಗೆ ತಿದ್ದುಪಡಿ ತರಲು ಹೊರಟಿರುವುದು ಸರಿಯಲ್ಲ. ಈಗಾಗಲೇ ವೈದ್ಯನಾಥನ್ ವರದಿಯನ್ವಯ ಕೇಂದ್ರ ಮತ್ತು ನಬಾರ್ಡ್‌ನೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಕುರಿತು ರಾಜ್ಯ ಸರ್ಕಾರ ಸ್ಪಷ್ಟೀಕರಣ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ 2008ರ ಮಾರ್ಚ್ 20ರಂದು ಕೇಂದ್ರ ಸರ್ಕಾರ ಮತ್ತು ನಬಾರ್ಡ್‌ನೊಂದಿಗೆ ಮಾಡಿಕೊಂಡಿರುವ ಒಪ್ಪಂದ ಮೀರಲಾಗಿದೆ. ನಾಮನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಬಾರದೆಂಬ ನಿಯಮವನ್ನು ಒಪ್ಪಿ ಸಹಿ ಹಾಕಲಾಗಿದೆ. ಒಪ್ಪಂದದ ಅನುಸಾರವಾಗಿ ಕೇಂದ್ರ ಸರ್ಕಾರ ಕರ್ನಾಟಕದ 4,474 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪುನಶ್ಚೇತನಕ್ಕಾಗಿ 556 ಕೋಟಿ ರೂ. ಆರ್ಥಿಕ ನೆರವು ನೀಡಿದೆ. ಆದರೆ ರಾಜ್ಯ ಸರ್ಕಾರ ಮೂವರನ್ನು ನಾಮನಿರ್ದೇಶನ ಮಾಡಲು ಮುಂದಾದರೆ ಒಪ್ಪಂದ ಉಲ್ಲಂಘಿಸಿದಂತಾಗುತ್ತದೆ. ಹಿಂದಿನ ತ್ರಿಪಕ್ಷೀಯ ಒಪ್ಪಂದದ ಬಗ್ಗೆ ರಾಜ್ಯ ಸರ್ಕಾರದ ಸ್ಪಷ್ಟ ನಿಲುವೇನು? ಎಂದು ಪ್ರಶ್ನಿಸಿದರು.

ಎಂಸಿಡಿಸಿಸಿ ಆಡಳಿತ ಮಂಡಳಿ ಚುನಾವಣೆ ನಡೆಸಲು ಸರ್ಕಾರಕ್ಕೆ ಮೂರು ತಿಂಗಳ ಕಾಲಾವಕಾಶದ ಅಗತ್ಯವೇನಿದೆ?. ನೋಟೀಸ್ ನೀಡುವ ಅವಧಿಯನ್ನು 45ರಿಂದ 30 ದಿನಗಳಿಗೆ ಕಡಿತಗೊಳಿಸಲಾಗಿದೆ. ಬಾಕಿ ಪಾವತಿಗೆ 21ರಿಂದ 20 ದಿನಕ್ಕೆ ಕಡಿತ ಗೊಳಿಸಲಾಗಿದೆ. ನೋಟೀಸ್ ನೀಡುವ ಅವಧಿಯನ್ನು ನೀವೇ ಕಡಿತಗೊಳಿಸಿದ್ದೀರಿ. ಹೀಗಿರುವಾಗ ಚುನಾವಣೆಗೆ 3 ತಿಂಗಳು ಏಕೆ ಬೇಕಿದೆ? ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಪ್ರಶ್ನಿಸುವ ಮೂಲಕ ಸರ್ಕಾರಕ್ಕೆ ಚಾಟಿ ಬೀಸಿದರು.

ಯುವ ಶಾಸಕನಿಗೆ ಹಿರಿಯರ ಪ್ರಶಂಸೆ

ಸಹಕಾರ ಕ್ಷೇತ್ರದಲ್ಲಿ ದಶಕದಿಂದ ಒಡನಾಟ ಹೊಂದಿರುವ ಜಿ.ಡಿ.ಹರೀಶ್‌ಗೌಡರು, ಎಂಸಿಡಿಸಿಸಿ ಬ್ಯಾಂಕ್ ನಿಕಟಪೂರ್ವ ಅಧ್ಯಕ್ಷರಾಗಿರುವುದರಿಂದ ಎಲ್ಲಾ ವಿಚಾರಗಳನ್ನು ದಾಖಲೆ ಸಹಿತ ಸದನದ ಮುಂದಿಟ್ಟರು. ಇವರ ಸಹಕಾರ ಜ್ಞಾನವನ್ನು ಗಮನಿಸಿದ ಶಾಸಕರು ಏಕಾಗ್ರತೆ ಯಿಂದ ಅವರ ಮಾತುಗಳನ್ನು ಆಲಿಸಿದರು. ಸಚಿವ ಹೆಚ್.ಕೆ. ಪಾಟೀಲ್ ಸೇರಿದಂತೆ ಹಲವು ಹಿರಿಯ ಸದಸ್ಯರು ಹರೀಶ್‌ಗೌಡರನ್ನು ಪ್ರಶಂಸಿಸಿದರು. ಸಹಕಾರ ಕ್ಷೇತ್ರದ ರಕ್ಷಣೆ ಬಗ್ಗೆ ಗಂಭೀರ ಚರ್ಚೆಯಾಗುವ ಅಗತ್ಯವಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳುವ ಮೂಲಕ ಹರೀಶ್‌ಗೌಡರಿಗೆ ಸಾಥ್ ನೀಡಿದರು.

ನಕಲಿ ದಾಖಲೆ ಸೃಷ್ಟಿಸಿ ಅಸಲಿ ತಲೆ ಮೇಲೆ ಹೊಡೆದಂತೆ ನಿವೇಶನ ಮಾರಾಟ ಮಾಡಿ ತಲೆ ಮರೆಸಿಕೊಂಡಿರುವ ನಕಲಿ ಮಹದೇವನ ಕಂಡಿರಾ...!?

ಮೈಸೂರು, ಫೆ.19(ಎಸ್‌ಬಿಡಿ)– ವ್ಯಕ್ತಿಯೊಬ್ಬರ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿಕೊಂಡು ಅವರ ನಿವೇಶನವನ್ನು ಬೇರೊಬ್ಬರ ಹೆಸರಿಗೆ ನೋಂದಣಿ ಮಾಡಿಸಿ ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ಪೊಲೀಸರು ಸಾರ್ವಜನಿಕರ ಸಹಕಾರ ಕೋರಿದ್ದಾರೆ.

ಮೈಸೂರಿನ ಕೆ.ಆರ್.ಮೊಹಲ್ಲಾ, ವೀಣೆ ಶೇಷಣ್ಣ ರಸ್ತೆ ನಿವಾಸಿ, ಸರ್ಕಾರಿ ಐಟಿಐ ಕಾಲೇಜಿನ ನಿವೃತ್ತ ನೌಕರ ಮಹದೇವ ಅವರ ನಿವೇಶನವನ್ನು ಫರ್ವೀನ್ ತಾಜ್ ಎಂಬುವವರ ಹೆಸರಿಗೆ ನೋಂದಣಿ ಮಾಡಿಸಿ, ನಾಪತ್ತೆಯಾಗಿರುವ ನಕಲಿ ಮಹದೇವನ ಬಗ್ಗೆ ಸುಳಿವು ದೊರೆತರೆ ಮಾಹಿತಿ ನೀಡುವಂತೆ ಉದಯಗಿರಿ ಠಾಣೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏನಿದು ಪ್ರಕರಣ?: ಕೆ.ಆರ್.ಮೊಹಲ್ಲಾ ನಿವಾಸಿ ಮಹದೇವ ಅವರಿಗೆ 1987ರಲ್ಲಿ ಸಿಐಟಿಬಿ(ಇಂದಿನ ಮುಡಾ)ಯ ಆಶಾಮಂದಿರ ಸಾಮೂಹಿಕ ವಸತಿ ಯೋಜನೆಯಡಿ ದೇವನೂರು ಬಡಾವಣೆ, ರಾಜೀವ್ ನಗರ 1ನೇ ಹಂತದ ಶಿವಣ್ಣ ವೃತ್ತದ ಬಳಿ ನಿವೇಶನ (ಸಂ.2453) ಮಂಜೂರಾಗಿತ್ತು ನಿವೇಶನದ ಹಂಗಾಮಿ ಸ್ವಾಧೀನ ಪತ್ರ ಪಡೆದಿದ್ದ ಮಹದೇವ, ಹಣದ ಅಭಾವದಿಂದ ಮನೆ ನಿರ್ಮಿಸದೆ ನಿವೇಶನವನ್ನು ಖಾಲಿ ಬಿಟ್ಟಿದ್ದರು.

ಈ ನಡುವೆ ವಾಸದ ಮನೆ ಬದಲಿಸುವ ಸಂದರ್ಭದಲ್ಲಿ ಸಿಐಟಿಬಿ ನಿವೇಶನದ ಮೂಲ ದಾಖಲೆಗಳು ಕಳೆದು ಹೋಗಿದ್ದವು. ಈ ಬಗ್ಗೆ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ 2020ರ ಅಕ್ಟೋಬರ್ 13ರಂದು ದೂರು ನೀಡಿದ್ದರು. ಆದರೆ ಕೆಲ ದಿನಗಳ ಬಳಿಕ ಮುಡಾ ಅಧಿಕಾರಿಗಳು ಮಹದೇವ ಅವರ ಮನೆ ಬಳಿ ಬಂದು ನಿಮ್ಮ ನಿವೇಶನದ ಖಾತೆ ಬದಲಾವಣೆ ಅರ್ಜಿ ಬಂದಿದೆ ಈ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಪರಿಶೀಲನೆಗೆ ಬಂದಿರುವುದಾಗಿ ತಿಳಿಸಿದರು. ಆಗ ಆಘಾತಕ್ಕೊಳಗಾದ ಮಹದೇವ ಅವರು ನಾನು ಯಾರಿಗೂ ನಿವೇಶನ ಮಾರಾಟ ಮಾಡಿಲ್ಲ ಎಂದು ಅಧಿಕಾರಿಗಳಿಗೆ ತಿಳಿಸಿದರು.



ಆರೋಪಿ ಮಹದೇವ

ಬಳಿಕ ಮುಡಾದಿಂದ ಆರ್‌ಟಿಐ ಮೂಲಕ ತಮ್ಮ ನಿವೇಶನದ ನಕಲು ದಾಖಲೆಗಳನ್ನು ಪಡೆದು ಪರಿಶೀಲಿಸಿದಾಗ ಬೇನಾಮಿ ವ್ಯಕ್ತಿಯೊಬ್ಬ ತಾನೇ ನೈಜ ಮಾಲೀಕ ಎಂದು ಹೇಳಿಕೊಂಡು 2020ರ ಜುಲೈ 16ರಂದು ಫರ್ವಿನ್ ತಾಜ್ ಅವರಿಗೆ ಮೈಸೂರು ಪೂರ್ವ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನಿವೇಶನವನ್ನು ನೋಂದಣಿ ಮಾಡಿಸಿದ್ದು, ರಿಜಿಸ್ಟ್ರೇಷನ್ ಪತ್ರದ ಆಧಾರದಲ್ಲಿ ಅವರು ಖಾತೆ ವರ್ಗಾವಣೆಗೆ ಮುಡಾಗೆ ಅರ್ಜಿ ಸಲ್ಲಿಸಿರುವುದು ಗೊತ್ತಾಗಿದೆ. ಇದಕ್ಕೂ ಮುನ್ನ ಬೇನಾಮಿ ವ್ಯಕ್ತಿ, ಮಹದೇವ ಅವರ ಹೆಸರಿನಲ್ಲಿ ಆಧಾರ್ ಕಾರ್ಡ್ ಇನ್ನಿತರ ದಾಖಲೆಗಳನ್ನು ಸೃಷ್ಟಿಸಿಕೊಂಡು, ನಗರ ಪಾಲಿಕೆ ಕಚೇರಿಗೆ ಅರ್ಜಿ ಸಲ್ಲಿಸಿ, ತನ್ನ ಹೆಸರಿಗೆ ಕಾರ್ಪೊರೇಷನ್ ಖಾತೆ ನೋಂದಣಿ ಮಾಡಿಸಿಕೊಂಡಿದ್ದ ಎಂದು ತಿಳಿದುಬಂದಿದೆ.

ಬೇನಾಮಿ ವ್ಯಕ್ತಿ ನಿವೇಶನವನ್ನು ಬೇರೊಬ್ಬರಿಗೆ ನೋಂದಣಿ ಮಾಡಿಸಿ, ವಂಚಿಸಿರುವ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಗೆ 2021ರ ಫೆಬ್ರವರಿ 12ರಂದು ದೂರು ನೀಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿ ಪತ್ತೆಗೆ ಶೋಧ ನಡೆಸಿದರಾದರೂ ಆತ ಪತ್ತೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಹಕಾರ ಕೋರಿದ್ದು, ಯಾರಿಗಾದರೂ ಫೋಟೋದಲ್ಲಿರುವ ವ್ಯಕ್ತಿ ಬಗ್ಗೆ ಸುಳಿವು ಸಿಕ್ಕಲ್ಲಿ ಉದಯಗಿರಿ ಠಾಣೆ (0821–418309), ಇನ್ಸ್‌ಪೆಕ್ಟರ್ (9480802234) ಅಥವಾ ಪಿಎಸ್‌ಐ(9480675100)ಗೆ ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ.

ನಿರ್ಮಾಣ ಹಂತದಲ್ಲಿನ ಕಟ್ಟಡದಲ್ಲಿ ವಿದ್ಯುತ್ ಸ್ಪರ್ಶದಿಂದ ವ್ಯಕ್ತಿ ಸಾವು


ಮೈಸೂರು, ಫೆ.19(ಎಂಕೆ)– ನಿರ್ಮಾಣ ಹಂತದಲ್ಲಿರುವ ಕಟ್ಟಡದಲ್ಲಿ ವಿದ್ಯುತ್ ಸ್ಪರ್ಶದಿಂದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ಸಂಜೆ ನಗರದ ಗಾಂಧಿಚೌಕ(ಒಲಂಪಿಯಾ ಗಲ್ಲಿ)ದಲ್ಲಿ ನಡೆದಿದೆ.

ಮೈಸೂರಿನ ಶಾಂತಿನಗರ ನಿವಾಸಿ ಅಕ್ಬರ್ ಖಾನ್(60) ಮೃತಪಟ್ಟ ವ್ಯಕ್ತಿ. ನಗರದ ಗಾಂಧಿಚೌಕದಲ್ಲಿ ನಿರ್ಮಾಣ ಹಂತದಲ್ಲಿರುವ(ಒಲಂಪಿಯಾ ಚಿತ್ರಮಂದಿರ) ಕಟ್ಟಡದಲ್ಲಿ ಸಂಜೆ 7 ಗಂಟೆ ವೇಳೆ ವಿದ್ಯುತ್ ಹರಿದು ಮೃತಪಟ್ಟಿದ್ದಾರೆ.

ಹಲವು ವರ್ಷಗಳಿಂದ ಎಲೆಕ್ಟ್ರಿಕಲ್ ಕೆಲಸ ಮಾಡಿಕೊಂಡ ಇವರು, ಒಲಂಪಿಯಾ ಚಿತ್ರಮಂದಿರ ಕಟ್ಟಡದ ಬಲಭಾಗದಲ್ಲಿರುವ ಕೆಲ ಮಳಿಗೆಗಳಲ್ಲಿ ಕರೆಂಟ್ ಕನೆಕ್ಷನ್ ಕಟ್ಟಾಗಿದೆ. ಅಲ್ಲಿನ ಕೆಲ ವ್ಯಾಪಾರಿಗಳು ಅಕ್ಬರ್ ಖಾನ್ ಅವರಿಗೆ ಕರೆಂಟ್ ಕನೆಕ್ಷನ್ ಕೊಡುವಂತೆ ತಿಳಿಸಿದ್ದಾರೆ. ಕನೆಕ್ಷನ್ ಕೊಡುವುದಕ್ಕೆ ಸಂಜೆ ವೇಳೆಗೆ ಕಟ್ಟಡದೊಳಗೆ ಹೋದ ಅವರು, ಕೆಲಸ ಮಾಡುವಾಗ ವಿದ್ಯುತ್ ಹರಿದು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೇವರಾಜ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿರಿಸಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಡಾ.ವೆಂಕಟರಾಜು ಅಧಿಕಾರ ಸ್ವೀಕಾರ



ಮೈಸೂರು, ಫೆ.19– ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಹಿರಿಯ ಕೆಎಎಸ್ ಅಧಿಕಾರಿ ಡಾ.ಎನ್.ಸಿ. ವೆಂಕಟರಾಜು ಸೋಮವಾರ ಸಂಜೆ ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಿಯದರ್ಶಿನಿ ಅವರನ್ನು ಆಡಳಿತ ತರಬೇತಿ ಸಂಸ್ಥೆ ಬೋಧಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಎನ್.ಸಿ.ವೆಂಕಟರಾಜು ಮೈಸೂರು ಜಿಲ್ಲೆಯ ಉಪ ವಿಭಾಗಾಧಿಕಾರಿ, ಮುಡಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಕಾರ್ಮಿಕ ಇಲಾಖೆಗೆ ವರ್ಗಾವಣೆಯಾಗಿದ್ದರು.

ರಾಜ್ಯದ ಎಲ್ಲಾ ವಿವಿಗಳಲ್ಲಿ ಏಕರೂಪದ ಅಂಕ, ಗ್ರೇಡಿಂಗ್ ವ್ಯವಸ್ಥೆ ಜಾರಿ: ಸುಧಾಕರ್

ಬೆಂಗಳೂರು: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಅಂಕ ವ್ಯವಸ್ಥೆ, ಗ್ರೇಡ್ ವ್ಯವಸ್ಥೆ ಜಾರಿಗೆ ತರಲಾಗುತ್ತದೆ ಅಂತ ಉನ್ನತ ಶಿಕ್ಷಣ ಸಚಿವ ಸುಧಾಕರ್ ತಿಳಿಸಿದ್ದಾರೆ.

ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 30 ಖಾಸಗಿ ವಿವಿಗಳು ಇವೆ. ಖಾಸಗಿ ವಿವಿಗಳಲ್ಲಿ ಗ್ರೇಡಿಂಗ್ ಸಿಸ್ಟಮ್, ಅಂಕ ವ್ಯವಸ್ಥೆ ಬೇರೆ ಬೇರೆ ಇದೆ. ನಮ್ಮ ಸರ್ಕಾರ ವಿವಿಗಳ ವ್ಯವಸ್ಥೆ ಬೇರೆ ಇದೆ. ಇದರಿಂದ ಸಮಸ್ಯೆ ಆಗ್ತಿದೆ. ಇತ್ತೀಚೆಗೆ ಒಬ್ಬ ವಿದ್ಯಾರ್ಥಿ ಸಹ ಅಂಕ ಕಡಿಮೆ ಬಂತು ಅಂತ ಆತ್ಮಹತ್ಯೆ ಮಾಡಿಕೊಂಡ. ಇದರಿಂದಾಗಿ ಅಂಕ ಮಾದರಿ ಅಧ್ಯಯನಕ್ಕೆ ಒಂದು ಸಮಿತಿ ಮಾಡಿದ್ವಿ. ಸಮಿತಿ ಎಲ್ಲಾ ವಿವಿಗಳಲ್ಲಿ ಅಂಕ ಮಾದರಿ, ಗ್ರೇಡ್ ಮಾದರಿ ಏಕರೂಪವಾಗಿ ಮಾಡಬೇಕು ಅಂತ ವರದಿ ಕೊಟ್ಟಿದೆ. ಕರ್ನಾಟಕ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಇದನ್ನು ಇಟ್ಟು ನಿರ್ಧಾರ ಮಾಡ್ತೀವಿ. ಖಾಸಗಿ, ಸರ್ಕಾರ ವಿವಿಗಳಿಗೆ ಏಕರೂಪದ ಅಂಕ, ಗ್ರೇಡ್ ವ್ಯವಸ್ಥೆ ಜಾರಿ ಮಾಡ್ತೀವಿ ಎಂದರು.

ಡಾಕ್ಟರೇಟ್ ಪದವಿಗಳ ಬಗ್ಗೆ ಸ್ವಲ್ಪ ಗೊಂದಲ ಇದೆ. ಸುಪ್ರೀಂ ಕೋರ್ಟ್ ಆದೇಶದ ಮೇಲೆ ನಾವು ಇದನ್ನ ಜಾರಿ ಮಾಡ್ತೀವಿ. ಖಾಸಗಿ ವಿವಿಗಳು ಡಾಕ್ಟರೇಟ್ ಕೊಡುವ ವ್ಯವಸ್ಥೆ ಮಾಡುತ್ತಿವೆ. ಹೀಗಾಗಿ ಎಲ್ಲಾ ವಿವಿಗಳಲ್ಲಿ ಏಕರೂಪದ ಡಾಕ್ಟರೇಟ್ ವ್ಯವಸ್ಥೆ ತರುವ ನಿಟ್ಟಿನಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ತೀವಿ ಅಂತ ತಿಳಿಸಿದರು.

ಕೇಂದ್ರದ ಅನುದಾನ ಬಿಡುಗಡೆಗೆ ಆಗ್ರಹಿಸಿ ನಾಳೆಯಿಂದ ಅಹೋರಾತ್ರಿ ಧರಣಿ



ಮೈಸೂರು, ಫೆ.19(ಬಿಎಲ್‌ಯು)– ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆಯ ಪಾಲಿನ ಬಿಡುಗಡೆಗೆ ಆಗ್ರಹಿಸಿ ಕರ್ನಾಟಕ ಜನರಂಗ ಮೈಸೂರಿನ ಚಿಕ್ಕಗಡಿಯಾರದ ಬಳಿ ಫೆಬ್ರವರಿ 21ರಿಂದ 48 ಗಂಟೆಗಳ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಲಿದೆ ಎಂದು ಜನರಂಗದ ಸಂಚಾಲಕರೂ ಆದ ಪತ್ರಕರ್ತ ಟಿ.ಗುರುರಾಜ್ ತಿಳಿಸಿದ್ದಾರೆ.


ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.21ರಂದು ಬೆಳಗ್ಗೆ 10 ಗಂಟೆಗೆ ಆರಂಭವಾಗುವ ಪ್ರತಿಭಟನೆ ಫೆ.23ರ ಬೆಳಗ್ಗೆ 10 ಗಂಟೆವರೆಗೆ ನಡೆಯಲಿದೆ ಎಂದರು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಿರುವ 1.87 ಲಕ್ಷ ಕೋಟಿ ಅನುದಾನ ಬಾಕಿ ಬಿಡುಗಡೆಗೆ ಆಗ್ರಹಿಸಿ ನಡೆಯುತ್ತಿರುವ ಈ ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟ, ರೈತ ಸಂಘಟನೆಗಳು, ಹಸಿರು ಸೇನೆ ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಲಿವೆ ಎಂದರು.

ಈ ವೇಳೆ ಮಾತನಾಡಿದ ರಂಗಕರ್ಮಿ ಜನಾರ್ಧನ್(ಜನ್ನಿ), ಸಮಾಜದ ಕಟ್ಟಕಡೆಯ ವ್ಯಕ್ತಿ ತೆರಿಗೆ ಪಾವತಿ ಮಾಡಿದ್ದಾನೆ. ಆದರೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಿಗುವ ಪಾಲು ದೊರೆಯದೆ, ಭಾರೀ ಅನ್ಯಾಯವಾಗುತ್ತಿದೆ ಎಂದು ದೂರಿದರು. ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಕನ್ನಡಪರ ಹೋರಾಟಗಾರ ಮೋಹನ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರೈತರು ದೇಶದ ಬೆನ್ನೆಲುಬು ಮಾತ್ರವಲ್ಲ ಅನ್ನ ಬ್ರಹ್ಮ

- ಮೈಸೂರು ಜಿಲ್ಲಾ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕಿ ಹೆಚ್.ಬಿ.ಹೇಮಲತಾ ಬಣ್ಣನೆ
- ತೋಟಗಾರಿಕೆ ಮತ್ತು ಕೃಷಿ ಬೆಳೆಯಲ್ಲಿ ಹನಿ ನೀರಾವರಿ ಮತ್ತು ರಸಾವರಿ ಪದ್ಧತಿ ಅಳವಡಿಕೆ



ಮೈಸೂರು,ಫೆ.19– ಎಷ್ಟೇ ಕಷ್ಟ, ತೊಂದರೆಗಳು ಎದುರಾದರೂ ಕುಗ್ಗದೆ ನಮಗೆಲ್ಲ ಆಹಾರವನ್ನು ನೀಡುವ ರೈತರು ಈ ದೇಶದ ಬೆನ್ನೆಲುಬು ಹಾಗೂ ಅನ್ನ ಬ್ರಹ್ಮ ಎಂದು ಜಿಲ್ಲಾ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರಾದ ಹೆಚ್.ಬಿ.ಮಧುಲತಾ ಪ್ರಶಂಸಿಸಿದರು.

ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿಯ ರಾಂಪುರ ಗ್ರಾಮದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಮತ್ತು ಕೃಷಿ ಬೆಳೆಯಲ್ಲಿ ಹನಿನೀರಾವರಿ ಹಾಗೂ ರಸಾವರಿ ಪದ್ದತಿಗಳ ಅಳವಡಿಕೆ ವಿಷಯ ಕುರಿತ ಒಂದು ದಿನದ ಹೊರಾಂಗಣ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೂಕ್ಷ್ಮ ನೀರಾವರಿ, ಹನಿ ನೀರಾವರಿ ಪದ್ದತಿಗಳನ್ನು ಅನುಸರಿಸಿ ಪ್ರತಿ ಹನಿ ಅಧಿಕ ಬೆಳೆ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ರೈತರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದರು.

ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಕೆ.ಆರ್.ರವೀಂದ್ರ ಮಾತನಾಡಿ, ಒಂದು ಇಂಚು ಮಣ್ಣು ಉತ್ಪಾದನೆಯಾಗಲು 1000 ವರ್ಷಗಳು ಬೇಕಾಗುತ್ತದೆ. ಮಣ್ಣನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ನಿಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಒಂದು ಬೆಳೆ ಬೆಳೆಯಲು ಹದಿನಾರು ಪೋಷಕಾಂಶಗಳ ಅಗತ್ಯವಿದ್ದು ಅದರಲ್ಲಿ ಮೂರು ಪ್ರಧಾನ ಪೋಷಕಾಂಶಗಳಾದ ಸಾರಜನಕ, ರಂಜಕ, ಪೊಟಾಸ್ ಇನ್ನುಳಿದ 13 ಪೋಷಕಾಂಶಗಳು ಲಘು ಪೋಷಕಾಂಶಗಳಾಗಿದ್ದು ಅವುಗಳ ಬಳಕೆ ಮತ್ತು ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ಚಿಕ್ಕಯ್ಯನಛತ್ರ ಹೋಬಳಿಯ ರೈತ ಸಂಪರ್ಕ ಕೇಂದದ್ರ ಕೃಷಿ ಅಧಿಕಾರಿ ರಘುವೀರ್ ಅವರು ಮಾತನಾಡಿ, ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ದೊರೆಯುವ ಸಹಾಯಧನದ ಬಗ್ಗೆ, ಇಲಾಖೆಯಲ್ಲಿ ಕೃಷಿ ಭಾಗ್ಯಯೋಜನೆ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳ ವಿತರಣೆ ಹಾಗೂ ಕೃಷಿ ಯಾಂತ್ರೀಕರಣ ಯೋಜನೆಯಡಿ ಟ್ರಾಕ್ಟರ್ ಚಾಲಿತ ಕೃಷಿ ಯಂತ್ರೋಪಕರಣಗಳ ವಿತರಣೆ ಮಾಡುತ್ತಿದ್ದು ರೈತರು ರೈತ ಸಂಪರ್ಕ ಕೇಂದ್ರಕ್ಕೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿ ಸವಲತ್ತು ಪಡೆಯಬಹುದೆಂದು ತಿಳಿಸಿದರು.

ನೆಟಾಫೆವ್ ಸಂಸ್ಥೆಯ ಬೇಸಾಯ ಶಾಸ್ತ್ರಜ್ಞರಾದ ಅಂಜನಪ್ಪನವರು, ಹನಿ ನೀರಾವರಿ ಪದ್ದತಿಯಲ್ಲಿ ಕೃಷಿ ಬೆಳೆಗಳಿಗೆ ಹಾಗೂ ತೋಟಗಾರಿಕಾ ಬೆಳೆಗಳಿಗೆ ರಸಗೊಬ್ಬರ ನೀಡುವ ವಿಧಾನ ಹಾಗೂ ಹನಿ ನೀರಾವರಿ ಘಟಕಗಳ ನಿರ್ವಹಣೆ ಬಗ್ಗೆ ರೈತರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಅಧಿಕಾರಿ ಹೆಚ್.ಆರ್.ರಾಜಶೇಖರ್, ಗ್ರಾಮ ಪಂಚಾಯಿತಿ ಸದಸ್ಯರಾದ ಮುದ್ದರಾಮು, ಮಂಜುನಾಥ್ ಹಾಗೂ ಶಿವಮ್ಮ, ಸಹಾಯಕ ತಾಂತ್ರಿಕ ವ್ಯವಸ್ಥಾಪಕಿ ನಂದಿನಿ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಸ್ನಾತಕ ಪದವಿ ಸೆಮಿಸ್ಟರ್‌ಗಳ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ

ಮೈಸೂರು,ಫೆ.19– ವಿವಿಧ ಸ್ನಾತಕ ಪದವಿಯ ಸೆಮಿಸ್ಟರ್ ವಿದ್ಯಾರ್ಥಿಗಳು ಎರಡು ಪಟ್ಟು ಅವಧಿ ಮುಗಿದ ನಂತರವೂ 2, 4, 6 ಮತ್ತು 8ನೇ ಸೆಮಿಸ್ಟರ್‌ಗಳ ಪತ್ರಿಕೆಗಳಲ್ಲಿ ಅನುತ್ತೀರ್ಣಗೊಂಡಿದ್ದರೆ ಅಂತಹ ಪತ್ರಿಕೆಗಳ ಪರೀಕ್ಷೆಯನ್ನು ಪುನಃ ತೆಗೆದುಕೊಳ್ಳಲು ವಿಶ್ವವಿದ್ಯಾನಿಲಯವು ಅವಕಾಶ ನೀಡಿದೆ. ಮೇ ಅಥವಾ ಜೂನ್ 2024ರ ಮಾಹೆಯಲ್ಲಿ ಜರುಗುವ ಪರೀಕ್ಷೆಯನ್ನು ತೆಗೆದುಕೊಳ್ಳಲು ಸದ್ಯದಲ್ಲೇ ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಲಿದ್ದು, ಹೆಚ್ಚಿನ ಮಾಹಿತಿಗಾಗಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗ ಅಥವಾ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ ಕಾಲೇಜನ್ನು ಸಂಪರ್ಕಿಸಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಟನ್ ಕ್ಯಾಂಡಿಯಲ್ಲಿ ಹಾನಿಕಾರಕ ರಾಸಾಯನಿಕ ಅಂಶ ಪತ್ತೆ

ಮೈಸೂರಿನಲ್ಲಿ ಕಾಟನ್ ಕ್ಯಾಂಡಿ ಮಾದರಿ ಸಂಗ್ರಹ

- ಬಟ್ಟೆಗಳಿಗೆ ಬಣ್ಣ ಹಾಕಲು ಬಳಸುವ ರಾಸಾಯನಿಕ ಮಿಶ್ರಣ
- ತಮಿಳುನಾಡು, ಪಾಂಡಿಚೇರಿಯಲ್ಲಿ ಸಂಪೂರ್ಣ ನಿಷೇಧ
- ಕಾಟನ್ ಕ್ಯಾಂಡಿ ತಯಾರಿಕೆ, ಮಾರಾಟ ಕೆಲವೆಡೆ ಶಿಕ್ಷಾರ್ಹ

●ಬಾಪುಲಿಂಗರಾಜೇ ಅರಸ್

ಮೈಸೂರು, ಫೆ.19– ಗುಲಾಬಿ ಬಣ್ಣದಲ್ಲಿದ್ದು, ಇದನ್ನು ನೋಡಲು ಬಲು ಸುಂದರ, ಬಾಯಲ್ಲಿಟ್ಟರೆ ಕ್ಷಣ ಮಾತ್ರದಲ್ಲಿ ಕರಗಿ ನಾಲಿಗೆ ಚಪ್ಪರಿಸುವಂತಹ ಸಿಹಿ ರುಚಿ. ಮಕ್ಕಳು ಮಾತ್ರವಲ್ಲದೆ ವಯೋವೃದ್ಧರು ಇಷ್ಟ ಪಡುವ ಕಾಟನ್ ಕ್ಯಾಂಡಿ ಅಥವಾ ಬಾಂಬೆ ಮಿಠಾಯಿಯ ಕರಾಮತ್ತಿದು. ಆದರೆ ಕಾಟನ್ ಕ್ಯಾಂಡಿ ವಿಷಕಾರಿ ತಿನಿಸು. ಪ್ರಯೋಗಾಲಯದ ವರದಿ ಆಧರಿಸಿ ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಕಾಟನ್ ಕ್ಯಾಂಡಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಪ್ರಯೋಗಾಲಯದ ಪರೀಕ್ಷೆಗಾಗಿ ಕಾಟನ್ ಕ್ಯಾಂಡಿಯ ಮಾದರಿಯನ್ನು ಸಂಗ್ರಹಿಸಲಾಗಿದೆ.

ಬಾಂಬೆ ಮಿಠಾಯಿಯನ್ನು ಕಾಟನ್ ಕ್ಯಾಂಡಿ, ಕ್ಯಾಂಡಿ ಫ್ಲೋಸ್, ಫೇರಿ ಫ್ಲೋಸ್ ಹೀಗೆ ಹಲವು ಹೆಸರಿನಿಂದ ಕರೆಯಲಾಗುತ್ತದೆ. ಸಕ್ಕರೆಯನ್ನು ಬಿಸಿ ಮಾಡಿ ದ್ರವೀಕರಿಸುವ ಮೂಲಕ ನೂಲಿನಂತೆ ಸುತ್ತಿ ಇದನ್ನು ತಯಾರಿಸಲಾಗುತ್ತದೆ. ಹತ್ತಿಯನ್ನು ಹೋಲುವ ಕಾಟನ್ ಕ್ಯಾಂಡಿಯನ್ನು 1897 ರಲ್ಲಿ ಅಮೇರಿಕಾದ ದಂತ ವೈದ್ಯ ವಿಲಿಯಂ ಮಾರಿಸನ್ ಮತ್ತು ಮಿಠಾಯಿಗಾರ ಜಾನ್ ಸಿ.ವಾರ್ಟನ್ ಅಮೇರಿಕಾದಲ್ಲಿ ಇದನ್ನು ಕಂಡು ಹಿಡಿದರು.

ಕಾಟನ್ ಕ್ಯಾಂಡಿ ಮಾರಾಟವಾಗದ ದೇಶವಿಲ್ಲ, ಇದರ ರುಚಿಯನ್ನು ಸವಿಯದ ಜನರಿಲ್ಲ. ಜಾತ್ರೆಗಳು, ಸರ್ಕಸ್‌ಗಳು, ಕಾರ್ನಿವಲ್, ಉತ್ಸವ, ಹಬ್ಬ, ವಸ್ತು ಪ್ರದರ್ಶನ ಸೇರಿದಂತೆ ಎಲ್ಲಾ ಕಡೆ ಕಾಟನ್ ಕ್ಯಾಂಡಿ ಮಾರಾಟ ಮಾಡಲಾಗುತ್ತದೆ. ಬಹುತೇಕ ಎಲ್ಲರೂ ಕಾಟನ್ ಕ್ಯಾಂಡಿ ತಿಂದಿರುತ್ತಾರೆ.

ಆರಂಭದಲ್ಲಿ ಕಾಟನ್ ಕ್ಯಾಂಡಿ ಹತ್ತಿಯನ್ನು ಹೋಲುವ ಬಿಳಿ ಬಣ್ಣದಲ್ಲಿತ್ತು. ಆದರೆ ಈಗ ಗ್ರಾಹಕರನ್ನು ಅದರಲ್ಲೂ ಚಿಣ್ಣರನ್ನು ಆಕರ್ಷಿಸಲು ಹಲವು ರೀತಿಯ ಬಣ್ಣಗಳ ರೂಪ ನೀಡಲಾಗುತ್ತದೆ. ಹೆಚ್ಚಾಗಿ ಪಿಂಕ್ ಬಣ್ಣದಲ್ಲಿ ಕಾಟನ್ ಕ್ಯಾಂಡಿ ತಯಾರಿಸಲಾಗುತ್ತಿದೆ. ಮೈಸೂರು ಪ್ರವಾಸಿ ತಾಣಗಳ ಸ್ವರ್ಗ. ಮೈಸೂರಿನ ಯಾವ ದಿಕ್ಕಿಗೆ ಹೋದರು ಒಂದಲ್ಲ ಒಂದು ಪ್ರವಾಸಿ ತಾಣವಿರುತ್ತದೆ. ಎಲ್ಲಾ ಪ್ರವಾಸಿ ತಾಣಗಳಲ್ಲಿ ಕಾಟನ್ ಕ್ಯಾಂಡಿ ಮಾರಾಟ ಮಾಡಲಾಗುತ್ತದೆ. ಕೆಲವು ಕಡೆ ಕಾಟನ್ ಕ್ಯಾಂಡಿಯನ್ನು ಅಂಗಡಿಗಳಲ್ಲಿ ಮಾರಾಟ ಮಾಡಿದರೆ, ಉಳಿದಂತೆ ಉತ್ತರ ಪ್ರದೇಶದಿಂದ ಮಾರಾಟಕ್ಕಾಗಿ ವಲಸೆ ಬಂದಿರುವ ಮಾರಾಟಗಾರರು ಮೈಸೂರಿನಲ್ಲಿ ಹೆಚ್ಚಾಗಿ ಕಾಟನ್ ಕ್ಯಾಂಡಿ ಮಾರಾಟ ಮಾಡುತ್ತಾರೆ.



ಮೈಸೂರು ಅರಮನೆ ಮುಂಭಾಗ ಕಾಟನ್ ಕ್ಯಾಂಡಿ ಮಾರಾಟ ಮಾಡುತ್ತಿರುವ ದೃಶ್ಯ

ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಹೆಜ್ಜೆ ಹೆಜ್ಜೆಗೂ ಕಾಟನ್ ಕ್ಯಾಂಡಿ ಮಾರಾಟವಿರುತ್ತದೆ. ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಆರಂಭದ ಸ್ಟಾಲ್‌ನಿಂದ ಕೊನೆ ತನಕ ಉದ್ದಕ್ಕೂ ಹಲವು ಕಾಟನ್ ಕ್ಯಾಂಡಿ ಅಂಗಡಿಗಳಿರುತ್ತವೆ. ಜಾತ್ರೆಗಳಲ್ಲಿ ಕೂಡ ಬಾಂಬೆ ಮಿಠಾಯಿಯದೇ ಕಾರುಬಾರು.

ಕಾಟನ್ ಕ್ಯಾಂಡಿಗೆ ನಿನ್ನೆ ಮೊನ್ನೆಯ ಇತಿಹಾಸವಿಲ್ಲ. ನೂರು ವರ್ಷಗಳಿಗೂ ಮೀರಿ ಕಾಟನ್ ಕ್ಯಾಂಡಿಗೆ ಇತಿಹಾಸವಿದೆ. ಹಳ್ಳಿ ಜನರು ಇದನ್ನು ಬಾಂಬೆ ಮಿಠಾಯಿ ಎಂದು ಕರೆದರೆ, ನಗರ ಪ್ರದೇಶದವರು ಕಾಟನ್ ಕ್ಯಾಂಡಿ ಹೆಸರಿನಿಂದ ಕರೆಯುತ್ತಾರೆ. ಆದರೆ ಕಾಟನ್ ಕ್ಯಾಂಡಿಯಲ್ಲಿ ಹಾನಿಕಾರಕ ರಾಸಾಯನಿಕ ಅಂಶವಿರುವ ಆತಂಕಕಾರಿ ವಿಚಾರ ಬಯಲಾಗಿದೆ. ಕಾಟನ್ ಕ್ಯಾಂಡಿಯಲ್ಲಿ ಬಟ್ಟೆಗಳಿಗೆ ಬಳಸುವ ಹಾನಿಕಾರಕ ಬಣ್ಣ ಹಾಗೂ ರಾಸಾಯನಿಕ ಸಂಯುಕ್ತ ರೋಡೋಮೈನ್–ಬಿ ಇರುವುದು ಪತ್ತೆಯಾಗಿದೆ.

ಕಾಟನ್ ಕ್ಯಾಂಡಿಯಲ್ಲಿ ಹಾನಿಕಾರಕ ರಾಸಾಯನಿಕ ಅಂಶ ಇದೆ ಎಂಬುವುದು ತಮಿಳುನಾಡಿನ ಚೆನ್ನೈನ ಗಿಂಡಿಯ ರಾಸಾಯನಿಕ ಪರೀಕ್ಷೆ ಮತ್ತು ವಿಶ್ಲೇಷಣಾ ಪ್ರಯೋಗಾಲಯದ ಪರೀಕ್ಷೆಯಲ್ಲಿ ಖಚಿತವಾಗಿದೆ. ತಮಿಳುನಾಡಿನಾದ್ಯಂತ ಕಾಟನ್ ಕ್ಯಾಂಡಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಪರೀಕ್ಷೆಗೊಳಪಡಿಸಿದಾಗ ಎಲ್ಲಾ ಕಾಟನ್ ಕ್ಯಾಂಡಿಯಲ್ಲಿ ರೋಡೋಮೈನ್–ಬಿ ಎಂಬ ರಾಸಾಯನಿಕ ಅಂಶ ಇರುವುದು ತಿಳಿದು ಬಂದಿದೆ.



ಇದರಿಂದ ತಮಿಳುನಾಡು ಸರ್ಕಾರ ಶನಿವಾರದಿಂದಲೇ ಸೇವನೆಗೆ ಅಸುರಕ್ಷಿತವಾಗಿರುವ ಕಾಟನ್ ಕ್ಯಾಂಡಿ ತಯಾರಿಕೆ, ಮಾರಾಟವನ್ನು ಸಂಪೂರ್ಣವಾಗಿ ನಿಷೇಧ ಮಾಡಿದೆ. ತಮಿಳುನಾಡಿಗೆ ಮೊದಲೇ ಪಾಂಡಿಚೇರಿಯಲ್ಲಿ ಫೆಬ್ರವರಿ 9 ರಂದು ಕಾಟನ್ ಕ್ಯಾಂಡಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗಿತ್ತು.

ಕಾಟನ್ ಕ್ಯಾಂಡಿಯ ತಯಾರಿಕೆ ಹಾಗೂ ಮಾರಾಟ ಮಾಡಿದರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆ–2006 ರಡಿ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗುತ್ತದೆ.

ತಮಿಳುನಾಡು ಹಾಗೂ ಪಾಂಡಿಚೇರಿ ಸರ್ಕಾರದ ಈ ಕ್ರಮದಿಂದ ಎಚ್ಚೆತ್ತಿರುವ ಸರ್ಕಾರ ಈಗ ಕಾಟನ್ ಕ್ಯಾಂಡಿ ಆಹಾರ ಸುರಕ್ಷತೆ ಬಗ್ಗೆ ವಿಶ್ಲೇಷಣೆ ಮಾಡಲು ಮುಂದಾಗಿದೆ. ಸರ್ಕಾರದ ಆದೇಶದಂತೆ ಮೈಸೂರಿನಲ್ಲಿರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಮೈಸೂರಿನಲ್ಲಿ ಮಾರಾಟ ಮಾಡುತ್ತಿರುವ ಕಾಟನ್ ಕ್ಯಾಂಡಿಗಳ ಮಾದರಿಯನ್ನು ಸಂಗ್ರಹಿಸುತ್ತಿದ್ದಾರೆ.

ಮೈಸೂರಿನಲ್ಲಿ ಸಂಗ್ರಹಿಸಿದ ಕಾಟನ್ ಕ್ಯಾಂಡಿ ಪ್ರಯೋಗಾಲಯಕ್ಕೆ ರವಾನೆ

ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಈಗಾಗಲೇ ಕಾಟನ್ ಕ್ಯಾಂಡಿಯನ್ನು ಸಂಪೂರ್ಣ ನಿಷೇಧ ಮಾಡಲಾಗಿದೆ. ಆದರೆ ಕರ್ನಾಟಕದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದ ಸೂಚನೆಯಂತೆ ಮೈಸೂರಿನ ಹಲವು ಸ್ಥಳಗಳಿಂದ ಕಾಟನ್ ಕ್ಯಾಂಡಿಯ ಮಾದರಿಯನ್ನು ಸಂಗ್ರಹಿಸಲಾಗುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಈಗಾಗಲೇ 6 ಮಾದರಿ ಕಾಟನ್ ಕ್ಯಾಂಡಿಯನ್ನು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹ ಮಾಡಿರುವ ಕಾಟನ್ ಕ್ಯಾಂಡಿಯನ್ನು ಕರ್ನಾಟಕ ರಾಜ್ಯ ಆಹಾರ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಇದಲ್ಲದೆ ಇನ್ನು ಕಾಟನ್ ಕ್ಯಾಂಡಿಯ ಹಲವು ಮಾದರಿಯನ್ನು ಸಂಗ್ರಹಿಸಲಾಗುತ್ತಿದೆ. ಕಾಟನ್ ಕ್ಯಾಂಡಿ ಬಗ್ಗೆ ಪ್ರಯೋಗಾಲಯ ನೀಡುವ ವರದಿಯನ್ನು ವಿಶ್ಲೇಷಣೆ ಮಾಡಲಾಗುತ್ತದೆ. ತರುವಾಯ ಸಂಪೂರ್ಣ ವರದಿಯನ್ನು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಆಯುಕ್ತರಿಗೆ ಕಳುಹಿಸಲಾಗುವುದು. ಒಂದು ವೇಳೆ ಮೈಸೂರಿನಲ್ಲಿ ಸಂಗ್ರಹ ಮಾಡುವ ಕಾಟನ್ ಕ್ಯಾಂಡಿಯಲ್ಲಿ ಹಾನಿಕಾರಕ ಅಂಶ ಇರುವುದು ಖಚಿತವಾದರೆ ಸರ್ಕಾರ ನೀಡುವ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು.

– ಡಾ.ಎಸ್.ಎಲ್.ರವೀಂದ್ರ, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿ, ಮೈಸೂರು.

ಬೈಕ್‌ಗೆ ಐಷರ್ ಡಿಕ್ಕಿ: ಇಬ್ಬರ ದುರ್ಮರಣ

ಮೈಸೂರು,ಫೆ.19(ಆರ್‌ಕೆ)–ಸರಕು ಸಾಗಣೆ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿರುವ ಘಟನೆ ಬೆಳವಾಡಿ ಚೆಕ್‌ಪೋಸ್ಟ್ ಬಳಿ ಹುಣಸೂರು ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ನಾಗವಾಲ ನಿವಾಸಿ ಮನೋಹರ(55) ಹಾಗೂ ಉತ್ತರ ಪ್ರದೇಶದ ಬಾಬುರಾಮ್(57) ದುರಂತದಲ್ಲಿ ಸಾವನ್ನಪ್ಪಿದವರು. ಮೈಸೂರಿನಿಂದ ಬಜಾಜ್ ಡಿಸ್ಕವರ್ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಎದುರಿನಿಂದ ವೇಗವಾಗಿ ಬರುತ್ತಿದ್ದ ಐಷರ್ ಸರಕು ಸಾಗಣೆ ವಾಹನವು ಬೆಳಗ್ಗೆ 10.55 ಗಂಟೆ ವೇಳೆಗೆ ಬೆಳವಾಡಿ ಚೆಕ್ ಪೋಸ್ಟ್ ಬಳಿ ಪೆಟ್ರೋಲ್ ಬಂಕ್ ಎದುರು ಡಿಕ್ಕಿ ಹೊಡೆದಿದೆ.

ಪರಿಣಾಮ ಬೈಕ್ ಚಾಲನೆ ಮಾಡುತ್ತಿದ್ದ ಬಾಬುರಾಮ್ ಸ್ಥಳದಲ್ಲೇ ಮೃತಪಟ್ಟರೆ, ಹಿಂಬದಿ ಸವಾರ ಮನೋಹರ ಸಮೀಪದ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಕೆಆರ್ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದರು ಎಂದು ವಿವಿ ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪಿಂಗಾಣಿ ವಸ್ತು ತಯಾರಿಸುವ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮನೋಹರ ಮತ್ತು ಬಾಬುರಾಮ್, ಕಾರ್ಯ ನಿಮಿತ್ತ ಮೈಸೂರಿಗೆ ಬಂದು ವಾಪಸ್ಸಾಗುತ್ತಿದ್ದಾಗ ದುರ್ಘಟನೆ ಸಂಭವಿಸಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಮಹಜರು ನಡೆಸಿ ಸರಕು ಸಾಗಣೆ ವಾಹನ ಹಾಗೂ ಚಾಲಕ ಸುಬ್ರಹ್ಮಣ್ಯರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಿವಾಜಿ ಮಹಾರಾಜರು ಅಪ್ರತಿಮ ದೇಶಭಕ್ತ

ಮಾಜಿ ಮೇಯರ್ ಸಂದೇಶ್ ಸ್ವಾಮಿ ನುಡಿ ನಮನ



ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಿಸಲಾಯಿತು.

ಮೈಸೂರು, ಫೆ. 19–ಛತ್ರಪತಿ ಶಿವಾಜಿ ಮಹಾರಾಜರು ಅಪ್ರತಿಮ ದೇಶಭಕ್ತ ಎಂದು ಮಾಜಿ ಮೇಯರ್ ಸಂದೇಶ ಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆ ಸೋಮವಾರ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ತಮ್ಮ 15ನೇ ವಯಸ್ಸಿನಲ್ಲೇ ವಿದೇಶಿಯರ ದಾಸ್ಯದಿಂದ ದೇಶವನ್ನು ಮುಕ್ತ ಮಾಡಬೇಕು ಎಂಬ ಹಂಬಲ ಹೊತ್ತಿದ್ದ ಶಿವಾಜಿ ಮಹಾರಾಜರು ಅಪ್ರತಿಮ ದೇಶಭಕ್ತ ಎಂದು ಹೇಳಿದರು.

ಶಿವಾಜಿ ಮಹಾರಾಜರಂತೆ ಇಂದಿನ ಯುವಕರು ಕೂಡ ನಿಮ್ಮ ಶಕ್ತಿಯ ಮೇಲೆ ನಂಬಿಕೆ ಇಟ್ಟುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಮರಾಠ ಸಮುದಾಯದವರು ತಮ್ಮನ್ನು ಅಲ್ಪಸಂಖ್ಯಾತರು ಎಂದು ತಿಳಿಯಬೇಡಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಹೇಳಿದರು.


ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಶೂನ್ಯದಿಂದ ಸಾಮ್ರಾಜ್ಯ ಕಟ್ಟಿದ ಶಿವಾಜಿ ಮಹಾರಾಜರ ಕಾಲದ ಚರಿತ್ರೆ ನೆನಪು ಮಾಡಿದರೆ ನಮ್ಮ ಅಭಿಮಾನ ಉಕ್ಕಿತಲೆ ಬಾಗುತ್ತದೆ. ಈ ನಾಡಿನ ಪರಂಪರೆ, ಸಂಸ್ಕೃತಿ, ಧರ್ಮ, ಕಲೆ, ನೀತಿ ನಿಯಮಗಳನ್ನು ಪ್ರತಿನಿಧಿಸುತ್ತಾ ಒಂದು ಅದ್ಭುತ ಸಾಮ್ರಾಜ್ಯ ಕಟ್ಟಿ ಮುಂದಿನ ಹಲವು ಪೀಳಿಗೆವರೆಗೆ ಸ್ಫೂರ್ತಿ ನೀಡುವುದಕ್ಕೆ ಶಿವಾಜಿ ಮಹಾರಾಜರ ಜೀವನದಿಂದ ಅರ್ಥವಾಗುತ್ತದೆ ಎಂದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡ ನಜರ್‌ಬಾದ್ ನಟರಾಜ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಿಕಟಪೂರ್ವ ಪಾಲಿಕೆ ನಾಮ ನಿರ್ದೇಶಕರಾದ ಜಗದೀಶ್, ಸುರೇಶ್ ಗೋಲ್ಡ್, ಭೈರತಿ ಲಿಂಗರಾಜು, ಸುಚೇಂದ್ರ, ವರುಣ ಮಹಾದೇವ್, ರುದ್ರಮೂರ್ತಿ ಹಾಗೂ ಇನ್ನಿತರರು ಹಾಜರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಫೆ.19– ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಫೆ.29 ರವರೆಗೆ ಅವಧಿ ವಿಸ್ತರಿಸಲಾಗಿದೆ. 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.post matric.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು ಎನ್‌ಪಿಸಿಐ (ನಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1ರವರ ದೂ. ಸಂ.–0821–2520910 ಅವರನ್ನು ಸಂಪರ್ಕಿಸಬಹುದು.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.19–ವಿವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಇಲವಾಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಳ್ಳಲಾಗಿದೆ. ಇಲವಾಲ, ಹಳೆ–ಕಾಮನಕೊಪ್ಪಲು, ಮೈದನಹಳ್ಳಿ, ಮೇಗಳಾಪುರ, ಭದ್ರೇಗೌಡನಕೊಪ್ಪಲು, ಚಿಕ್ಕೆಗೌಡನಕೊಪ್ಪಲು, ಹೊಸಕೋಟೆ, ಸರಕಟ್ಟೆ, ಯಾಚೇಗೌಡನಹಳ್ಳಿ, ದಡಕನಹಳ್ಳಿ, ರಾಮೇನಹಳ್ಳಿ, ಯಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಗುಂಗ್ರಾಲ್ ಛತ್ರ, ಛತ್ರದಕೊಪ್ಪಲು, ರಟ್ನಳ್ಳಿ, ವೀರಪ್ಪನಕೊಪ್ಪಲು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.21ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಾಹಿತ್ಯದಲ್ಲಿ ಬಾಳಿಗೆ ಬೇಕಾದ ಒಳ್ಳೆಯ ವಿಚಾರಗಳಿರುತ್ತವೆ

ಹಿರಿಯ ಪೊಲೀಸ್ ಅಧಿಕಾರಿ ಡಾ.ಎ.ಎನ್.ಪ್ರಕಾಶ್‌ಗೌಡ ಅಭಿಮತ



ಅದಮ್ಯ ರಂಗಶಾಲೆ ವತಿಯಿಂದ ದಕ್ಷ ಪಿಯು ಕಾಲೇಜಿನಲ್ಲಿ ನಡೆದ 'ಪಠ್ಯಾಧಾರಿತ ರಂಗ ಪ್ರದರ್ಶನ'ವನ್ನು ಐಪಿಎಸ್ ಅಧಿಕಾರಿ ಡಾ.ಎ.ಎನ್.ಪ್ರಕಾಶ್‌ಗೌಡ ಸೋಮವಾರ ಉದ್ಘಾಟಿಸಿದರು. ಈ ವೇಳೆ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಕಾಲೇಜಿನ ಅಧ್ಯಕ್ಷ ಪಿ.ಜಯಚಂದ್ರರಾಜು, ಅದಮ್ಯ ರಂಗಶಾಲೆಯ ಟಿ.ಸತೀಶ್ ಜವರೇಗೌಡ, ಚಂದ್ರು ಮಂಡ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಫೆ. 19– ಶಾಲಾ–ಕಾಲೇಜಿನ ಪಠ್ಯದಲ್ಲಿನ ಕತೆ, ಕಾವ್ಯ, ಕಾದಂಬರಿ, ನಾಟಕಗಳನ್ನು ದೃಶ್ಯ ರೂಪಕ್ಕಿಳಿಸಿ ವಿದ್ಯಾರ್ಥಿಗಳಿಗೆ ತಲುಪಿಸುವುದರಿಂದ ಕಲಿಕೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ವಿದ್ಯಾರ್ಥಿಗಳ ಮನಸ್ಸಿಗೆ ನಾಟುವುದಲ್ಲದೆ ಕಲಿತ ವಿಚಾರ ಅಚ್ಚಳಿಯದೆ ಉಳಿಯುತ್ತದೆ ಎಂದು ದಕ್ಷಿಣ ವಲಯದ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್. ಪ್ರಕಾಶ್ ಗೌಡ ಅಭಿಪ್ರಾಯಪಟ್ಟರು.

ಅದಮ್ಯ ರಂಗಶಾಲೆ, ದಕ್ಷ ಪದವಿಪೂರ್ವ ಕಾಲೇಜು ಹಾಗೂ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ನಗರದ ಹೂಟಗಳ್ಳಿಯ ದಕ್ಷ ಪಿಯು ಕಾಲೇಜು ಸಭಾಂಗಣದಲ್ಲಿ ನಡೆದ 'ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ ಮತ್ತು ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾಭ್ಯಾಸದ ಕಾಲದಲ್ಲಿ ಜ್ಞಾನಾರ್ಜನೆಯಷ್ಟೇ ಸಾಹಿತ್ಯ ಮತ್ತು ಸಂಸ್ಕೃತಿಯೂ ಮುಖ್ಯ. ಸಾಹಿತ್ಯದಲ್ಲಿ ಬದುಕಿಗೆ ಬೇಕಾದ ಒಳ್ಳೆಯ ವಿಚಾರಗಳಿರುತ್ತವೆ. ವಿದ್ಯಾರ್ಥಿಗಳು ಇಂತಹ ವಿಚಾರಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳಬೇಕು. ಪಠ್ಯದ ರಂಗಾಭಿನಯದಿಂದ ಉತ್ತಮ ಆಲೋಚನೆಯೊಂದಿಗೆ ನಿರರ್ಗಳ ಮಾತುಗಾರಿಕೆಯ ಕಲೆ ಬೆಳೆಯುತ್ತದೆ. ಇದು ಪರೀಕ್ಷೆ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ ಎಂದರು.

ತಮ್ಮ ಮಕ್ಕಳು ಚೆನ್ನಾಗಿ ಓದಲೆಂದು ತಂದೆ–ತಾಯಿ ಅಗತ್ಯ ಸವಲತ್ತುಗಳನ್ನು ಕಲ್ಪಿಸುತ್ತಾರೆ. ಹೆತ್ತವರ ಕನಸು ಮತ್ತು ನಿರೀಕ್ಷೆಗಳಿಗೆ ಪೂರಕವಾಗಿ ಯೋಜಿತವಾಗಿ ಓದಬೇಕು. ಅವರಿಗೆ ನಿರಾಸೆ ಮಾಡಬಾರದು. ಹೆತ್ತವರಿಗೆ ಗೌರವ ಕೊಡುವುದೇ ನಿಜವಾದ ಉಡುಗೊರೆ. ಪರಿಶ್ರಮದಿಂದ ಓದಿ ಉತ್ತಮ ಅಧಿಕಾರಿ ಅಥವಾ ನೌಕರರಾಗಿ ಸಮಾಜಕ್ಕೆ ಸೇವೆ ಸಲ್ಲಿಸುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಮಾತನಾಡಿ, ಯಾವಾಗಲೂ ಗ್ರಾಮೀಣ ವಿದ್ಯಾರ್ಥಿಗಳೇ ಹೆಚ್ಚು ಸಾಧನೆ ಮಾಡುವುದು. ಸಣ್ಣ ಹಿಡುವಳಿದಾರರ, ರೈತರ ಮಕ್ಕಳೇ ಉನ್ನತ ಅಧಿಕಾರಿಗಳಾಗಿ ಹೊರಹೊಮ್ಮುತ್ತಾರೆ. ಇಂದಿನ ಬಹುತೇಕ ಎಲ್ಲಾ ಅಧಿಕಾರಿಗಳು ಬಡ ಮತ್ತು ಮಧ್ಯಮ ವರ್ಗದಿಂದ ಬಂದವರು. ಅದರಲ್ಲೂ ಗ್ರಾಮೀಣ ಪ್ರದೇಶದವರು ಎಂಬುದು ವಿಶೇಷ ಎಂದರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಸಮಾರೋಪ ನುಡಿಗಳನ್ನಾಡಿದರು. ದಕ್ಷ ಪಿಯು ಮತ್ತು ಪದವಿ ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರರಾಜು, ಅದಮ್ಯ ರಂಗಶಾಲೆ ಕಾರ್ಯದರ್ಶಿ ಚಂದ್ರು ಮಂಡ್ಯ, ಪದಾಧಿಕಾರಿಗಳಾದ ಆರ್.ಎಸ್.ಸಹನಾ, ನಾಗೇಶ್ ಕಾವ್ಯಪ್ರಿಯ, ಕಾಲೇಜಿನ ಪ್ರಾಂಶುಪಾಲ ರತ್ನಾಕರ ಶಾನಭಾಗ್, ಕನ್ನಡ ವಿಭಾಗದ ಮುಖ್ಯಸ್ಥೆ ಕೆ.ಪಿ.ವೀಣಾ ಉಪಸ್ಥಿತರಿದ್ದರು.



ಮೈಸೂರಿನ ಒಕಿನವಾ ಕರಾಟೆ ಅಸೋಸಿಯೇಷನ್ ಏರ್ಪಡಿಸಿದ್ದ 2ನೇ ವಿಎಸ್‌ಕೆ ಓಪನ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸಾವಿತ್ರಿ ಕಾನ್ವೆಂಟ್ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಚಾಂಪಿಯನ್‌ಶಿಪ್ ಗಳಿಸಿದ್ದಾರೆ. ವಿದ್ಯಾರ್ಥಿಗಳೊಂದಿಗೆ ರಾಜು ಕೆ.ಬಾಟಿಯಾ, ಪಿ.ಅಖಿಲ್, ಶ್ರೀಮತಿ ಕೆ.ಪಿ.ಪುಷ್ಪಲತಾ, ಶ್ರೀಮತಿ ಶುಗುಫ್ತಾ ಷಿರೀನ್, ಎನ್.ದಯಾನಂದ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಕೊಡಗು ಪ್ರತ್ಯೇಕ ಲೋಕಸಭಾ ಕ್ಷೇತ್ರ ಮತ್ತೆ ಮುನ್ನೆಲೆಗೆ

ಜಿಲ್ಲೆಯ ಸಮಸ್ಯೆ ಅರಿತಿರುವವರೇ ಸಂಸದರಾಗಬೇಕು ಎಂಬುದೇ ಒತ್ತಾಯ

2026ಕ್ಕೆ ಕ್ಷೇತ್ರ ಮರು ವಿಂಗಡಣೆ, 543 ರಿಂದ 753 ಕ್ಷೇತ್ರಗಳಿಗೆ ಏರಿಕೆ, ರಾಜ್ಯದ 28 ಲೋಕಸಭಾ ಕ್ಷೇತ್ರ 36 ಕ್ಷೇತ್ರಗಳಾಗಲಿವೆ

ಪ್ರಸಾದ್ ಸಂಪಿಗೆಕಟ್ಟೆ

ಮಡಿಕೇರಿ, ಫೆ.19– ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ನಡುವೆಯೇ ಕೊಡಗು ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ನೀಡಬೇಕೆನ್ನುವ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ.

ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿನ ಭೌಗೋಳಿಕ ಲಕ್ಷಣಗಳು, ಜಮ್ಮಾಬಾಣೆ ಹಕ್ಕು, ಕಾಫಿ ಬೆಳೆಗಾರರ ಸಮಸ್ಯೆಗಳು, ವನ್ಯಜೀವಿ–ಮಾನವ ಸಂಘರ್ಷ, ಜಮ್ಮಾ ಹಿಡುವಳಿದಾರ ಮತ್ತು ಕೊಡವ ಸಮುದಾಯದ ಕೋವಿ ಹಕ್ಕು ವಿಚಾರಗಳು ಬಹು ಮುಖ್ಯವಾಗಿ ಜಿಲ್ಲೆಯನ್ನು ಕಾಡುವ ಸಮಸ್ಯೆಯಾಗಿದೆ ಈ ವಿಚಾರಗಳಿಗೆ ಶಾಶ್ವತ ಪರಿಹಾರ ದೊರಕಬೇಕಿದ್ದರೆ ಅದಕ್ಕೆ ಸ್ಥಳೀಯರೇ ಸಂಸದರಾಗಬೇಕೆನ್ನುವ ಬೇಡಿಕೆ ಇದೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಂಸದ ಪ್ರತಾಪ ಸಿಂಹ, ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರದ ಬೇಡಿಕೆ ವಿಚಾರದಲ್ಲಿ ಪ್ರಬಲ ಸ್ಪಂದನೆ ನೀಡುತ್ತೇನೆ ಎಂದು ಹೇಳಿದ್ದರು. ಇದರಿಂದ ಮುಂದಿನ ದಿನಗಳಲ್ಲಿ ಕೊಡಗು ಪ್ರತ್ಯೇಕ ಲೋಕಸಭಾ ಕ್ಷೇತ್ರವಾಗಬಹುದು ಎಂಬ ನಿರೀಕ್ಷೆ ಮೂಡಿದೆ.

2026ಕ್ಕೆ ಕ್ಷೇತ್ರ ಮರುವಿಂಗಡಣೆ: 2026ಕ್ಕೆ ದೇಶಾದ್ಯಂತ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಾಗಲಿದೆ. ಜನಸಂಖ್ಯೆಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆಯಾದರೆ ಈಗಿರುವ 543 ಕ್ಷೇತ್ರಗಳು 753ಕ್ಕೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗುತ್ತಿದೆ. ಅದರಂತೆ ರಾಜ್ಯದಲ್ಲಿ ಈಗಿರುವ ಲೋಕಸಭೆ ಕ್ಷೇತ್ರಗಳ ಸಂಖ್ಯೆ 28 ರಿಂದ 36ಕ್ಕೆ ಏರಿಕೆಯಾಗಲಿವೆ. ಈ ಸಂದರ್ಭ ರಾಜ್ಯದಲ್ಲಿ ಹೊಸ ಕ್ಷೇತ್ರಗಳು ರಚನೆಯಾಗಲಿದ್ದು, ಕೊಡಗು–ಮೈಸೂರು ಕ್ಷೇತ್ರದಲ್ಲಿ ಮುಂದುವರಿಯುವ ಅವಕಾಶಗಳು ತೀರಾ ಕಡಿಮೆಯಿದೆ. ಹೀಗಾಗಿ ಮರು ವಿಂಗಡಣೆ ಸಂದರ್ಭ ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಸ್ಥಾನಮಾನ ನೀಡುವುದು ಅಭಿವೃದ್ಧಿಯ ದೃಷ್ಟಿಯಿಂದ ಅನಿವಾರ್ಯವೂ ಆಗಲಿದೆ.

ಕೊಡಗನ್ನು ವಿಶೇಷವಾಗಿ ಪರಿಗಣಿಸಲಿ: ಜನಸಂಖ್ಯೆ ಆಧಾರದಲ್ಲಿ ಕೊಡಗನ್ನು ಪ್ರತ್ಯೇಕ ಲೋಕಸಭಾ ಕ್ಷೇತ್ರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಇತರೆ ಜಿಲ್ಲೆಗಳಿಗಿಂದ ಭಿನ್ನವಾಗಿರುವ ಕೊಡಗು ಜಿಲ್ಲೆಯನ್ನು ವಿಶೇಷವಾಗಿ ಪರಿಗಣಿಸಿ ಲೋಕಸಭಾ ಕ್ಷೇತ್ರದ ಸ್ಥಾನಮಾನ ನೀಡಬೇಕೆಂಬುದು ಜಿಲ್ಲೆಯ ಜನರ ಬೇಡಿಕೆಯಾಗಿದೆ. ಸಂಸದ ಪ್ರತಾಪ ಸಿಂಹ ಕೂಡಾ ಇದೇ ವಿಚಾರವಾಗಿ ಮಾತನಾಡಿದ್ದು, ಕೊಡಗಿನ ವಿಶೇಷ ಸಂಸ್ಕೃತಿ, ಆಚಾರ ವಿಚಾರವನ್ನು ರಕ್ಷಿಸುವ ಸಲುವಾಗಿ ಸ್ಥಳೀಯ ಸಂಸದರ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ಲೋಕಸಭಾ ಸ್ಥಾನ ನೀಡಬೇಕಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮತದಾರರ ವಿವರ	
ಕೊಡಗು	
ಪುರುಷ ಮತದಾರರು	2,27,339
ಮಹಿಳಾ ಮತದಾರರು	2,36,059
ಇತರೆ	16
ಒಟ್ಟು	4,63,414
ಮೈಸೂರು	
ಪುರುಷ ಮತದಾರರು	13,31,772
ಮಹಿಳಾ ಮತದಾರರು	13,67,843
ಇತರೆ	220
ಒಟ್ಟು	26,99,835

ಕೊಡಗು–ಮೈಸೂರು ಕೊನೆ ಚುನಾವಣೆ!?: ಹಿಂದೆ ಮಂಗಳೂರು ಕ್ಷೇತ್ರದೊಂದಿಗಿದ್ದ ಕೊಡಗು ಬಳಿಕ ಮೈಸೂರು ಕ್ಷೇತ್ರದೊಂದಿಗೆ ವಿಲೀನವಾಗಿ ಕೊಡಗು–ಮೈಸೂರು ಲೋಕಸಭಾ ಕ್ಷೇತ್ರವಾಗಿದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಕೊಡಗಿನಲ್ಲಿ 4.63 ಲಕ್ಷ ಮತದಾರರಿದ್ದು, ಮೈಸೂರಿನಲ್ಲಿ 26.99 ಲಕ್ಷ ಮತದಾರಿದ್ದಾರೆ. ಕೊಡಗು–ಮೈಸೂರು ಕ್ಷೇತ್ರ ಸಂಖ್ಯೆ 31 ಲಕ್ಷ ಮತದಾರರನ್ನೊಳಗೊಂಡಿರುವ ದೊಡ್ಡ ಕ್ಷೇತ್ರವಾಗಿದೆ. 2019ರ ಚುನಾವಣೆಯ ವೇಳೆ 31.50 ಲಕ್ಷ ಮತದಾರರನ್ನು ಹೊಂದಿದ್ದ ತೆಲಂಗಾಣದ ಮಲ್ಕಾಜ್‌ಗಿರಿ ಕ್ಷೇತ್ರ ಈಗಿರುವ ಕ್ಷೇತ್ರಗಳಲ್ಲೇ ಅತಿ ದೊಡ್ಡ ಕ್ಷೇತ್ರವಾಗಿದೆ. ಸದ್ಯ ಮೈಸೂರು–ಕೊಡಗು ಕ್ಷೇತ್ರದಲ್ಲಿ ಅಷ್ಟೇ ಸಂಖ್ಯೆಯ ಮತದಾರರಿದ್ದು, ಮರು ವಿಂಗಡಣೆ ವೇಳೆ ಈ ಕ್ಷೇತ್ರ ಹೀಗೆಯೇ ಉಳಿದುಕೊಳ್ಳುವುದಿಲ್ಲ. ಹೀಗಾಗಿ ಮೈಸೂರು–ಕೊಡಗು ಕ್ಷೇತ್ರಕ್ಕೆ ಇದು ಕೊನೆಯ ಲೋಕಸಭಾ ಚುನಾವಣೆಯಾಗಲಿದೆ ಎನ್ನಲಾಗುತ್ತಿದೆ.

50 ಸಾವಿರ ಜನಸಂಖ್ಯೆಗೆ ಎಂಪಿ ಇದ್ದಾರೆ: ಜನಸಂಖ್ಯೆ ಆಧಾರದಲ್ಲಿ ದೇಶದ ಅತಿ ಸಣ್ಣ ಲೋಕಸಭಾ ಕ್ಷೇತ್ರ ಲಕ್ಷದೀಪ. ಇಲ್ಲಿರುವುದು ಕೇವಲ 50 ಸಾವಿರ ಜನಸಂಖ್ಯೆ. ಲಡಾಕ್‌ನಲ್ಲಿ 1 ಲಕ್ಷ 80 ಸಾವಿರ ಜನಸಂಖ್ಯೆಯಿದ್ದು, ಇಲ್ಲಿಗೂ ಪ್ರತ್ಯೇಕ ಸಂಸದರು ಇದ್ದಾರೆ. ಕೊಡಗಿನಲ್ಲಿ ನಾಲ್ಕೂವರೆ ಲಕ್ಷಕ್ಕೂ ಅಧಿಕ ಮತದಾರರಿದ್ದು, ಅಂದಾಜು 6 ಲಕ್ಷಕ್ಕೂ ಅಧಿಕ ಜನಸಂಖ್ಯೆಯಿದೆ. ಹೀಗಾಗಿ ಕೊಡಗ ಜಿಲ್ಲೆಯನ್ನು ವಿಶೇಷವಾಗಿ ಪರಿಗಣಿಸಿದರೆ ಪ್ರತ್ಯೇಕ ಲೋಕಸಭಾ ಸ್ಥಾನ ಸಿಗಲು ಜಿಲ್ಲೆ ಅರ್ಹವಾಗಿದೆ.



ರದ್ದಾದ ಪ್ರತ್ಯೇಕ ಕ್ಷೇತ್ರ: ಪ್ರತ್ಯೇಕ ರಾಜ್ಯವಾಗಿದ್ದ ಕೊಡಗು ಮೊದಲ ಲೋಕಸಭಾ ಚುನಾವಣೆಯ ವೇಳೆ ತನ್ನದೇ ಲೋಕಸಭಾ ಕ್ಷೇತ್ರವನ್ನು ಹೊಂದಿತ್ತು. 1952ರ ಚುನಾವಣೆಯಲ್ಲಿ 94,593 ಮತದಾರರಿದ್ದು, ಕಾಂಗ್ರೆಸ್‌ನ ಎನ್.ಸೋಮಣ್ಣ ಆಯ್ಕೆಯಾಗಿದ್ದರು. ಕೊಡಗನ್ನು ಮೈಸೂರು ರಾಜ್ಯದೊಂದಿಗೆ ವಿಲೀನಗೊಳಿಸಿದಾಗ 1957ರಲ್ಲಿ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನು ರದ್ದುಪಡಿಸಿ, ಮಂಗಳೂರು ಕ್ಷೇತ್ರದೊಂದಿಗೆ ವಿಲೀನಗೊಳಿಸಲಾಯಿತು. ನಂತರ, ಮಂಗಳೂರು ಕ್ಷೇತ್ರದಿಂದ ಬೇರ್ಪಡಿಸಿ ಕೊಡಗು ಜಿಲ್ಲೆಯನ್ನು ಮೈಸೂರಿನೊಂದಿಗೆ ವಿಲೀನಗೊಳಿಸಲಾಯಿತು. ಮಂಗಳೂರು ಕ್ಷೇತ್ರದೊಂದಿಗೆ ಸೇರಿದ್ದಾಗ 1969ರ ಚುನಾವಣೆಯಲ್ಲಿ ಕೊಡಗಿನ ಸಿ.ಎಂ. ಪೂಣಚ್ಚ ಅವರು ಗೆಲುವು ಸಾಧಿಸಿ ಕೇಂದ್ರದಲ್ಲಿ ಸಚಿವರಾಗಿದ್ದರು. ನಂತರ ಕೊಡಗಿನ ಯಾರೊಬ್ಬರಿಗೂ ಲೋಕಸಭಾ ಚುನಾವಣೆಯಲ್ಲಿ ಪ್ರಮುಖ ಪಕ್ಷಗಳು ಟಿಕೆಟ್ ನೀಡಿಲ್ಲ. ಇದು ಜಿಲ್ಲೆಯ ಜನರ ಅಸಮಾಧಾನಕ್ಕೆ ಕಾರಣವಾಗಿದೆ.



ದೇಶದ ಕೆಲ ಕೇಂದ್ರಾಡಳಿತ ಪ್ರದೇಶಗಳು, ಲಡಾಕ್ ಮತ್ತು ಲಕ್ಷದೀಪದಂತಹ ಸ್ಥಳಗಳಲ್ಲಿ ಜನಸಂಖ್ಯೆ ಕಡಿಮೆಯಿದ್ದರೂ ವಿಶೇಷವಾಗಿ ಪರಿಗಣಿಸಿ ಲೋಕಸಭಾ ಸದಸ್ಯರನ್ನು ನೀಡಲಾಗಿದೆ. ವಿಶಿಷ್ಟ ಸಂಸ್ಕೃತಿ, ಆಚಾರ–ವಿಚಾರವನ್ನೊಳಗೊಂಡಿರುವ ಕೊಡಗು ಜಿಲ್ಲೆಯ ಅಭಿವೃದ್ಧಿ ಮತ್ತು ವಿಶೇಷತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೊಡಗಿಗೆ ಪ್ರತ್ಯೇಕ ಲೋಕಸಭಾ ಸ್ಥಾನದ ಅಗತ್ಯತೆಯಿದೆ. ಈ ವಿಚಾರದಲ್ಲಿ ಜಿಲ್ಲೆಯ ಜನರ ಬೇಡಿಕೆಗೆ ನನ್ನ ಸಹಮತವಿದೆ. 2026ರ ಮರುವಿಂಗಡಣೆ ವೇಳೆ ಪ್ರತ್ಯೇಕ್ಷ ಕ್ಷೇತ್ರವಾಗಿ ಘೋಷಣೆಯಾಗುವ ಸಾಧ್ಯತೆಯಿದೆ.

–ಪ್ರತಾಪ್ ಸಿಂಹ, ಮೈಸೂರು–ಕೊಡಗು ಸಂಸದ.



ಹಿಂದೆ ಪ್ರತ್ಯೇಕ ರಾಜ್ಯವಾಗಿದ್ದ ಕೊಡಗು ತನ್ನ ಅಸ್ಮಿತೆಗಳನ್ನು ಕಳೆದುಕೊಂಡು ಸ್ವತಂತ್ರ ಲೋಕಸಭಾ ಕ್ಷೇತ್ರಕ್ಕೆ ಅಂಗಲಾಚುವ ಪರಿಸ್ಥಿತಿ ಬಂದಿರುವುದು ದುರ್ದೈವ. ಮಂಗಳೂರು, ಮೈಸೂರಿನಂತಹ ಬಲಾಢ್ಯ ಜಿಲ್ಲೆಗಳ ನಡುವೆ ಕೊಡಗು ಮಂಕಾಗಿದೆ. ಪ್ರತ್ಯೇಕ ಕ್ಷೇತ್ರದ ಅಗತ್ಯದ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಮಾತ್ರವಲ್ಲ, ಜಿಲ್ಲೆಯ ಹೋಬಳಿ ಮಟ್ಟದಲ್ಲಿಯೂ ಜಾಗೃತಿ ಮೂಡಿಸಲಾಗುತ್ತಿದೆ.

–ಅಚ್ಚಂಡೀರ ಪವನ್ ಪೆಮ್ಮಯ್ಯ, ಕೊಡಗು ರಕ್ಷಣಾ ವೇದಿಕೆ



'ಸಿಕ್ಕಿಂನ ವಿಧಾನಸಭೆಯಲ್ಲಿ 'ಸಂಘ' ಎಂಬ ಅಗೋಚರ ಮತ ಕ್ಷೇತ್ರವಿದೆ. ಬೌದ್ಧ ಭಿಕ್ಷುಗಳಷ್ಟೇ ಸ್ಪರ್ಧಿಸಿ, ಅವರಷ್ಟೇ ಮತದಾನ ಮಾಡುವಂತಹ ಈ ಕ್ಷೇತ್ರಕ್ಕೆ ಯಾವುದೇ ಭೌಗೋಳಿಕ ಗೆರೆಗಳಿಲ್ಲ. ಇಡೀ ಸಿಕ್ಕಿಂನಲ್ಲಿ ನೆಲೆಸಿರುವ ಬೌದ್ಧ ಭಿಕ್ಷುಗಳು ಈ ಕ್ಷೇತ್ರದ ವ್ಯಾಪ್ತಿಗೆ ಬರುತ್ತಾರೆ. ಇಂತಹ ಕ್ಷೇತ್ರವನ್ನು ಕೊಡವರಿಗೆ ನೀಡಬೇಕು. ಸಿಕ್ಕಿಂನ 'ಸಂಘ' ಕ್ಷೇತ್ರದ ಮಾದರಿಯಲ್ಲಿ ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಸೃಜಿಸಬೇಕು. ಅದಕ್ಕಾಗಿ ವರ್ಷದಲ್ಲಿ ಕನಿಷ್ಠ 25 ದಿನ ಸತ್ಯಾಗ್ರಹ ಮಾಡಿ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಮೂಲಕ ಪ್ರಧಾನಮಂತ್ರಿ, ಚುನಾವಣಾ ಆಯೋಗಗಳಿಗೆ ಸಲ್ಲಿಸುತ್ತಿದ್ದೇವೆ.

–ಎನ್.ಯು ನಾಚಪ್ಪ, ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ

ಹಾಕಿ ಪಂದ್ಯಾವಳಿಯ ಮೈದಾನ ಪರಿಶೀಲನೆ



ಕುಂಡ್ಯೋಳಂಡ ಹಾಕಿ ನಮ್ಮೆ ಪಂದ್ಯಾವಳಿ ನಡೆಯುವ ನಾಪೋಕ್ಲುವಿನ ಮೈದಾನವನ್ನು ಕೊಡವ ಹಾಕಿ ಅಕಾಡೆಮಿಯ ಪದಾಧಿಕಾರಿಗಳು ಹಾಗೂ ಕುಂಡ್ಯೋಳಂಡ ಕುಟುಂಬದವರು ಪರಿಶೀಲಿಸಿದರು.

ಮಡಿಕೇರಿ, ಫೆ.19– ಕೊಡವ ಕುಟುಂಬ ತಂಡಗಳ ನಡುವೆ ನಡೆಯಲಿರುವ 'ಕುಂಡ್ಯೋಳಂಡ ಹಾಕಿ ನಮ್ಮೆ–2024ರ ಪಂದ್ಯಾವಳಿಯ ಪೂರ್ವಭಾವಿ ತಯಾರಿ ನಡೆಸಲು ಕೊಡವ ಹಾಕಿ ಅಕಾಡೆಮಿಯ ಪದಾಧಿಕಾರಿಗಳು ಹಾಗೂ ಕುಂಡ್ಯೋಳಂಡ ಕುಟುಂಬದ ಪ್ರಮುಖರು ನಾಪೋಕ್ಲುವಿನ ಮೈದಾನವನ್ನು ಸೋಮವಾರ ಪರಿಶೀಲಿಸಿದರು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, ಹಾಕಿ ನಮ್ಮೆಗೆ ಅಕಾಡೆಮಿ ಸಂಪೂರ್ಣ ಸಹಕಾರ ನೀಡಲಿದೆ ಎಂದರು. ಅಕಾಡೆಮಿ ಉಪಾಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ, ಜಂಟಿ ಕಾರ್ಯದರ್ಶಿ ಚೆಯ್ಯಂಡ ಸತ್ಯ, ನಿರ್ದೇಶಕರಾದ ಕುಲ್ಲೇಟಿರ ಬೇಬ, ಕಂಬೀರಣ್ಣ ರಾಖಿ ಪೂವಣ್ಣ, ಕುಂಡ್ಯೋಳಂಡ ಕುಟುಂಬಸ್ಥರಾದ ಕಾಶಿ ತಮ್ಮಯ್ಯ, ಬಿಪಿನ್ ಬೆಳ್ಯಪ್ಪ ಮತ್ತಿತರರು ಹಾಜರಿದ್ದರು.

ದಲಿತಪರ ಸಂಘಟನೆಗಳ ಪ್ರತಿಭಟನೆ

ಗೋಣಿಕೊಪ್ಪ ಕುಟ್ಟ ಗ್ರಾಮದಲ್ಲಿ ನಡೆದ ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಆತ್ಮಹತ್ಯೆಗೆ ಕಾರಣರಾದವರನ್ನು ಬಂಧಿಸುವಂತೆ ಆಗ್ರಹಿಸಿ ವಿವಿಧ ದಲಿತಪರ ಸಂಘಟನೆಗಳ ಕಾರ್ಯಕರ್ತರು ಪೊನ್ನಂಪೇಟೆಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪೊನ್ನಂಪೇಟೆ ಬಸ್ ನಿಲ್ದಾಣದಿಂದ ತಾಲೂಕು ತಹಶೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಅಹಿಂದ ಸಂಘಟನೆಗಳ ಒಕ್ಕೂಟ ಹಾಗೂ ಭೀಮ್ ಸೇನೆಯ



ಕಾರ್ಯಕರ್ತರು, ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಆತ್ಮಹತ್ಯೆ ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸುವಂತೆ ಹಾಗೂ ಗೃಹಸಚಿವ ಜಿ.ಪರಮೇಶ್ ರಾಜೀನಾಮೆ ನೀಡುವಂತೆ ಆಗ್ರಹಿಸಿದರು.

ಕರ್ನಾಟಕ ಅಹಿಂದ ಸಂಘಟನೆಗಳ ಒಕ್ಕೂಟದ ಮುಖಂಡ ಹರಿರಾಮ್, ದಸಂಸ ವಿಭಾಗೀಯ ಸಂಚಾಲಕ ರಾದ ಕೃಷ್ಣಪ್ಪ, ರಜನಿಕಾಂತ್, ಒಮನಾ, ಆಲ್ ಇಂಡಿಯ ದಲಿತ ರೈಟ್ಸ್ ಮೂಮೆಂಟ್‌ನ ರಾಜ್ಯಾಧ್ಯಕ್ಷ ರಮೇಶ್ ಮಾಯಮುಡಿ, ದಸಂಸ ಜಿಲ್ಲಾ ಸಂಘಟನಾ ಸಂಚಾಲಕರಾದ ಯೋಗೇಶ್, ಹೆಚ್.ಈ.ಶಿವಕುಮಾರ್, ಮುತ್ತಯ್ಯ, ರಾಜು, ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕ ಶೈಲೇಶ್, ಸಂಘಟನಾ ಸಂಚಾಲಕ ನಾಗೇಶ್ ಇದ್ದರು.



ವಿರಾಜಪೇಟೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ವತಿಯಿಂದ ಜನಮಂಗಲ ಕಾರ್ಯಕ್ರಮದಡಿ ವಿಶೇಷಚೇತನ ತೋರ ಗ್ರಾಮದ ಪಣಿಯರವರ ಮಣೆಗೆ ವ್ಹೀಲ್‌ಚೇರ್ ನೀಡಲಾಯಿತು. ಯೋಜನಾಧಿಕಾರಿ ದಿನೇಶ್, ಮೇಲ್ವಿಚಾರಕ ನಾಗರಾಜ್, ಪದಾಧಿಕಾರಿಗಳಾದ ವಿಜಯ್ ಕುಮಾರ್, ವಿರೇಂದ್ರ, ಸತೀಶ್, ಬೀಬಿ ಮತ್ತಿತರರಿದ್ದರು.

ಹುಲಿ ದಾಳಿಗೆ ತೆನೆ ಹಸು ಬಲಿ



ಸಿದ್ದಾಪುರ, ಫೆ.19– ಹುಲಿ ದಾಳಿಗೆ ತೆನೆ ಹಸು ಬಲಿಯಾಗಿರುವ ಘಟನೆ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಟ್ಟ ಗ್ರಾಮದಲ್ಲಿ ನಡೆದಿದೆ.

ಮಟ್ಟ ಗ್ರಾಮದ ಪ್ರವೀಣ್ ಅವರು ತಮ್ಮ ತೆನೆ ಹಸುವನ್ನು ಮೇಯಲು ಬಿಟ್ಟಿದ್ದರು. ಆದರೆ, ಹಸು ಮೂರು ದಿನಗಳಿಂದ ಕಾಣೆಸಿರಲಿಲ್ಲ. ಸೋಮವಾರ ತೂಬನಕೊಲ್ಲಿ ತೋಟದಲ್ಲಿ ಕೆಲಸ ಮಾಡುತಿದ್ದ ಕಾರ್ಮಿಕರು ವಾಸನೆ ಬರುತ್ತಿರುವುದರಿಂದ ಸ್ಥಳಕ್ಕೆ ಹೋಗಿ ನೋಡಿದಾಗ ಹಸುವಿನ ಕಳೇಬರ ಪತ್ತೆಯಾಗಿದೆ.

ಉಪವಲಯ ಅರಣ್ಯಾಧಿಕಾರಿ ಶ್ರೀನಿವಾಸ್ ಸ್ಥಳ ಪರಿಶೀಲಿಸಿದರು. ನಂತರ ಹುಲಿಯ ಚಲನವಲನ ಪತ್ತೆಗೆ ಕ್ಯಾಮರಾ ಅಳವಡಿಸುವುದಾಗಿ ತಿಳಿಸಿದರು.

ಕೃಷ್ಣಾಚಾರಿ ನಿಧನ

ವಿರಾಜಪೇಟೆ: ಇಲ್ಲಿನ ಅರಸುನಗರದ ನಿವಾಸಿ ಕೃಷ್ಣಾಚಾರಿ (74) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ವಿರಾಜಪೇಟೆಯ ಮಲಬಾರ್ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.



ನಕಲಿ ಅಂಕಪಟ್ಟಿ ವಿರುದ್ಧ ಡಿಸಿಗೆ ಮನವಿ ಸಲ್ಲಿಕೆ



ನಕಲಿ ಅಂಕಪಟ್ಟಿ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳಿಗೆ ನಕಲಿ ಅಂಕಪಟ್ಟಿ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಜಿಲ್ಲಾಧಿಕಾರಿ ಶಿಲ್ಪ ನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ 2 ಮತ್ತು 5ನೇ ಅಂಗನವಾಡಿ ಕೇಂದ್ರ ಕಾರ್ಯಕರ್ತೆಯ ಹುದ್ದೆಗೆ ಯಶೋಧಾ ಅಂಕಪಟ್ಟಿಗಳನ್ನು ತಿದ್ದುಪಡಿ ಮಾಡಿ ಅರ್ಜಿ ಸಲ್ಲಿಸಿದ್ದಾರೆ. ಇದು ದಾಖಲಾತಿ ಪರಿಶೀಲನೆ ವೇಳೆ ಪ್ರಕರಣ ಬೆಳಕಿಗೆ ಬಂದಿದೆ. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಿದ್ದಪ್ಪಸ್ವಾಮಿ, ಬಸವನಪುರ ರಾಜಶೇಖರ್, ಜಿ.ಎಂ.ಶಂಕರ್, ಹರೀಶ್ ಹೊನ್ನೂರು, ಮಧು ಹೊನ್ನೂರು, ಲಿಂಗರಾಜು, ಶಾಂತರಾಜು ಕೆಂಪನಪುರ, ಮರಪ್ಪ ಕೆಸ್ತೂರು, ರಾಜು ಸಂತೇಮರಹಳ್ಳಿ, ಸಿದ್ದರಾಜು ಹಾಜರಿದ್ದರು.

ಮಾ.3ರಂದು ಪಲ್ಸ್ ಪೋಲಿಯೋ

ಅಗತ್ಯ ಸಿದ್ಧತೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸೂಚನೆ

ಚಾಮರಾಜನಗರ, ಫೆ.19–ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮವನ್ನು ಮಾ.3ರಂದು ಹಮ್ಮಿಕೊಂಡಿದ್ದು, ಈ ಸಂಬಂಧ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳು ದೇಶದ ಭವಿಷ್ಯವಾಗಿದ್ದಾರೆ. ಭಾರತ ಪೋಲಿಯೋ ಮುಕ್ತವಾಗಿದ್ದು, ನೆರೆಹೊರೆ ದೇಶಗಳಲ್ಲಿ ಪೋಲಿಯೋ ಪ್ರಕರಣಗಳಿವೆ. ಪೋಲಿಯೋವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಮುನ್ನೆಚ್ಚರಿಕೆಯಾಗಿ ಹುಟ್ಟಿದ ಮಗುವಿನಿಂದ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ಕಡ್ಡಾಯವಾಗಿ ಹಾಕಲಾಗುವುದು ಎಂದರು.



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೋಲಿಯೋ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಂದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾಹಿತಿ ಪಡೆದರು.

ಪಲ್ಸ್ ಪೋಲಿಯೋ ರಾಷ್ಟ್ರೀಯ ಕಾರ್ಯಕ್ರಮವಾಗಿರುವುದರಿಂದ ಜಿಲ್ಲಾ ಮಟ್ಟದ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಿ ಶೇ.100ರಷ್ಟು ಗುರಿ ಸಾಧನೆಗೆ ಮುಂದಾಗಬೇಕು ಎಂದು ತಿಳಿಸಿದರು.

ಈ ಬಾರಿ ಚಾಮರಾಜನಗರ ತಾಲೂಕಿನ 20,514, ಗುಂಡ್ಲುಪೇಟೆ 11,426, ಕೊಳ್ಳೇಗಾಲ 10,647, ಹನೂರು 11,861 ಹಾಗೂ ಯಳಂದೂರಿನ 4209 ಮಕ್ಕಳು ಸೇರಿದಂತೆ ಒಟ್ಟಾರೆ ಜಿಲ್ಲೆಯಲ್ಲಿ 58,657 ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿ 612 ಬೂತ್‌ಗಳು, 23 ಟ್ರಾನ್ಸಿಟ್ ಕೇಂದ್ರಗಳನ್ನು ತೆರೆಯಲಾಗಿದೆ. ಲಸಿಕೆ ಹಾಕಲು 2394 ಆರೋಗ್ಯ ಕಾರ್ಯಕರ್ತರನ್ನು ನಿಯೋಜಿಸಲಾಗಿದೆ. ನಗರ, ಗ್ರಾಮಾಂತರ, ಕಾಡಂಚಿನ ಪ್ರದೇಶ, ಹಾಡಿಗಳಲ್ಲಿನ ಯಾವುದೇ ಮಕ್ಕಳು ಲಸಿಕೆಯಿಂದ ವಂಚಿತರಾಗದಂತೆ ಜವಾಬ್ದಾರಿಯಿಂದ ನೋಡಿಕೊಳ್ಳಬೇಕು ಎಂದು ಆದೇಶಿಸಿದರು.

ಜಿಲ್ಲೆಯ ಸರ್ಕಾರಿ, ಖಾಸಗಿ ಬಸ್ ಹಾಗೂ ರೈಲ್ವೆ ನಿಲ್ದಾಣ ಮತ್ತು ಜನನಿಬಿಡ ಪ್ರದೇಶಗಳಲ್ಲಿ ಟ್ರಾನ್ಸಿಟ್ ಕೇಂದ್ರಗಳನ್ನು ತೆರೆಯಲಾಗಿದೆ. ಲಸಿಕಾ ಕೇಂದ್ರ ತೆರೆಯಲು ಅನುಕೂಲವಾಗುವಂತೆ ಜಿಲ್ಲೆಯ ಅಂಗನವಾಡಿ, ಅವಶ್ಯವಿರುವೆಡೆ ಶಾಲೆಗಳಲ್ಲಿ ಅನುವು ಮಾಡಿಕೊಡಬೇಕು. ಎಲ್ಲಾ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಶಿಕ್ಷಕರು ಪೋಲಿಯೋ ಲಸಿಕೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಪೋಷಕರು, ಸಾರ್ವಜನಿಕರು ಸಹ ಪೋಲಿಯೋ ನಿರ್ಮೂಲನೆ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಜಿಲ್ಲಾವ್ಯಾಪ್ತಿಯ ಎಲ್ಲಾ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ವ್ಯಾಪಕವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಆರ್.ಸಿ.ಎಚ್.ಅಧಿಕಾರಿ ಡಾ.ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಎಂ.ವಿ.ಸುಧಾ, ತಹಶೀಲ್ದಾರ್ ಐ.ಈ.ಬಸವರಾಜು, ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

> 1995 ರಿಂದ ರಾಷ್ಟ್ರೀಯ ಪೋಲಿಯೋ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ನೀರು, ಆಹಾರದ ಮೂಲಕ ಪೋಲಿಯೋ ವೈರಸ್ ನಮ್ಮ ದೇಹ ಸೇರಲಿದೆ. ಇದರಿಂದ ದೇಹ ಸ್ವಾಧೀನ ಕಳೆದುಕೊಳ್ಳಲಿದೆ. ಮಕ್ಕಳಿಗೆ ಹಿಂದೆ ಪೋಲಿಯೋ ಹನಿ ಹಾಕಿಸಿದ್ದರು ಸಹ ಈ ಬಾರಿಯೂ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೆ ಲಸಿಕೆ ಹಾಕಿಸಬೇಕು. ಪೋಲಿಯೋ ಕಾರ್ಯಕ್ರಮದ ನಿರ್ವಹಣೆಗಾಗಿ ತಾಲೂಕು ಆರೋಗ್ಯಾಧಿಕಾರಿಗಳನ್ನೊಳಗೊಂಡ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆ ನಡೆಸಿ, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ.
>
> **– ಡಾ.ಎಸ್.ಚಿದಂಬರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿ**

ಪೌರಕಾರ್ಮಿಕರ ಕಾಯಂಗೆ ಸರ್ಕಾರ ಪ್ರಸ್ತಾಪ ಹಿನ್ನೆಲೆ

ಸಿಹಿ ಹಂಚಿ ಸಂಭ್ರಮಿಸಿದ ಪೌರಕಾರ್ಮಿಕರು



ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಕಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ಪೌರಕಾರ್ಮಿಕರು ನಗರಸಭೆ ಮುಂಭಾಗ ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು.

ಚಾಮರಾಜನಗರ, ಫೆ.19– ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಹಂತ ಹಂತವಾಗಿ ಕಾಯಂಗೊಳಿಸಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರದ ಪ್ರಸ್ತಾಪದಿಂದ ಪೌರಕಾರ್ಮಿಕರು ನಗರಸಭೆ ಮುಂಭಾಗ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು.

ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪೌರಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಸಿ.ಶಂಕರ್ ಅಂಕನಶೆಟ್ಟಿಪುರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಕಾಯಂಗೊಳಿಸಲು ಕೈಗೊಂಡಿರುವ ನಿರ್ಧಾರ ಸಂತೋಷದ ವಿಚಾರ. 24,005 ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕೆಂಬ ಅನುಮೋದನೆಗೆ ಅಂಕಿತ ನೀಡಿದ್ದು, ಎಲ್ಲಾ ಪೌರಕಾರ್ಮಿಕರಿಗೆ ಸಂತಸ ತಂದಿದೆ ಎಂದರು.

ರಾಜ್ಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪೌರಕಾರ್ಮಿಕರ ಸಂಘದ ಸದಸ್ಯರಾದ ಎಂ.ರಾಜೇಂದ್ರ, ವಿಜಯಮ್ಮ, ಜಯಮ್ಮ, ರಾಕೇಶ್, ಎಸ್.ವಿಜಯ್, ಮುರುಗೇಶ್, ರಾಜು, ಎಂ.ಪ್ರಶಾಂತ್, ಎಸ್.ರಾಜೇಂದ್ರ, ಮಹೇಶ್, ಎಂ.ಮಂಜು, ಮಂಜು, ಎನ್.ನಾಗೇಶ್, ಈಶ್ವರ್, ಎನ್.ಮುರುಗೇಶ್, ಶಿವರಾಜ್, ರಾಕೇಶ್, ಕುಮಾರ್ ಸೋಮವಾರಪೇಟೆ, ಸಮತ ಸೈನಿಕ ದಳ(ಡಿಎಸ್‌ಎಸ್)ದ ಜಿಲ್ಲಾಧ್ಯಕ್ಷ ಸಂಘಸೇನಾ, ನೇರ ಪಾವತಿ ಪೌರಕಾರ್ಮಿಕರ ಸಂಘದ ಅಧ್ಯಕ್ಷರಾದ ಮನೋಹರ್, ಸುಬ್ರಹ್ಮಣ್ಯ ಇದ್ದರು.

ಫೆ.27ರಂದು ನಗರದಲ್ಲಿ ಯುವಜನ ಮೇಳ

ಚಾಮರಾಜನಗರ, ಫೆ.19–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಯುವಜನ ಮೇಳವನ್ನು ಫೆ.27ರಂದು ನಗರದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದ್ದು, ಯುಜನ ಮೇಳದಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳ 15 ರಿಂದ 35 ವರ್ಷ ಒಳಪಟ್ಟ ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳ ಯುವಕ–ಯುವತಿಯರು ಯುವಜನ ಮೇಳದಲ್ಲಿ ಭಾಗವಹಿಸಬಹುದು. ಸ್ಪರ್ಧಿಗಳಿಗೆ ಪ್ರಯಾಣ, ದಿನ ಭತ್ಯೆಯನ್ನು ನೀಡಲಾಗುವುದು. ಸ್ಪರ್ಧಿಗಳು ಫೆ.27ರಂದು ಬೆಳಗ್ಗೆ 9 ಗಂಟೆಯೊಳಗೆ ವ್ಯವಸ್ಥಾಪಕರಲ್ಲಿ ವರದಿ ಮಾಡಿಕೊಳ್ಳಬೇಕು. ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು.

ಭಾವಗೀತೆ, ರಂಗ ಗೀತೆ, ಏಕಪಾತ್ರಭಿನಯ, ಕೋಲಾಟ, ಜಾನಪದ ನೃತ್ಯ, ಸೋಬಾನೆಪದ, ಭಜನೆ, ಜಾನಪದ ಗೀತೆ, ಚರ್ಮವಾದ್ಯಮೇಳ, ಡೊಳ್ಳು ಕುಣಿತ ಸ್ಪರ್ಧೆ ಏರ್ಪಡಿಸಲಾಗಿದೆ. ಮಾಹಿತಿಗೆ ನಗರದ ಜಿಲ್ಲಾಡಳಿತ ಭವನದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿ ಅಥವಾ ದೂರವಾಣಿ ಸಂಖ್ಯೆ 08226–224932, ಮೊಬೈಲ್ ನಂಬರ್ 9916466659, 9844160841 ಅನ್ನು ಸಂಪರ್ಕಿಸುವಂತೆ ಇಲಾಖೆಯ ಸಹಾಯಕ ನಿರ್ದೇಶಕ ಆರ್.ಶಿವಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಮೀನು ಪರಭಾರೆಗೆ ಶಾಸಕ ಎಆರ್‌ಕೆ ಒತ್ತಡ

ಆದಿಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ ಆರೋಪ

ಚಾಮರಾಜನಗರ, ಫೆ.19– ಶಾಸಕ ಎ.ಆರ್.ಕೃಷ್ಣಮೂರ್ತಿ ಕಾರ್ಯದರ್ಶಿಯಾಗಿರುವ ರಾಮಚಂದ್ರ ವಿದ್ಯಾಸಂಸ್ಥೆಗೆ ಆದಿಕರ್ನಾಟಕ ಅಭಿವೃದ್ಧಿ ಸಂಘದ ಹೆಸರಿನಲ್ಲಿರುವ 1.04 ಎಕರೆ ಜಮೀನನ್ನು ಪರಭಾರೆ ಮಾಡುವಂತೆ ಒತ್ತಡ ಹೇರಿದ್ದು, ಇದಕ್ಕೆ ಒಪ್ಪದ ನನ್ನ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ ಸಮಾಜದ ಮುಖಂಡರನ್ನು ದಾರಿ ತಪ್ಪಿಸುವ ಕೆಲಸವನ್ನು ಶಾಸಕರು ಮಾಡುತ್ತಿದ್ದಾರೆ ಎಂದು ಆದಿಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ನಂಜುಂಡಸ್ವಾಮಿ ಆರೋಪಿಸಿದರು.

ಹಿಂದೆ ದಿ.ಕೆ.ಸಿ.ರಂಗಯ್ಯ ಅವರು ಸಮಾಜದ ಅಧ್ಯಕ್ಷರಾಗಿದ್ದಾಗ ರಾಮಚಂದ್ರ ವಿದ್ಯಾಸಂಸ್ಥೆಯನ್ನು ಆರಂಭಿಸಲು ಸಂಘಕ್ಕೆ ಸೇರಿದ ಸರ್ವೆ ನಂ:379/4ಎ ನಲ್ಲಿರುವ 1.04 ಎಕರೆ ಜಾಗವನ್ನು ಬಳಕೆ ಮಾಡಿಕೊಂಡು ಕಟ್ಟಡ ನಿರ್ಮಿಸಿಕೊಂಡಿದ್ದರು. ಬಹಳ ವರ್ಷಗಳ ಕಾಲ ಅವರು ಎರಡು ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದ ಕಾರಣದಿಂದ ಮುಂದುವರಿದ್ದರು. ಕೆ.ಸಿ.ರಂಗಯ್ಯ ಅವರು ನಿಧನರಾದ ನಂತರ ನಾನು ಅಧ್ಯಕ್ಷನಾದೆ. ಇದೇ ಸಂಸ್ಥೆಯ ಕಾರ್ಯದರ್ಶಿಯಾಗಿರುವ ಎ.ಆರ್.ಕೃಷ್ಣಮೂರ್ತಿ 2023ರ ಜುಲೈ 12ರಂದು ಸಂಘಕ್ಕೆ ಪತ್ರ ಬರೆದು. ಇದನ್ನು ಸಂಸ್ಥೆಗೆ ಬರೆದುಕೊಡುವಂತೆ ಮನವಿ ಮಾಡಿದ್ದರು ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಈ ಪತ್ರವನ್ನು ನಾನು ಸಭೆಯಲ್ಲಿಟ್ಟು ಪ್ರಸ್ತಾಪ ಮಾಡಿದಾಗ ಇತರೇ ನಿರ್ದೇಶಕರು ಚರ್ಚೆ ಮಾಡಿ, ಮುಂದಿನ ಸಭೆಯಲ್ಲಿ ಇತ್ಯರ್ಥಪಡಿಸೋಣ ಎಂದು ಸಲಹೆ ನೀಡಿದ್ದರು. ಹೀಗಾಗಿ ಅವರ ಮನವಿಯಂತೆ ಸಂಸ್ಥೆಗೆ ಸಮಾಜದ ಆಸ್ತಿಯನ್ನು ಪರಭಾರೆ ಮಾಡಲಿಲ್ಲ. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡಿರುವ ಕೃಷ್ಣಮೂರ್ತಿ ಮತ್ತು ಅವರ ಬೆಂಬಲಿಗರು ನನ್ನ ವಿರುದ್ಧ ಸಮಾಜದ ಆಸ್ತಿ ಕಬಳಿಕೆ ಮಾಡಿಕೊಂಡಿದ್ದಾರೆ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ರಾಜ್‌ಗೋಪಾಲ್, ಖಜಾಂಚಿ ಸಿ.ಕೆ. ರವಿಕುಮಾರ್, ನಿರ್ದೇಶಕರಾದ ಜ್ಯೋತಿಗೌಡನಪುರ ವೆಂಕಟೇಶ್, ಆಲೂರು ಎ.ಎಸ್.ಮಲ್ಲಣ್ಣ, ಮುಖಂಡರಾದ ರಾಮಸಮುದ್ರ ನಾಗರಾಜು, ಕಾಂತರಾಜು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಗುಂಡ್ಲುಪೇಟೆ, ಫೆ.19–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.20ರಂದು ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗುಂಡ್ಲುಪೇಟೆ, ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೆನೆಕಟ್ಟೆ, ವೀರನಪುರ ಮತ್ತು ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ, ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್.ಜೆವೈ, ಎಲಚೆಟ್ಟಿ, ಗೋಪಾಲ್‌ಪುರ ಎನ್‌ಜೆವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಹಾಗೂ ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್‌ಜೆವೈ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಮೆಟ್ರೋ ರೈಲು ತರಲು ನಾನು ಬದ್ಧ

ಮೆಟ್ರೋ ರೈಲು ಯೋಜನೆಗೆ ಮಾರ್ಗ ನಕ್ಷೆ ತಯಾರಿ ಸಲಾಗುತ್ತಿದೆ. ಆದರೆ, ಕಾಂಗ್ರೆಸ್ಸಿಗರಿಗೆ ಈ ರೀತಿಯ ಅಭಿವೃದ್ಧಿ ಬಗ್ಗೆ ಆಸಕ್ತಿ ಇಲ್ಲ. ಮೈಸೂರು ಬೆಳೆಯಬಾರದು. ಜನರು ಪ್ರಸ್ತುತ ಇರುವ ವ್ಯವಸ್ಥೆಯಲ್ಲೇ ತೊಂದರೆ ಅನುಭವಿಸಬೇಕೆಂಬುದು ಅವರ ಉದ್ದೇಶ. ಆದರೆ, ಬೆಂಗಳೂರು ಹೊರತುಪಡಿಸಿ ಅತೀ ವೇಗವಾಗಿ ಅಭಿವೃದ್ಧಿಗೊಳ್ಳುತ್ತಿರುವ ಮೈಸೂರು ನಗರದಲ್ಲಿ ಮೂಲ ಸೌಲಭ್ಯ ಕಲ್ಪಿಸಬೇಕೆಂಬುದು ನಮ್ಮ ಉದ್ದೇಶ ಎಂದು ಪ್ರತಾಪ್ ಸಿಂಹ ನುಡಿದರು.

ಮೂರನೇ ಬಾರಿ ಮೋದಿ ಪ್ರಧಾನಿ: ನರೇಂದ್ರ ಮೋದಿ ಅವರು ಮೂರನೇ ಬಾರಿ ಈ ದೇಶದ ಪ್ರಧಾನಿಯಾಗುತ್ತಾರೆ. ನಾವು ಮೈಸೂರಲ್ಲಿ ನಮ್ಮ ಮೆಟ್ರೋ ರೈಲು ಯೋಜನೆ ಅನುಷ್ಠಾನವಾಗುತ್ತದೆ. ಈಗಾಗಲೇ ಪೆರಿಫೆರಲ್ ರಿಂಗ್ ರಸ್ತೆಗೆ ಮುಡಾದಿಂದ ಡಿಪಿಆರ್ ತಯಾರಿಸಲು ಅನುಮೋದನೆ ಸಿಗುವ ಹಂತದಲ್ಲಿದೆ. ಈ ಎಲ್ಲಾ ಬೆಳವಣಿಗೆಗಳಿಂದಾಗಿ ಮುಂದೆ ಲೋಕಸಭಾ ಚುನಾವಣೆ ಬಳಿಕ ಈ ಮಹತ್ವದ ಯೋಜನೆ ಮೈಸೂರಲ್ಲಿ ಸಾಕಾರಗೊಳ್ಳುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು-ಬೆಂಗಳೂರು ನಡುವೆ ಅಭಿವೃದ್ಧಿಪಡಿಸಿರುವ ಜೋಡಿ ಹಳಿ ರೈಲು ಮಾರ್ಗದ ಜೊತೆಗೆ ಇನ್ನೂ ಎರಡು ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ. ಎರಡು ಎಲೆಕ್ಟ್ರಿಕ್ ರೈಲ್ವೆ ಟ್ರ್ಯಾಕ್ ಮಾಡಬಹುದು ಅಥವಾ ಬಿಡದಿವರೆಗೆ ಇರುವ ಉದ್ದೇಶಿತ ಮೆಟ್ರೋ ಮಾರ್ಗವನ್ನೇ ಮೈಸೂರುವರೆಗೂ ವಿಸ್ತರಿಸಲು ಅವಕಾಶವಿರುವುದರಿಂದ ಈ ಎರಡೂ ನಗರಗಳ ನಡುವೆ ನಾಲ್ಕು ಪಥದ ರೈಲು ಮಾರ್ಗ ಮಾಡುವುದು ನಮ್ಮ ಆಶಯವಾಗಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಗ್ರಾಮ ಲೆಕ್ಕಾಧಿಕಾರಿಗಳ ನೇಮಕ

ನಿಯೋಜನೆ ಮೇಲೆ ಅಧಿಕಾರಿಗಳು ಬೇರೆಡೆ ಕೆಲಸಕ್ಕೆ ತೆರಳುವುದನ್ನು ತಡೆಯಲು ಸಾಧ್ಯವಿಲ್ಲ. ಕಳೆದ ಸರ್ಕಾರ ತುಂಬಾ ಜನರನ್ನು ಬೇರೆಡೆ ನಿಯೋಜನೆ ಮಾಡಿದೆ. ಈಗಲೂ ಕನಿಷ್ಠ 2000 ಉದ್ಯೋಗಿಗಳ ನಿಯೋಜನೆಗೆ ಮನವಿ ಸಲ್ಲಿಸಲಾಗಿದೆ. ಆದರೆ, ಈವರೆಗೆ ಒಬ್ಬರನ್ನೂ ನಿಯೋಜನೆ ಮಾಡಿಲ್ಲ, ಯಾರನ್ನೂ ಮೂಲಸ್ಥಾನದಿಂದ ನಿಯೋಜನೆಗೊಳಿಸದಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಎಲ್ಲಾ ಜಿಲ್ಲಾಧಿಕಾರಿಗಳಿಗೂ ಈಗಾಗಲೇ ಸೂಚನೆ ನೀಡಲಾಗಿದ್ದು, ಜಿಲ್ಲಾಧಿಕಾರಿಗಳ ವಿವೇಚನೆ ಮೇಲೆ ಗರಿಷ್ಠ 5 ಸ್ಥಾನಗಳನ್ನು ಹೊರತುಪಡಿಸಿ ಉಳಿದ ಎಲ್ಲ ನೌಕರರನ್ನು ಮೂಲಸ್ಥಾನಕ್ಕೆ ವಾಪಸ್ ಕರೆಸಿಕೊಳ್ಳಬೇಕು, ಜನರಿಗೆ ಸರಳ ಹಾಗೂ ಶೀಘ್ರ ಸೇವೆ ಒದಗಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ತಾಲೂಕು ಆಡಳಿತ ಕಟ್ಟಡ ನಿರ್ಮಾಣ: ರಾಜ್ಯದ ಎಲ್ಲಾ 49 ಹೊಸ ತಾಲೂಕುಗಳಿಗೂ ತಾಲೂಕು ಆಡಳಿತ ಕಟ್ಟಡಗಳ ನಿರ್ಮಾಣಕ್ಕೆ ಮುಂದಿನ ಎರಡು-ಮೂರು ವರ್ಷದಲ್ಲಿ ಅನುಮತಿ ನೀಡಲಾಗುವುದು ಎಂದರು. ಕೌಜಲಗಿ ಮಹಾಂತೇಶ್ ಶಿವಾನಂದ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018ರಲ್ಲಿ 63 ಹೊಸ ತಾಲೂಕುಗಳನ್ನು ಘೋಷಿಸಲಾಗಿತ್ತು. ಹಿಂದಿನ ಸರ್ಕಾರ 14 ತಾಲೂಕುಗಳಿಗೆ ಮಾತ್ರ ಆಡಳಿತ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿತ್ತು, ಉಳಿದ 49 ತಾಲೂಕುಗಳಿಗೆ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಿರಲಿಲ್ಲ, ಮುಂದಿನ ಎರಡು-ಮೂರು ವರ್ಷದಲ್ಲಿ ಈ ಎಲ್ಲಾ ತಾಲೂಕುಗಳಿಗೂ ಹೊಸ ಆಡಳಿತ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು ಎಂದು ಭರವಸೆ ನೀಡಿದರು.

ಹೊಸ ತಾಲೂಕುಗಳಲ್ಲದೆ, ಹೆಚ್ಚುವರಿಯಾಗಿ 80 ರಿಂದ 100 ತಾಲೂಕುಗಳ ಆಡಳಿತ ಕಚೇರಿಗಳ ದುರಸ್ತಿಯಾಗಬೇಕಿದ್ದು, ಹೊಸ ಆಡಳಿತ ಕಚೇರಿಗಳ ನಿರ್ಮಾಣಕ್ಕೆ ಬೇಡಿಕೆ ಇದೆ, ಅನುದಾನದ ಲಭ್ಯತೆ ನೋಡಿಕೊಂಡು, ಆದ್ಯತೆ ಮೇರೆಗೆ ಆಡಳಿತ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು ಎಂದರು.

ಬಗರ್ ಹುಕುಂ ಅರ್ಜಿ ಪುನರ್ ಪರಿಶೀಲನೆ

ಭೂಮಿಯನ್ನು ಬಗರ್ ಹುಕುಂ ಅಡಿಯಲ್ಲಿ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಗೋಮಾಳ ಜಮೀನಿನ ಮಂಜೂರಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಿಂದ ಕಟ್ಟುನಿಟ್ಟಿನ ಸೂಚನೆಗಳಿವೆ, ಗೋಮಾಳದಲ್ಲಿ ಹೆಚ್ಚುವರಿ ಜಮೀನಿನ ಲಭ್ಯತೆ ಇದ್ದಲ್ಲಿ ಮಾತ್ರ ಬಗರ್ ಹುಕುಂ ಅರ್ಜಿದಾರರಿಗೆ ಭೂ ಮಂಜೂರು ಮಾಡಬಹುದು. ಜಿಲ್ಲಾಧಿಕಾರಿಗಳ ಘೋಷಣೆ ನಂತರ ಮುಂದಿನ ಪ್ರಕ್ರಿಯೆಗಳು ಚಾಲನೆಗೊಳ್ಳುತ್ತವೆ, ಆದರೆ, ಹೆಚ್ಚುವರಿ ಭೂಮಿ ಇಲ್ಲದಿದ್ದರೆ ಗೋಮಾಳ ಜಮೀನಿನ ಮಂಜೂರಾತಿ ಸಾಧ್ಯವಿಲ್ಲ, ಒಂದು ವೇಳೆ ಮಂಜೂರುಗೊಳಿಸಿದರೆ, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಎದುರು ಸರ್ಕಾರ ತಪ್ಪಿತಸ್ಥರಾಗಿ ನಿಲ್ಲಬೇಕಾದ ಪರಿಸ್ಥಿತಿ ಎದುರಾಗುತ್ತದೆ ಎಂದರು. ಬಡವರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಜಾರಿಗೆ ತಂದಿರುವ ಬಗರ್ ಹುಕುಂ ಯೋಜನೆಯನ್ನು ಅನೇಕರು ಉದ್ದೇಶಪೂರ್ವಕವಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಕೆಲವರು ಬಗರ್ ಹುಕುಂ ಜಮೀನು ಮಂಜೂರಾತಿಗೆ 25ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಕಾನೂನಿನ ಪ್ರಕಾರ ಅರ್ಜಿದಾರರಿಗೆ 2005ಕ್ಕೆ ಕನಿಷ್ಠ 18 ವರ್ಷವಾಗಿರಬೇಕು, ಇದೀಗ 18 ವರ್ಷ ತುಂಬಿದವರೂ ಅರ್ಜಿ ಸಲ್ಲಿಸಿದ್ದಾರೆ. ನಮೂನೆ 57ರ ಅಡಿ ಒಟ್ಟಾರೆ 9,85,000 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಎಲ್ಲರಿಗೂ ಜಮೀನು ಮಂಜೂರು ಮಾಡಬೇಕೆಂದರೆ 54 ಲಕ್ಷ ಎಕರೆ ಜಮೀನಿನ ಅಗತ್ಯವಿದೆ, ರಾಜ್ಯದಲ್ಲಿ ಸರ್ಕಾರಿ ಜಮೀನು ಅಷ್ಟು ಇಲ್ಲ. ಅನರ್ಹರಿಗೆ ಭೂ ಮಂಜೂರುಗೊಳಿಸಬಾರದು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ, ಅನೇಕರ ಅರ್ಜಿಗಳು ಅನರ್ಹಗೊಂಡಿವೆ, ಅರ್ಜಿಗಳನ್ನು ತಿರಸ್ಕರಿಸುವ ಸಂದರ್ಭದಲ್ಲಿ ನಿಯಮಗಳನ್ನು ತಪ್ಪಾಗಿ ಅರ್ಥೈಸಿದ್ದರೆ ಖಂಡಿತವಾಗಿ ಪುನರ್ ಪರಿಶೀಲನೆಗೆ ಒಳಪಡಿಸಲಾಗುವುದು ಎಂದರು.

ನಾಮಪತ್ರ ಸಲ್ಲಿಕೆಗೆ ಇಂದು ಕಡೇ ದಿನ

ಆಡಳಿತ ಪಕ್ಷದ ಸದಸ್ಯರೇ ಕುಮಾರಸ್ವಾಮಿ ವಿರುದ್ಧ ಬಹಿರಂಗವಾಗಿ ತಿರುಗಿಬಿದ್ದಿದ್ದಾರೆ. ರಾಜ್ಯಸಭಾ ಚುನಾವಣೆ ವಿಚಾರದಲ್ಲಿ ಆಡಳಿತ ಪಕ್ಷವೇ ಸ್ವಲ್ಪ ಅದುರಿದಂತೆ ಕಂಡಿದೆ. ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಆ ಪಕ್ಷದ ನಾಯಕರು ತಮ್ಮ ಮತಗಳು ಅಡ್ಡ ಮತದಾನವಾಗದಂತೆ ಜಾಗ್ರತೆ ವಹಿಸಿದ್ದಾರೆ. ಇದರ ಜೊತೆಗೆ ಬಿಜೆಪಿ-ಜೆಡಿಎಸ್ ವಿರುದ್ಧ ಹರಿಹಾಯುವ ಕೆಲಸವು ನಡೆದಿದೆ. ಕಾಂಗ್ರೆಸ್ ತಂತ್ರಗಾರಿಕೆ ಮತ್ತು ಮುಖಂಡರು ಮಾಡಿರುವ ಆರೋಪಗಳ ಬಗ್ಗೆ ಕುಮಾರಸ್ವಾಮಿ ದಾಖಲೆ ಸಮೇತ ಮಾಹಿತಿ ನೀಡಲಿದ್ದಾರಂತೆ.

ಕುಮಾರಸ್ವಾಮಿ ಕಾಂಗ್ರೆಸ್‌ಗೆ ಕಣ್ಣಾಕಿದ್ದಾರೆ: ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತಮ್ಮ ಶಾಸಕರನ್ನು ಹೊತ್ತೊಯ್ಯಲು ಜೆಡಿಎಸ್ ನಾಯಕ ಕುಮಾರಸ್ವಾಮಿ ಧಮಕಿ ಹಾಕುವ ಮಟ್ಟಕ್ಕಿಳಿದಿದ್ದಾರೆ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ನಾಸೀರ್ ಹುಸೇನ್, ಜಿ.ಸಿ.ಚಂದ್ರಶೇಖರ್ ಮತ್ತು ಅಜಯ್ ಮಾಕೆನ್ ಕಣಕ್ಕಿಳಿದಿದ್ದು, ಬಿಜೆಪಿಯ ನಾರಾಯಣಸಾ ಭಾಂಡಗೆ ಮತ್ತು ಜೆಡಿಎಸ್ ಪಕ್ಷದಿಂದ ಕುಪೇಂದ್ರ ರೆಡ್ಡಿ ಕಣದಲ್ಲಿದ್ದಾರೆ.

ಕುಮಾರಸ್ವಾಮಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸುವ ಸಲುವಾಗಿ ಕಾಂಗ್ರೆಸ್ ಪಕ್ಷದ ಶಾಸಕರ ಮೇಲೆ ಕಣ್ಣು ಹಾಕಿದ್ದಾರೆ ಎಂದು ನೇರವಾಗಿ ಆರೋಪಿಸಿದ್ದಾರೆ.

ನಮ್ಮ ಶಾಸಕರಿಗೆ ಧಮಕಿ: ನಮ್ಮ ಪಕ್ಷದ ಶಾಸಕರಿಗೆ ಕರೆ ಮಾಡಿ ಆಫರ್ ಕೊಡುತ್ತಿರುವ ಕುಮಾರಸ್ವಾಮಿ, ಧಮಕಿಯನ್ನೂ ಹಾಕುತ್ತಿರುವ ಕುರಿತು ನನಗೆ ಮಾಹಿತಿ ಬಂದಿದೆ. ಅವರು, ಯಾವ ಶಾಸಕರಿಗೆ ಆಫರ್ ಕೊಟ್ಟಿದ್ದಾರೆ ಯಾರಿಗೆ ಧಮಕಿ ಹಾಕುತ್ತಿದ್ದಾರೆ ಎಂಬ ಬಗ್ಗೆ ಸ್ವತಃ ಶಾಸಕರೇ ತಮಗೆ ಮಾಹಿತಿ ನೀಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು. ನಮ್ಮ ಪಕ್ಷದ ಶಾಸಕರ ಮೇಲೆ ಕಣ್ಣು ಹಾಕುವ ಬದಲು ಕುಮಾರಸ್ವಾಮಿ ಅವರು ಮೊದಲು ತಮ್ಮ ಮನೆಯನ್ನು ಸರಿಪಡಿಸಿಕೊಳ್ಳಲಿ ಎಂದರಲ್ಲದೆ, ಈ ವಿಷಯದಲ್ಲಿ ನಾನು ಸದ್ಯ ಹೆಚ್ಚು ಮಾತನಾಡುವುದಿಲ್ಲ ಎಂದು ನುಡಿದರು. ವಿರೋಧ ಪಕ್ಷಗಳು ನಿಮ್ಮ ಮತಗಳಿಗೆ ಕೈ ಹಾಕುತ್ತಿವೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಐದನೇ ಅಭ್ಯರ್ಥಿಯನ್ನು ಹಾಕಿ ಅವರು ಪ್ರಯತ್ನ ಮಾಡುತ್ತಿದ್ದಾರೆ, ಆದರೆ ನಮಗೆ ಬೇರೆಯವರ ಮತಗಳ ಅಗತ್ಯವಿಲ್ಲ, ನಾವು ಗೆದ್ದಿರುವ ನೂರಾ ಮೂವತ್ತಾರು ಶಾಸಕರ ಜತೆ ಪಕ್ಷೇತರರೂ ನಮ್ಮ ಜತೆಗಿದ್ದಾರೆ ಎಂದರು. ಕುಮಾರಸ್ವಾಮಿ ಅವರ ಪ್ರಯತ್ನದ ಬಗ್ಗೆ ಅನಿವಾರ್ಯವಾದರೆ ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿ ತಿಳಿಸಿದ ಅವರು, ಯಾವ ಕಾರಣಕ್ಕೂ ನಮ್ಮ ಮನೆ ಹಾಳಾಗಲು ಬಿಡುವುದಿಲ್ಲ ಎಂದರು.

ಶಾಸಕರಿಗೆ ಸಿಎಂ ಸಿದ್ದರಾಮಯ್ಯ ಕಟ್ಟಾಜ್ಞೆ

ಬೇರೆ ಇರುತ್ತದೆ. ನಾವು ಕಠಿಣ ಸ್ಥಿತಿಯಲ್ಲಿದ್ದೇವೆ. ನಿಮಗೆ ಇದರ ಅರಿವಿದೆಯೋ ಇಲ್ಲವೋ, ನಾವು ಹೆಚ್ಚು ಸ್ಥಾನ ಗಳಿಸಿದರೆ ನಮ್ಮ ಸರ್ಕಾರ ಗಟ್ಟಿ ಯಾಗುತ್ತದೆ. ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಯನ್ನು ಈಡೇರಿಸಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಿ ಜನತೆಯೂ ಸಂತುಷ್ಟವಾಗಿದ್ದಾರೆ. ಹಾಗೆಂದು ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ, ಚುನಾವಣೆ ಯನ್ನೇ ಗುರಿಯಾಗಿಟ್ಟುಕೊಂಡು ಬೂತ್ ಮಟ್ಟದಿಂದ ಎಲ್ಲಾ ಹಂತದ ಕಾರ್ಯ ಕರ್ತರ ಮತ್ತು ಮುಖಂಡರ ಸಭೆ ನಡೆಸಿ, ಪಕ್ಷ ಸಂಘಟಿಸಿ ನಮ್ಮ ಗುರಿ ಮುಟ್ಟಬೇಕು. ನಮ್ಮ ಗುರಿ ಮುಟ್ಟಲು ನೀವು ಸ್ಥಳೀಯವಾಗಿ ಕೆಲಸ ಮಾಡಿ, ಬೆಂಗಳೂರು ಬಿಡಿ ಎಂದಿದ್ದಾರೆ.

ಬಜೆಟ್ ಅಧಿವೇಶನ ನಂತರ ಬರುವ ರಾಜ್ಯಸಭೆ ಚುನಾವಣೆ ಮುಗಿಯುತ್ತಿದ್ದಂತೆ ಸಚಿವರುಗಳು ತಮ್ಮ ತವರು ಜಿಲ್ಲೆಯಲ್ಲೇ ಉಳಿಯಬೇಕು, ಶಾಸಕರು ತಮ್ಮ ಕ್ಷೇತ್ರ ಬಿಟ್ಟು ಹೊರಬರಕೂಡದು. ಪ್ರಸಕ್ತ ಸಾಲಿನ ಬಜೆಟ್ ಅಂಗೀಕಾರವಾಗುತ್ತಿದ್ದಂತೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುತ್ತೇನೆ. ನೀವು ಕ್ಷೇತ್ರಗಳ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೆತ್ತಿಕೊಂಡು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ. ಮತ್ತೊಂದೆಡೆ ಬೂತ್ ಮಟ್ಟದಲ್ಲಿ ಕಾರ್ಯಕರ್ತರ ಸಭೆ ನಡೆಸಿ ಜೊತೆ ಜೊತೆಯಲ್ಲೇ ನಮ್ಮ ಗ್ಯಾರಂಟಿ ಕಾರ್ಯಕ್ರಮಗಳ ಬಗ್ಗೆ ಪ್ರಚಾರ ಮಾಡಲು ಆದ್ಯತೆ ಕೊಡಿ. ಗ್ಯಾರಂಟಿ ಫಲಾನುಭವಿಗಳ ಗುಂಪು ಸಭೆ ನಡೆಸಿ ಆ ಮತದಾರರನ್ನು ಪಕ್ಷಕ್ಕೆ ಹಿಡಿದಿಡುವ ಕೆಲಸ ಮಾಡಿ. ಇನ್ನೇನಿದ್ದರೂ ಚುನಾವಣೆ ಅಷ್ಟೇ ನಮ್ಮ ಮುಂದಿರುವುದು, ನಾವು ಹೆಚ್ಚು ಸ್ಥಾನ ಪಡೆದಷ್ಟೂ ನಾವು, ನೀವು ಸರ್ಕಾರ ಬಲಿಷ್ಠಗೊಳ್ಳುತ್ತದೆ ಎಂದು ಕಿವಿಮಾತು ಹೇಳಿದರು.

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಡಿಸಿ ಡಾ॥ ಕೆ.ವಿ.ರಾಜೇಂದ್ರ ಸೂಚನೆ



ಬೇಸಿಗೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳಲು ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಭೆ ನಡೆಸಿದರು.

ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ

ಮೈಸೂರು ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿಲ್ಲ. ಮಾರ್ಚ್‌ನಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಂಭವವಿದೆ. ಇದಕ್ಕಾಗಿ ಇಂದಿನಿಂದಲೇ ಮುನ್ನೆಚ್ಚರಿಕೆ ಕೈಗೊಳ್ಳುತ್ತಿದ್ದೇವೆ. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಅಗತ್ಯ ಇರುವ ಕಡೆ ಬೋರ್‌ವೆಲ್ ಕೊರೆಸಲು ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ತಾಲೂಕುಗಳ ತಹಸೀಲ್ದಾರ್‌ಗಳ ಬಳಿ ತಲಾ 50 ಲಕ್ಷ ರೂ. ಅನುದಾನ ಮೀಸಲಿಡಲಾಗಿದೆ. ಈ ಹಣವನ್ನು ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಬಳಕೆ ಮಾಡಿಕೊಳ್ಳಲು ಸೂಚಿಸಿದ್ದೇವೆ. ಮೈಸೂರು ಜಿಲ್ಲೆಯ ಎಲ್ಲಾ ಒಂಬತ್ತು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಹೀಗಾಗಿ ಜನರು ಬರದ ಕಾರಣದಿಂದ ಗುಳೆ ಹೋಗದಂತೆ ನೋಡಿಕೊಳ್ಳಲಾಗುವುದು. ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ದೊರಕಿಸಿಕೊಡಲಾಗುವುದು. ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

– ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ, ಮೈಸೂರು

ಮೈಸೂರು,ಫೆ.19(ಎಂಟಿವೈ)– ಬೇಸಿಗೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಜಿಲ್ಲೆಯ ಬರ ಘೋಷಿತ ತಾಲೂಕುಗಳಲ್ಲಿ ಬರ ಪರಿಸ್ಥಿತಿ ನಿರ್ವಹಣೆ ಕುರಿತು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಸಿಗೆ ಆರಂಭವಾಗುತ್ತಿದ್ದು, ಜನ-ಜಾನುವಾರುಗಳಿಗೆ ಬೇಕಾಗಿರುವ ಕುಡಿಯುವ ನೀರಿನ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಯಾವುದೇ ಕಾರಣಕ್ಕೂ ನೀರಿನ ಅಭಾವ ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ತಾಲೂಕುವಾರು ಕುಡಿಯುವ ನೀರಿನ ಲಭ್ಯತೆ ಕುರಿತು ಮಾಹಿತಿ ಸಂಗ್ರಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಬಡಾವಣೆ ಹಾಗೂ ಗ್ರಾಮಗಳನ್ನು ಗುರುತಿಸಬೇಕು. ಪ್ರತಿ ಗ್ರಾಮದಲ್ಲಿ ಒಂದು ಖಾಸಗಿ ಬೋರ್‌ವೆಲ್ ಬಾಡಿಗೆ ಆಧಾರದಲ್ಲಿ ಪಡೆದುಕೊಂಡು, ಅಗ್ರಿಮೆಟ್ ಮಾಡಿಕೊಂಡು ತುರ್ತು ಸಂದರ್ಭದಲ್ಲಿ ಗ್ರಾಮದ ಜನರಿಗೆ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಬೇಸಿಗೆ ಆರಂಭಕ್ಕೂ ಮುನ್ನ ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಗೊಳ್ಳುವುದರಿಂದ ನೀರಿನ ಸಮಸ್ಯೆಯುಳ್ಳ ಪ್ರದೇಶಕ್ಕೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಈಗಲೇ ಟೆಂಡರ್ ಕರೆದು ವ್ಯವಸ್ಥೆ ಮಾಡಿಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದರೆ ತಿಳಿಸಲು ಸಹಾಯವಾಣಿ ತೆರೆದು ಸಿಬ್ಬಂದಿ ನಿಯೋಜಿಸಬೇಕು. ಕುಡಿಯುವ ನೀರಿನ ಪೂರೈಕೆ ಮಾಡುವ ನೀರನ್ನು ಅದರ ಶುದ್ಧತೆ ಹಾಗೂ ಗುಣಮಟ್ಟ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಅಗತ್ಯ ಬಿದ್ದರೆ ಹೊಸ ಬೋರ್‌ವೆಲ್ ಕೊರೆಯಲು ಗುರುತಿಸಿ ಇಟ್ಟುಕೊಳ್ಳಬೇಕು ಎಂದು ತಿಳಿಸಿದರು

ಜಾನುವಾರುಗಳ ಮೇವಿನ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು. ಮೇವು ಲಭ್ಯತೆ ಬಗ್ಗೆ ಮಾಹಿತಿ ಹೊಂದಿರಬೇಕು. ರೈತರಿಗೆ ವಿತರಿಸಿರುವ ಮೇವಿನ ಬೀಜದ ಕಿರು ಪೊಟ್ಟಣಗಳನ್ನು ಸದ್ಬಳಕೆ ಆಗುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಒಂದು ವಾರದೊಳಗೆ ತಾಲೂಕುಗಳಲ್ಲಿ ರೈತ ಮುಖಂಡರೊಂದಿಗೆ ಕುಡಿಯುವ ನೀರು, ಜಾನುವಾರು ಮೇವು ಲಭ್ಯತೆ, ರಸಗೊಬ್ಬರ ಕೊರತೆ, ವಿದ್ಯುತ್‌ಚ್ಛಕ್ತಿ ಕುರಿತಂತೆ ಸಭೆ ನಡೆಸಬೇಕು ಎಂದು ಸೂಚನೆ ನೀಡಿದರು.

ಬರವನ್ನು ಸಮರ್ಥವಾಗಿ ನಿರ್ವಹಿಸಲು ಅಧಿಕಾರಿಗಳು ಕ್ಷೇತ್ರಗಳಿಗೆ ಭೇಟಿ ನೀಡಬೇಕು. ಬರ ಪರಿಹಾರದ ಹಣ ಎಲ್ಲಾ ಅರ್ಹ ಫಲಾನುಭವಿ ಗಳಿಗೆ ತಲುಪಿದೆ ಎಂಬುದನ್ನು ಪರಿಶೀಲನೆ ನಡೆಸಬೇಕು. ರೈತರಿಗೆ ಫ್ರೂಟ್ ಐಡಿ ಸೃಜನೆ ಮಾಡಬೇಕು. ಶೇ.100 ರಷ್ಟು ಫ್ರೂಟ್ ಐಡಿಗಳು ಸೃಜಿಸ ಬೇಕು. ರೈತರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡಲು ಫ್ರೂಟ್ ಐಡಿ ಅವಶ್ಯಕವಾಗಿದೆ ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಶಿವರಾಜ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಫೆ.26ಕ್ಕೆ ಸಿದ್ದರಾಮನ ಹುಂಡಿಯಿಂದ ಡಿಸಿ ಕಚೇರಿವರೆಗೆ ಗ್ರಾಮ ಸಹಾಯಕರ ಪಾದಯಾತ್ರೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೆಚ್.ಎನ್.ದೇವರಾಜು ಮಾತನಾಡಿದರು.

ಮೈಸೂರು, ಫೆ.19(ಜಿಎ)–ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಸಹಾಯಕರಿಗೆ ಪೂರಕ ಬಜೆಟ್‌ನಲ್ಲಿ ಕನಿಷ್ಠ 21 ಸಾವಿರ ರೂ., ವೇತನ ನಿಗದಿ ಹಾಗೂ ಸೇವಾ ಭದ್ರತೆ ಒದಗಿಸಬೇಕು ಎಂದು ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ರಾಜ್ಯಾಧ್ಯಕ್ಷ ಹೆಚ್.ಎನ್.ದೇವರಾಜು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಫೆ.26ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಊರು ಸಿದ್ದರಾಮನಹುಂಡಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಪಾದಯಾತ್ರೆ ಆಯೋಜಿಸಿದ್ದೇವೆ. ಬಳಿಕ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆ.28ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಿದ್ದೇವೆ ಎಂದು ತಿಳಿಸಿದರು.

ರಾಜ್ಯಾದ್ಯಂತ 10,450 ಗ್ರಾಮ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರ ಪ್ರತಿಯೊಂದು ಕೆಲಸಗಳಿಗೂ ನಮ್ಮನ್ನು ಬಳಸಿಕೊಳ್ಳುತ್ತಿದ್ದು, ಯಾವುದೇ ಸೌಲಭ್ಯಗಳನ್ನು ನೀಡದೆ ಮಾಸಿಕ 13 ಸಾವಿರ ಗೌರವಧನ ನೀಡಲಾಗುತ್ತಿದೆ. 2023ರ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ವೇತನ ಹಾಗೂ ಸೇವಾ ಭದ್ರತೆ ನೀಡುವುದಾಗಿ ಕಂದಾಯ ಸಚಿವರು ಭರವಸೆ ನೀಡಿದ್ದರು. ಆದರೆ, ಬಜೆಟ್‌ನಲ್ಲಿ ಈ ವಿಚಾರವೇ ಪ್ರಸ್ತಾಪವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಖಜಾಂಚಿ ಶ್ರೀನಿವಾಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಡಿ.ಬಸವರಾಜು, ಪ್ರಧಾನ ಕಾರ್ಯದರ್ಶಿ ಎಸ್.ಅರುಣ್ ಕುಮಾರ್, ಕಾನೂನು ಸಲಹೆಗಾರ ಪಾವಗಡ ಶ್ರೀರಾಮ್, ಪದಾಧಿಕಾರಿಗಳಾದ ಮುನಿಯಪ್ಪ, ಮಂಜುನಾಥ್ ಉಪಸ್ಥಿತರಿದ್ದರು.

ಬ್ಯಾಂಕ್‌ನಿಂದ ವಂಚನೆ ; ರೈತರ ಪ್ರತಿಭಟನೆ



ಕರ್ನಾಟಕ ರಾಜ್ಯ ರೈತ ಸಂಘವು ಸೋಮವಾರ ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಿತ್ತು.

ಮೈಸೂರು, ಫೆ.19(ಜಿಎ)–ಮೈಸೂರಿನ ಲಕ್ಷ್ಮಿವಿಲಾಸ ರಸ್ತೆಯಲ್ಲಿರುವ ಕರೂರು ವೈಶ್ಯ ಬ್ಯಾಂಕ್ ರೈತರನ್ನು ವಂಚಿಸುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಕರೂರು ವೈಶ್ಯ ಬ್ಯಾಂಕ್ ಎದುರು ನೂರಾರು ರೈತರು ಸೋಮವಾರ ಪ್ರತಿಭಟನಾ ಧರಣಿ ನಡೆಸಿದರು.

ಈ ಬ್ಯಾಂಕ್ ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ಭಾಗದ 400ಕ್ಕೂ ಹೆಚ್ಚು ರೈತರಿಗೆ ವಂಚನೆ ಮಾಡಿದೆ. 4 ಲಕ್ಷ ರೂ. ಸಾಲ ಮಂಜೂರು ಮಾಡಿ, ಕೇವಲ 2 ಲಕ್ಷ ರೂ. ನೀಡಿದ್ದು, ಬಾಕಿ ಎರಡು ಲಕ್ಷ ರೂಗಳನ್ನು ಬ್ಯಾಂಕ್ ಸಿಬ್ಬಂದಿ ಬಳಸಿಕೊಂಡಿದ್ದಾರೆ. ಈ ಸಂಬಂಧ ತನಿಖೆ ನಡೆಸಿ, ಬ್ಯಾಂಕ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಬ್ಯಾಂಕ್‌ಗೆ ಎಲ್ಲಾ ಮಾಹಿತಿ ಇದ್ದು, ನ್ಯಾಯಾಲಯದಲ್ಲಿ ರೈತರ ವಿರುದ್ಧ ದಾವೆ ಹೂಡಿ ಒಂದಕ್ಕೆ ಎರಡರಷ್ಟು ವಸೂಲಾತಿಗೆ ಬ್ಯಾಂಕ್ ಸಿಬ್ಬಂದಿ ಮುಂದಾಗಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಾಕಾರರು ಬ್ಯಾಂಕ್ ಸಿಬ್ಬಂದಿಗಳ ವಂಚನೆಯಿಂದ ರೈತರಿಗೆ ಬಹಳ ತೊಂದರೆಯಾಗಿದ್ದು, ಬ್ಯಾಂಕ್ ಸಿಬ್ಬಂದಿಗಳು ಮಾಡಿರುವ ವಂಚನೆ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು. ಬ್ಯಾಂಕ್ ಮೇಲೆ ಸೂಕ್ತ ಕಾನೂನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೊಸಕೋಟೆ ಬಸವರಾಜು, ಪ್ರಸನ್ನ ಎನ್.ಗೌಡ, ಮರಂಕಯ್ಯ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದರು.

ನಾಳೆ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಿ.ಜಗನ್ನಾಥ್ ಮಾತನಾಡಿದರು.

ಮೈಸೂರು, ಫೆ.19(ಜಿಎ)–ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಫೆ.21ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ ರಾಜ್ಯಾದ್ಯಂತ ಶಾಸಕರ ಕಚೇರಿ ಮುಂಭಾಗ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯ ಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ತಿಳಿಸಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೆಡರೇಷನ್ ರಾಜ್ಯ ಮಂಡಳಿ ಸದಸ್ಯ ಡಿ.ಜಗನ್ನಾಥ ಮಾತನಾಡಿ, ಕಾರ್ಯಕರ್ತೆಯರಿಗೆ ಮಾಸಿಕ 15 ಸಾವಿರ ಮತ್ತು ಸಹಾಯಕಿಯರಿಗೆ 10 ಸಾವಿರ ರೂ, ಗೌರವಧನ ಹಾಗೂ 3 ಲಕ್ಷ ರೂ., ನಿವೃತ್ತಿ ಹಣ ನೀಡಬೇಕು ಎಂಬುದು ನಮ್ಮ ಒತ್ತಾಯ. ಬಜೆಟ್‌ಗೂ ಮುನ್ನ ಈ ಬಗ್ಗೆ ಪ್ರಸ್ತಾಪಿಸುವಾಗ ಪರಿಶೀಲಿಸುತ್ತೇವೆ ಎಂದಿದ್ದ ಮುಖ್ಯಮಂತ್ರಿ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ ಶಾಸಕರ ಮೂಲಕ ಒತ್ತಾಯಿಸಲಿದ್ದೇವೆ ಎಂದರು.

ಫೆಡರೇಶನ್ ಕಾರ್ಯದರ್ಶಿ ಗಿರಿಜಾ ಮಾತನಾಡಿ, ಸಹಾಯಕಿಯರಿಗೆ 7 ಸಾವಿರ ರೂ., ಕಾರ್ಯಕರ್ತೆಯರಿಗೆ 11.5 ಸಾವಿರ ಗೌರವಧನ ನೀಡುತ್ತಿದ್ದು, ಈಗಿನ ಪರಿಸ್ಥಿತಿಯಲ್ಲಿ ಏನಕ್ಕೂ ಸಾಕಾಗುತ್ತಿಲ್ಲ. ಗೃಹಲಕ್ಷ್ಮಿ ಹಣವನ್ನು ಗೌರವಧನದ ಏರಿಕೆ ಎಂಬಂತೆ ಸರ್ಕಾರ ಬಿಂಬಿಸುತ್ತಿರುವುದು ಸರಿಯಲ್ಲ. ನಮ್ಮ ನ್ಯಾಯಯುತ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಫೆಡರೇಷನ್ ನಗರ ಉಪಾಧ್ಯಕ್ಷೆ ಫರ್ಜಾನಾ, ಖಜಾಂಚಿ ಸಿ.ಗೀತಾ, ಸದಸ್ಯೆ ಬಿಲ್ಕಿಸ್ ಖಾನಂ ಉಪಸ್ಥಿತರಿದ್ದರು.

ಮೋದಿ ಹೊಗಳುವುದರೊಂದಿಗೆ ದೇವೇಗೌಡ 'ಚಮಚಾಗಿರಿ' ಮಾಡ್ತಿದ್ದಾರೆ

ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವ್ಯಂಗ್ಯ



ಮೈಸೂರು,ಫೆ.19(ಎಂಟಿವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಧಾನಿ ನರೇಂದ್ರಮೋದಿ ಅವರನ್ನು ಹಾಡಿ ಹೊಗಳುವ ಮೂಲಕ ಚಮಚಾಗಿರಿ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿಗಳಾದ ನೆಹರೂ, ಇಂದಿರಾಗಾಂಧಿ ಅವರು ಮಾಡಿರುವ ಸಾಧನೆಗಿಂತ ಪ್ರಧಾನಿ ಮೋದಿ ಸಾಧನೆ ಮಾಡಿದ್ದಾರಾ? ನೆಹರೂ, ಇಂದಿರಾ ಗಾಂಧಿ ದೇಶದ ಬಡತನ ನಿರ್ಮೂಲನೆ ಮಾಡಿ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದಿದ್ದಾರೆ. ಆದರೆ ಕಳೆದ 10 ವರ್ಷದಲ್ಲಿ ಮೋದಿ ಅವರು ಮಾಡಿರುವ ಸಾಧನೆಯಾದರೂ ಏನು? ಬಡವರ ಪರ ಯಾವುದಾದರೂ ಯೋಜನೆ ಅನುಷ್ಠಾನಗೊಳಿಸಿದ್ದಾರಾ ಎಂದು ಪ್ರಶ್ನಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಧಾನಿ ಮೋದಿಯನ್ನು ಕೊಂಡಾಡುತ್ತಿರುವುದು ವಿಪರ್ಯಾಸ. ದೇವೇಗೌಡರಂತಹ ಹಿರಿಯ ನಾಯಕರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಜಾತ್ಯಾತೀತ ಪದಕ್ಕೂ ದೇವೇಗೌಡರು ತಿಲಾಂಜಲಿ ನೀಡಿದ್ದಾರೆ. ಮೋದಿಯಂತಹ ನಾಯಕನನ್ನು ಕಂಡಿರಲಿಲ್ಲ ಎಂದು ಚಮಚಾಗಿರಿ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು.

ಅಧಿಕಾರ ದಾಹ ಇರುವವರು ಪಕ್ಷ ತೊರೆಯುತ್ತಾರೆ: ಕಾಂಗ್ರೆಸ್‌ಗೆ ನಷ್ಟವಿಲ್ಲ: ಹಿರಿಯ ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ



ಮೈಸೂರು,ಫೆ.19(ಎಂಟಿವೈ)– ಅಧಿಕಾರ ದಾಹ ಇರುವವರು ಪಕ್ಷ ತೊರೆಯುತ್ತಾರೆ. ಇದರಿಂದ ಪಕ್ಷಕ್ಕೆ ನಷ್ಟ ಏನಿಲ್ಲ. ಬದ್ಧತೆ, ತತ್ವ ಸಿದ್ಧಾಂತಗಳ ಮೇಲೆ ಕಾಂಗ್ರೆಸ್ ನಂಬಿಕೆ ಇಟ್ಟಿದೆ. ಬದ್ಧತೆ ಇಲ್ಲದವರು ಮಾತ್ರ ಪಕ್ಷ ತೊರೆಯುತ್ತಾರೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಕೆಲ ಕಾಂಗ್ರೆಸ್ ಹಿರಿಯ ನಾಯಕರು ಬಿಜೆಪಿ ಸೇರುತ್ತಿರುವ ವಿಚಾರವಾಗಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜಕೀಯ ನಿಂತ ನೀರಲ್ಲ, ಹರಿಯುವ ನೀರು. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಕಾಂಗ್ರೆಸ್ ತನ್ನದೇ ಆದ ಬದ್ಧತೆ ಹೊಂದಿರುವ ಪಕ್ಷ. ಬಡವರ ಪರ, ಶೋಷಿತ ಸಮುದಾಯಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮ ಜಾರಿಗೊಳಿಸಿದೆ. ಇಂತಹ ಪಕ್ಷದಲ್ಲಿ ಜನಸೇವೆ ಮಾಡುವ ಅವಕಾಶ ಒದಗಿದೆ. ಆದರೆ, ಕೆಲವರು ಪಕ್ಷದ ಮೇಲೆ ಬದ್ಧತೆ ಇಲ್ಲದವರು ಪಕ್ಷ ತೊರೆಯುತ್ತಿದ್ದಾರೆ. ಇದರಿಂದ ಕಾಂಗ್ರೆಸ್‌ಗೆ ಯಾವುದೇ ನಷ್ಟವಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕೆಂಬ ಕನಸು ಕಾಣುತ್ತಿರುವ ಬಿಜೆಪಿಗೆ ಈ ಬಾರಿ ವ್ಯತಿರಿಕ್ತ ಫಲಿತಾಂಶ ಹೊರ ಬೀಳಲಿದೆ. ಜನತೆ ಸ್ವಚ್ಛ, ಪಾರದರ್ಶಕ ಆಡಳಿತ ಬಯಸಿದ್ದಾರೆ. ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ ನಿಗದಿತ ಪ್ರಮಾಣದ ಮತಗಳಿಲ್ಲ. ಗೆಲ್ಲುವ ಸಾಮರ್ಥ್ಯ ಇಲ್ಲದಿದ್ದರೂ 5ನೇ ಅಭ್ಯರ್ಥಿ ಕಣಕ್ಕಿಳಿಸಿದ್ದಾರೆ. ಕುದುರೆ ವ್ಯಾಪಾರದ ನಿರೀಕ್ಷೆಯಲ್ಲಿದ್ದಾರೆ. ಕಾಂಗ್ರೆಸ್‌ಗೆ ತನ್ನ 135 ಮತ್ತು ಮೂವರು ಪಕ್ಷೇತರರು ಸೇರಿದಂತೆ 138 ಶಾಸಕರ ಬೆಂಬಲವಿದೆ. ಮೂವರು ಅಭ್ಯರ್ಥಿಗಳು ಸುಲಭವಾಗಿ ಗೆಲುವು ಸಾಧಿಸುತ್ತಾರೆ. ಜೆಡಿಎಸ್-ಬಿಜೆಪಿ ರಾಜಕೀಯ ತಂತ್ರಗಾರಿಕೆ ಫಲಿಸುವುದಿಲ್ಲ ಎಂದರು.

ಪಕ್ಷಾಂತರ ನಿಷೇಧ ಕಾಯ್ದೆಯನ್ನು ಮತ್ತಷ್ಟು ಬಿಗಿಗೊಳಿಸಬೇಕು. ಒಬ್ಬ ಶಾಸಕ ಒಮ್ಮೆ ಪಕ್ಷಾಂತರ ಮಾಡಿದರೆ ಮುಂದಿನ 6 ವರ್ಷ ಕಾಲ ಚುನಾವಣೆಗೆ ನಿಲ್ಲದಂತೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಫೆ.27ರಿಂದ ಸುದರ್ಶನ ಕ್ರಿಯೆ

ಮೈಸೂರು, ಫೆ 19– ಮೈಸೂರಿನ ಲಲಿತಾದ್ರಿಪುರದಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಫೆ 27 ರಿಂದ ಮಾ. 2 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825 ಸಂಪರ್ಕಿಸಬಹುದು.

ರೈತರ ಪ್ರತಿಭಟನೆ ಶಮನಕ್ಕೆ ಕೇಂದ್ರ ಸಂಧಾನ; ಪ್ರತಿಭಟನೆಗೆ ತಾತ್ಕಾಲಿಕ ತಡೆ

ಸರ್ಕಾರದ ಪ್ರಸ್ತಾವ ಕುರಿತು 2 ದಿನ ಚರ್ಚೆ

ನವದೆಹಲಿ: ರಾಜಧಾನಿ ದೆಹಲಿಯಲ್ಲಿ ರೈತಪರ ಸಂಘಟನೆಗಳು ನಡೆಸುತ್ತಿರುವ ಪ್ರತಿಭಟನೆ ಮುಂದುವರೆದಿರುವಂತೆಯೇ ಇತ್ತ ಕೇಂದ್ರ ಸರ್ಕಾರ ಕೂಡ ಸಂಧಾನ ಪ್ರಯತ್ನ ಮುಂದುವರೆದಿದೆ.

ನಿನ್ನೆ ತಡರಾತ್ರಿ ರಾಷ್ಟ್ರ ರಾಜಧಾನಿಯ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು ಹಾಗೂ ಕೇಂದ್ರ ಸರ್ಕಾರ ನಡೆಸಿದ ನಾಲ್ಕನೇ ಸುತ್ತಿನ ಮಾತುಕತೆಯು ಆರಂಭಿಕವಾಗಿ ಯಶಸ್ಸು ಕಂಡಿದೆ ಎನ್ನಲಾಗಿದೆ. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಅರ್ಜುನ್ ಮುಂಡಾ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಚಂಡೀಗಢದ ಸೆಕ್ಟರ್ 26ರಲ್ಲಿ ಇರುವ ಮಹಾತ್ಮ ಗಾಂಧಿ ರಾಜ್ಯ ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ ರೈತ ನಾಯಕರೊಂದಿಗೆ ಮಾತುಕತೆ ನಡೆಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರೂ ಈ ಸಭೆಯಲ್ಲಿ ಇದ್ದರು. ರಾತ್ರಿ 8.15ಕ್ಕೆ ಆರಂಭವಾದ ಸಭೆ ತಡರಾತ್ರಿ 1 ಗಂಟೆವರೆಗೂ ನಡೆಯಿತು.

ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ಕುರಿತು ಕೇಂದ್ರ ಸರ್ಕಾರ ಹೊಸ ಯೋಜನೆ ರೂಪಿಸಿದ್ದು, ಇದರ ಕುರಿತು ಅಧ್ಯಯನ ನಡೆಸಲು ರೈತ ಸಂಘಟನೆಗಳು ತೀರ್ಮಾನಿಸಿವೆ. ಹಾಗಾಗಿ, ದೆಹಲಿ ಗಡಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಎರಡು ದಿನಗಳವರೆಗೆ ತಾತ್ಕಾಲಿಕ ವಿರಾಮ ನೀಡಲಾಗಿದೆ.



ದೆಹಲಿ ಗಡಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಎರಡು ದಿನಗಳವರೆಗೆ ತಾತ್ಕಾಲಿಕ ವಿರಾಮ ನೀಡಲಾಗಿದೆ. ಕೇಂದ್ರ ಸರ್ಕಾರವು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕುರಿತು ರೂಪಿಸುತ್ತಿರುವ ಹೊಸ ಯೋಜನೆಯ ಬಗ್ಗೆ ಅಧ್ಯಯನ ನಡೆಸಲು ರೈತ ಸಂಘಟನೆಗಳು ತೀರ್ಮಾನಿಸಿವೆ.

ಕೇಂದ್ರ ಸರ್ಕಾರದ ಆಫರ್ ಏನು?

ದ್ವಿದಳ ಧಾನ್ಯಗಳು, ಜೋಳ, ಹತ್ತಿ ಸೇರಿ ಹಲವು ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸುವ ಕುರಿತು ಹೊಸ ಸಮಿತಿ ರಚಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಹಾಗೆಯೇ, ರೈತರಿಂದ ಕೃಷಿ ಉತ್ಪನ್ನಗಳ ಖರೀದಿಗೆ ಯಾವುದೇ ಮಿತಿ ಇರುವುದಿಲ್ಲ ಹಾಗೂ ಖರೀದಿಗಾಗಿ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗುತ್ತದೆ ಎಂಬುದು ಸೇರಿ ಕೇಂದ್ರ ಸರ್ಕಾರವು ರೈತರಿಗೆ ಹಲವು ಆಫರ್ ನೀಡಿದೆ. ಮುಂದಿನ ಐದು ವರ್ಷಗಳಿಗೆ ಕನಿಷ್ಠ ಬೆಂಬಲ ಬೆಲೆಯ ಖಾತ್ರಿಯೂ ಕೇಂದ್ರದ ಆಫರ್‌ಗಳಲ್ಲಿ ಸೇರಿದೆ. ಲೋಕಸಭೆ ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವಾಗಲೇ ರೈತರು ಪ್ರತಿಭಟನೆ ನಡೆಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರವು, ಬೇಡಿಕೆಗಳನ್ನು ಈಡೇರಿಸುವ ಮೂಲಕ ಅನ್ನದಾತರ ಪ್ರತಿಭಟನೆ ಶಮನಗೊಳಿಸಲು ತೀರ್ಮಾನಿಸಿದೆ ಎನ್ನಲಾಗಿದೆ.

ಕೇಂದ್ರದ ಯೋಜನೆ ಕುರಿತು ಕೃಷಿ ತಜ್ಞರ ಜತೆ ಚರ್ಚಿಸುತ್ತೇವೆ. ಫೆಬ್ರವರಿ 19 ಹಾಗೂ 20ರಂದು ಇದರ ಕುರಿತು ಅಧ್ಯಯನ ನಡೆಸಿ, ಬಳಿಕ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ರೈತ ಮುಖಂಡ ಸರ್ವಾನ್ ಸಿಂಗ್ ಪಂಧೇರ್ ತಿಳಿಸಿದ್ದಾರೆ. ಹಾಗಾಗಿ, ಫೆಬ್ರವರಿ 19 ಹಾಗೂ 20ರಂದು ಪ್ರತಿಭಟನೆ ನಡೆಸುವುದಿಲ್ಲ. ಫೆಬ್ರವರಿ 21ರಂದು ಬೆಳಗ್ಗೆ ಪ್ರತಿಭಟನೆ ಆರಂಭಿಸುವ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಮಾಹಿತಿ ನೀಡಿದ್ದಾರೆ.

ಹೆಸರಿಗೆ ಸರ್ಕಾರಿ ಆಸ್ಪತ್ರೆ; ಇಲ್ಲಿ ದುಡ್ಡಿಲ್ಲದೆ ಚಿಕಿತ್ಸೆಯೇ ಇಲ್ಲ

● ಖಾಸಗಿ ಲ್ಯಾಬ್‌ಗೆ 'ಚೀಟಿ' ಬರೆಯೋದೇ ಇವರ ಕೆಲಸ ● ಬಡವರಿಗೆ ಉಚಿತ ಚಿಕಿತ್ಸೆ ಎಂಬ ಮುಖ್ಯಮಂತ್ರಿಗಳ ಭರವಸೆಗೆ ಇಲ್ಲಿ ಎಳ್ಳುನೀರು

ಮೋಹನ್ ಕಾಯಕ

ಮೈಸೂರು, ಫೆ.19– ಸರ್ಕಾರಿ ಆಸ್ಪತ್ರೆಯಲ್ಲಿ ಖಾಸಗಿ ಟ್ರೀಟ್‌ಮೆಂಟ್... ಬರಿದಾಯಿತು ಬಡವರ ಜೇಬು...!

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವ್ಯಾಪ್ತಿಯಡಿ ನೂತನವಾಗಿ ಕಾರ್ಯಾರಂಭಿಸಿರುವ ಟ್ರಾಮಾ ಕೇರ್ ಸೆಂಟರ್ ಅಕ್ಷರಶಃ ಖಾಸಗಿ ಲ್ಯಾಬ್‌ಗಳ ಸ್ವತ್ತಾಗಿಬಿಟ್ಟಿದೆ. ಬೆಡ್‌ನಲ್ಲಿರುವ ಒಳರೋಗಿಯ ಬ್ಲಡ್ ತೆಗೆದುಕೊಳ್ಳುವುದರಿಂದ ಹಿಡಿದು ರಿಪೋರ್ಟ್ ತಂದುಕೊಡುವ ದುಬಾರಿ ಹಣಕಾಸಿನ ವ್ಯವಸ್ಥೆ ಲೀಲಾಜಾಲವಾಗಿ ನಡೆಯುತ್ತಿದೆ.



ಟ್ರಾಮಾ ಕೇರ್ ಸೆಂಟರ್‌ನಲ್ಲಿ ಮೂಳೆ (ಅರ್ಥೋರ್ಪಿಡಿಕ್)ಗೆ ಸಂಬಂಧಿಸಿದ ಚಿಕಿತ್ಸೆ ನೀಡಲಾಗುತ್ತಿದ್ದು, ಒಳ ರೋಗಿಗಳ ಸಣ್ಣ–ಪುಟ್ಟ ರಕ್ತ ಪರೀಕ್ಷೆಗೂ ಸಾವಿರಾರು ರೂ. ವಸೂಲಿ ಮಾಡಲಾಗುತ್ತಿದೆ. ಸಮೀಪದಲ್ಲೇ ಜಯದೇವ ಹೃದ್ರೋಗ ಆಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಗಳಲ್ಲಿ ಲ್ಯಾಬ್ ಇದೆ. ಅಷ್ಟಲ್ಲದೆ ಕೆ.ಆರ್.ಆಸ್ಪತ್ರೆಯಲ್ಲೂ ಲ್ಯಾಬ್ ಇದ್ದು, ಎಲ್ಲಾ ರೀತಿಯ ರಕ್ತ ಪರೀಕ್ಷೆ ನಡೆಸಿ, ರಿಪೋರ್ಟ್‌ಗಳನ್ನು ನೀಡಲಾಗುತ್ತಿದೆ. ಇಷ್ಟೇಲ್ಲಾ ಅನುಕೂಲತೆಗಳಿದ್ದರೂ ಖಾಸಗಿ ಲ್ಯಾಬ್‌ಗಳಲ್ಲಿ ರಕ್ತ ಪರೀಕ್ಷೆ ಮಾಡಿಸುವಂತೆ ಬರೆದುಕೊಡುವ ವೈದ್ಯರ ಹಣದ ಹಪಾಹಪಿ ಬಡವರ ಜೇಬನ್ನು ಇನ್ನಷ್ಟು ಬರಿದಾಗುತ್ತಿದೆ.

ಹೊರ ರೋಗಿಗಳಿಗೆ ಖಾಸಗಿ ಲ್ಯಾಬ್‌ಗಳಲ್ಲಿ ರಕ್ತ ಪರೀಕ್ಷೆಗೆ ಬರೆಯುವುದು ಸಹಜವಾಗಿ ನಡೆಯುತ್ತಿದೆ. ಆದರೆ, ಉಚಿತ ಚಿಕಿತ್ಸೆಂಯೆಂದು ಆಸ್ಪತ್ರೆಗೆ ದಾಖಲಾಗಿರುವ ಒಳರೋಗಿಗಳಿಗೂ ಖಾಸಗಿ ಲ್ಯಾಬ್‌ಗಳಲ್ಲಿ ರಕ್ತ ಪರೀಕ್ಷೆಗೆ ಬರೆಯುತ್ತಿರುವುದು ವೈದ್ಯರ ದುಪ್ಪಟ್ಟು ಸಂಪಾದನೆಯ ಗುಟ್ಟಾಗಿದೆ. ಬಹುತೇಕ ಒಳರೋಗಿಗಳ ಕೇಸ್ ಫೈಲ್‌ಗಳಲ್ಲಿ ಖಾಸಗಿ ಲ್ಯಾಬ್‌ನ ಒಂದಲ್ಲ ಒಂದು ರಿಪೋರ್ಟ್ ಇದ್ದೇ ಇರುತ್ತದೆ.

ಬಿಪಿಎಲ್ ಕಾರ್ಡ್, ಆರೋಗ್ಯ ಕರ್ನಾಟಕ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಾತಿ ಪ್ರಮಾಣ ಇರುವ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಬೇಕು. ರಕ್ತ ಪರೀಕ್ಷೆ, ಔಷದೋಪಚಾರ, ಚಿಕಿತ್ಸೆ ಎಲ್ಲವೂ ಉಚಿತವಾಗಿರಲಿದೆ. ಆದರೆ, ಖಾಸಗಿ ಲ್ಯಾಬ್‌ಗಳಿಗೆ ರಕ್ತ ಪರೀಕ್ಷೆಗೆ ಬರೆಯುವುದೇಕೆ? ಬಡವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ನೀಡುವ ಉಚಿತ ವೈದ್ಯಕೀಯ ಸೇವೆ ಇದೇನಾ ಎನ್ನುವಂತಾಗಿದೆ.

ತರಾವರಿ ಹೆಸರು: ಖಾಸಗಿ ಲ್ಯಾಬ್‌ಗೆ ಬರೆದುಕೊಡುವ ವೈದ್ಯರು ತಮ್ಮದಲ್ಲದ ಹೆಸರಿನಲ್ಲಿ ಶಿಪಾರಸ್ಸು ಮಾಡುತ್ತಿದ್ದಾರೆ. ಯಾರಿಗೂ ಅನುಮಾನವೇ ಬಾರದಂತೆ ರಿಪೋರ್ಟ್‌ನಲ್ಲಿ ಯಾರದ್ದೋ ಶಿಫಾರಸ್ಸಿನ ಹೆಸರಿರುತ್ತೆ. ಕೆಲವೊಂದು ರಿಪೋರ್ಟ್‌ಗಳಲ್ಲಿ ಲ್ಯಾಬ್ ಹೆಸರೇ ಶಿಪಾರಸ್ಸು ಮಾಡಿದ ವೈದ್ಯರ ಹೆಸರೂ ಕೂಡ ಆಗಿದೆ. ಬ್ಲಡ್ ಗ್ರೂಪ್, ರಕ್ತಸ್ರಾವ ಸಮಯ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಸಮಯ, ಹೆಚ್‌ಐವಿ ಮತ್ತು ಹೆಪಟೈಟಿಸ್–ಬಿ ನಂತಹ ರಕ್ತ ಪರೀಕ್ಷೆಗೂ ಸಾವಿರಕ್ಕೂ ಹೆಚ್ಚು ಹಣವನ್ನು ವಸೂಲಿ ಮಾಡಲಾಗುತ್ತಿದೆ. ಉಚಿತ ಚಿಕಿತ್ಸೆಯನ್ನು ಖಚಿತವಾಗಿ ನೀಡಬೇಕಿದ್ದರೂ ಲಕ್ಷ ಲಕ್ಷ ಸಂಬಳ ಪಡೆಯುವ ವೈದ್ಯರ ಹಣದ ದಾಹಕ್ಕೆ ಬಡಜನರು ತಮ್ಮ ಇರುವ ಮೂರ್‌ಕಾಸನ್ನು ಕಳೆದುಕೊಳ್ಳುವ ಸ್ಥಿತಿ ಉಂಟಾಗಿದೆ.

ಎಲ್ಲಾ ಡಾಕ್ಟರ್‌ಗಳು ಬರೆಯುತ್ತಾರೆ!: ಟ್ರಾಮಾ ಕೇರ್ ಒಂದೇ ಅಲ್ಲ ಸರ್... ಕೆ.ಆರ್.ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ, ಪಿಕೆಟಿಬಿ ಸೇರಿದಂತೆ ಎಲ್ಲಾ ಆಸ್ಪತ್ರೆಗಳಿಂದಲೂ ರಕ್ತ ಪರೀಕ್ಷೆಗೆ ನಮ್ಮ ಲ್ಯಾಬ್‌ಗೆ ಬರೆಯುತ್ತಾರೆ. ಒಳರೋಗಿಗಳಿಗೆ ಖುದ್ದು ರಿಪೋರ್ಟ್ ತಂದುಕೊಡುತ್ತೇವೆ ಎಂದು ಕೈಯಲ್ಲಿ ಬಂಡಲ್‌ಗಟ್ಟಲೇ ರಿಪೋರ್ಟ್‌ಗಳನ್ನು ಹಿಡಿದಿದ್ದ ಖಾಸಗಿ ಲ್ಯಾಬ್ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಮೂರು ಬಾರೀ ಎಂಟ್ರಿ: ದೇವರಾಜ ಮೊಹಲ್ಲಾದಲ್ಲಿರುವ ಖಾಸಗಿ ಡಯಾಗೋಸ್ಟಿಕ್ ಸೆಂಟರ್‌ವೊಂದರ ಸಿಬ್ಬಂದಿ, ಟ್ರಾಮಾ ಕೇರ್ ಸೆಂಟರ್‌ಗೆ ದಿನವೊಂದಕ್ಕೆ ಮೂರು ಬಾರೀ ಭೇಟಿ ನೀಡಲಿದ್ದು, ಒಳರೋಗಿಗಳ ವಾರ್ಡ್‌ಗಳಿಗೆ ತೆರಳಿ ಅಲ್ಲಿಯೇ ರಕ್ತ ಪರಿಶೀಲನೆಗೆ ಸ್ಯಾಂಪಲ್ ಪಡೆದು, ನಂತರ ಖುದ್ದು ರಿಪೋರ್ಟ್ ತಂದುಕೊಡುತ್ತಿದ್ದಾರೆ. ಒಂದೆರಡು ಖಾಸಗಿ ಲ್ಯಾಬ್‌ಗಳ ಸಿಬ್ಬಂದಿ, ಯಾವುದೇ ಅಂಜಿಕೆ ಇಲ್ಲದೆ ದಿನವಿಡೀ ಆಸ್ಪತ್ರೆಯಲ್ಲಿ ರಿಪೋರ್ಟ್‌ಗಳನ್ನು ಹಿಡಿದು ತಿರುಗಾಡಿದರೆ, ಖಾಸಗಿ ನರ್ಸ್‌ಗಳು ರೋಗಿಗಳಿರುವ ಸ್ಥಳಕ್ಕೆ ಬಂದು ರಕ್ತ ಪಡೆಯುವ ಜೊತೆಗೆ ಹಣವನ್ನೂ ವಸೂಲಿ ಮಾಡುತ್ತಿದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಟ್ರಾಮಾ ಕೇರ್ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಡಾಕ್ಟರ್ ಹೇಳಿದ್ದಾರಲ್ವಾ..!: ನಮ್ಮ ತಾಯಿ ಇಲ್ಲಿಯೇ ಮೂರ್‍ನಾಲ್ಕು ದಿನದಿಂದ ಕೈ ಮುರಿದುಕೊಂಡು ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಡಾಕ್ಟರ್‌ಗಳೇ ಹೊರಗಡೆ ರಕ್ತ ಪರೀಕ್ಷೆಗೆ ಬರೆದುಕೊಟ್ಟರೆ ಮತ್ತೇನೂ ಮಾಡೋದು. ಡಾಕ್ಟರ್ ಮಾತು ಕೇಳಲೇ ಬೇಕಲ್ವಾ... ಎರಡ್ಮೂರು ಬಾರೀ ಬರೆದಿದ್ದಾರೆ. ಒಂದು ಸಲಕ್ಕೆ 1600 ರೂ. ಕಟ್ಟಿದ್ದೇವೆ ಎಂದು ಮಹಿಳಾ ರೋಗಿಯೊಬ್ಬರ ಪುತ್ರ ತಮ್ಮ ಅಸಾಹಾಯಕತೆಯನ್ನು ಬಿಚ್ಚಿಟ್ಟರು.

ಬೇಲಿಯೇ ಎದ್ದು ಹೊಲ ಮೇಯ್ದಂತೆ....


ಬೇಲಿಯೇ ಎದ್ದು ಹೊಲ ಮೇಯ್ದಂತೆ ಎಂಬ ಗಾದೆಯಂತೆ ಟ್ರಾಮಾ ಕೇರ್ ಸೆಂಟರ್‌ನಲ್ಲಿ ರಕ್ಷಕರೇ ಭಕ್ಷಕರಾಗಿದ್ದಾರೆ. ಸರ್ಕಾರ ನೀಡುವ ಉಚಿತ ಸೇವೆಯನ್ನು ಮರೆಮಾಚಿ ದುಬಾರಿ ಖಾಸಗಿ ಸೇವೆ ನೀಡುವ ಮೂಲಕ ಸರ್ಕಾರಿ ಆಸ್ಪತ್ರೆಗಳನ್ನು ಖಾಸಗಿ ಆಸ್ಪತ್ರೆಗಳನ್ನಾಗಿ ಮಾಡಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಆತ್ಯಾಧುನಿಕ ಎಕ್ಸರೆ, ಸ್ವಲ್ಪ ದಿನದಲ್ಲೇ ಸಿಟಿ ಸ್ಕ್ಯಾನ್ ಸೇವೆಯೂ ಆರಂಭವಾಗಲಿದೆ. ಉತ್ತಮ ಚಿಕಿತ್ಸೆಗೆ ಅವಕಾಶವಿದ್ದರೂ ವೈದ್ಯರು ಖಾಸಗಿ ಲ್ಯಾಬ್‌ಗಳ ಮೊರೆ ಹೋಗುತ್ತಿರುವುದರಲ್ಲಿ ಹಣ ದಾಹವಲ್ಲದೆ ಮತ್ತೇನಿದೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಅನುಮಾನ ವ್ಯಕ್ತಪಡಿಸಿದ್ದಾರೆ.

ಮುಗಿಯದ ಸ್ಕ್ಯಾನ್ ಅಳವಡಿಸುವ ಕಾಮಗಾರಿ...



ಟ್ರಾಮಾ ಕೇರ್ ಸೆಂಟರ್‌ನಲ್ಲಿ ಸಿಟಿ ಸ್ಕ್ಯಾನ್ ಅಳವಡಿಸುವ ಕಾಮಗಾರಿ ಆರಂಭಗೊಂಡು ಮೂರ್‍ನಾಲ್ಕು ತಿಂಗಳುಗಳೇ ಕಳೆದಿದ್ದರೂ ಇನ್ನೂ ಪೂರ್ಣವಾಗಿಲ್ಲ. ಸ್ಕ್ಯಾನಿಂಗ್ ಯಂತ್ರಗಳು ಬಂದು ತಿಂಗಳುಗಳೇ ಕಳೆದರೂ ಅವುಗಳ ಬಳಕೆ ಇನ್ನೂ ಆರಂಭವಾಗಿಲ್ಲ. ಸ್ಕ್ಯಾನ್ ಕೊಠಡಿಯ ಮರುವಿನ್ಯಾಸ ಕಾಮಗಾರಿ ನಡೆಯುತ್ತಲೇ ಇದೆ ಹೊರತು ಮತ್ಯಾವ ಕಾಲಕ್ಕೆ ಪೂರ್ಣಗೊಳುವುದೋ ಕಾಣೇ...

ಬಿಸಿಎಂ ಹಾಸ್ಟೆಲ್‌ಗಳಿಗೆ ಅಕ್ಕಿ ಪೂರೈಸದ ಸರ್ಕಾರ; ವಿದ್ಯಾರ್ಥಿಗಳ ನೆರವಿಗೆ ನಿಂತ ಸಿದ್ಧಗಂಗಾ ಮಠ!



ತುಮಕೂರು: ಜಿಲ್ಲೆಯ ಬಿಸಿಎಂ ಹಾಸ್ಟೆಲ್‌ಗಳಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಅಕ್ಕಿ ಪೂರೈಸದ ಕಾರಣ ಸಂಕಷ್ಟಕ್ಕೆ ಸಿಲುಕಿದ್ದ ವಿದ್ಯಾರ್ಥಿಗಳಿಗೆ ಸಿದ್ದಗಂಗಾ ಮಠ ನೆರವು ನೀಡಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಅಕ್ಕಿ ಹಂಚಿಕೆ ತಡವಾಗುತ್ತಿರುವ ಹಿನ್ನೆಲೆ ಹಾಸ್ಟೆಲ್ ವಿದ್ಯಾರ್ಥಿಗಳ ಊಟಕ್ಕೆ ಸಮಸ್ಯೆಯಾಗುತ್ತಿತ್ತು. ಈ ಹಿನ್ನೆಲೆ ಸಿದ್ಧಗಂಗಾ ಮಠ ಹಾಸ್ಟೆಲ್‌ಗಳಿಗೆ ಅಕ್ಕಿಯನ್ನು ನೀಡಿದೆ.

ಸಿರಾ ಮತ್ತು ತುಮಕೂರಿನ ಒಬಿಸಿ ಹಾಸ್ಟೆಲ್‌ಗಳು ಅಕ್ಕಿ ಕೊರತೆಯನ್ನು ಎದುರಿಸುತ್ತಿವೆ. ಆದರೆ, ತುಮಕೂರಿನ ಅಧಿಕಾರಿಗಳು ಡಿಸೆಂಬರ್‌ನಲ್ಲಿ ಸಿದ್ಧಗಂಗಾ ಮಠದಿಂದ 180 ಕ್ವಿಂಟಾಲ್ ಅಕ್ಕಿಯನ್ನು ಸಾಲವಾಗಿ ಪಡೆದಿದ್ದಾರೆ. ಇದರಿಂದ 18 ಹಾಸ್ಟೆಲ್‌ನ ಸುಮಾರು 2000 ವಿದ್ಯಾರ್ಥಿಗಳಿಗೆ ಆಹಾರ ಒದಗಿಸಲಾಗಿದೆ. ಇನ್ನು, ಕೆಲ ತಾಲೂಕುಗಳಲ್ಲಿ ಅಧಿಕಾರಿಗಳು ಬೇರೆ ಹಾಸ್ಟೆಲ್‌ಗಳಿಂದ ಅಕ್ಕಿಯನ್ನು ಸಾಲವಾಗಿ ಪಡೆದಿದ್ದರೆ, ಮತ್ತೊಂದಿಷ್ಟು ಕಡೆ ಮುಕ್ತ ಮಾರುಕಟ್ಟೆಯಲ್ಲಿ ದುಬಾರಿ ಬೆಲೆಗೆ ಅಕ್ಕಿಯನ್ನು ಖರೀದಿಸಿ ವಿದ್ಯಾರ್ಥಿಗಳಿಗೆ ಊಟ ಒದಗಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಸರ್ಕಾರವು ಪ್ರತಿ ತ್ರೈಮಾಸಿಕಕ್ಕೊಮ್ಮೆ ಜಿಲ್ಲೆಗೆ ಅಕ್ಕಿಯನ್ನು ಮಂಜೂರು ಮಾಡುತ್ತದೆ. ಜಿಲ್ಲೆಯ ಅಧಿಕಾರಿಗಳು ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಪ್ರತಿ ಕೆಜಿಗೆ 6 ರೂಪಾಯಿಯಂತೆ ಸಬ್ಸಿಡಿಯಲ್ಲಿ ಅಕ್ಕಿ ಖರೀದಿಸುತ್ತಾರೆ. ಈ ನಿಯಮದಂತೆ ತುಮಕೂರು ಜಿಲ್ಲೆಯು 2023ರ ಅಕ್ಟೋಬರ್‌ನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಅಕ್ಕಿಯನ್ನು ಪಡೆಯಬೇಕಾಗಿತ್ತು. ಆದರೆ, ಆ ಅಕ್ಕಿ ನಮಗೆ 2024ರ ಜನವರಿಯಲ್ಲಿ ಸಿಕ್ಕಿದೆ. ತುಮಕೂರು ತಾಲೂಕಿಗೆ ಸಿದ್ಧಗಂಗಾ ಮಠದಿಂದ ಅಕ್ಕಿ ಬಂದಿದ್ದರಿಂದ, ಗೋದಾಮುಗಳಲ್ಲಿ ದಾಸ್ತಾನು ಮಾಡಲು ಜಾಗವಿಲ್ಲದ್ದರಿಂದ ಎಫ್‌ಸಿಐನಿಂದ ಹೆಚ್ಚಿನ ಅಕ್ಕಿಯನ್ನು ಖರೀದಿಸಲಿಲ್ಲ. ನಮಗೆ ಮಂಜೂರು ಮಾಡಿರುವ ಅಕ್ಕಿ ಸುರಕ್ಷಿತವಾಗಿ ಎಫ್‌ಸಿಐ ಗೋದಾಮುಗಳಲ್ಲಿಯೇ ಇದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿ ಗಂಗಪ್ಪ ಹೇಳಿದ್ದಾರೆ.

ಸಿದ್ಧಗಂಗಾ ಮಠ ಸಮೀಪವೇ ಇರುವುದರಿಂದ ಮಠದಿಂದ ಅಕ್ಕಿಯನ್ನು ಪಡೆಯುವುದು ಸಹಜವಾಗಿದೆ. ನಮಗೆ ಮಂಜೂರಾಗಿರುವ ಅಕ್ಕಿಯನ್ನು ಎಫ್‌ಸಿಐನಿಂದ ತೆಗೆದುಕೊಳ್ಳದೆ ಹೋದರೇ ಅದು ವಾಪಸ್ ಹೋಗುತ್ತದೆ ಎಂದು ತಿಳಿಸಿದ್ದಾರೆ. ಸಿದ್ಧಗಂಗಾ ಮಠದ ಆಡಳಿತಾಧಿಕಾರಿ ವಿಶ್ವನಾಥಯ್ಯ ಹಾಸ್ಟೆಲ್‌ಗಳಿಗೆ ಅಕ್ಕಿಯನ್ನು ನೀಡಿರುವುದನ್ನು ಖಚಿತಪಡಿಸಿದ್ದಾರೆ.

ಜನಸಂಖ್ಯೆ ತಿದ್ದುಪಡಿ ವಿಧೇಯಕ ಮಂಡನೆ; ಕೊಡಗು ಜಿ.ಪಂಗೆ ಮತ್ತೆ 29 ಸ್ಥಾನ?



ಮಡಿಕೇರಿ: ಕೊಡಗು ಜಿಲ್ಲಾ ಪಂಚಾಯಿತಿ ಕ್ಷೇತ್ರ ವಿಂಗಡಣೆಗೆ ಸಂಬಂಧಿಸಿದಂತೆ ಕ್ಷೇತ್ರದ ಜನಸಂಖ್ಯೆಯನ್ನು 18,000ಕ್ಕೆ ಕಡಿತಗೊಳಿಸುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸದನದಲ್ಲಿ ಮಂಡಿಸಿದ್ದಾರೆ. ಆ ಮೂಲಕ ಸದ್ಯದಲ್ಲಿಯೇ ಸದಸ್ಯರ ಸಂಖ್ಯೆ ವರ್ಗವಾರು ಮೀಸಲು ಸಂಖ್ಯೆ ಹಾಗೂ ಕ್ಷೇತ್ರಗಳ ಗಡಿ ನಿಗದಿಪಡಿಸಿ ಅಧಿಸೂಚನೆ ಹೊರಬೀಳುವ ಸಾಧ್ಯತೆಯಿದೆ.

ಕೊಡಗಿಗೆ ಮತ್ತೆ 29 ಸ್ಥಾನ: ಈ ಹಿಂದೆ ಒಟ್ಟು 29 ಕ್ಷೇತ್ರಗಳಿದ್ದ ಕೊಡಗಿನಲ್ಲಿ 2023ರ ಜನವರಿಯಲ್ಲಿ ಪ್ರಕಟಗೊಂಡ ಜಿಲ್ಲಾ ಪಂಚಾಯತ್ ಕ್ಷೇತ್ರಗಳ ಪುನರ್ವಿಂಗಡಣೆಯಲ್ಲಿ 25 ಕ್ಷೇತ್ರಕ್ಕೆ ಇಳಿಸಲಾಗಿದೆ. ಪ್ರಕಟಗೊಂಡಿರುವ ಕ್ಷೇತ್ರಗಳ ಪುನರ್ವಿಂಗಡಣೆ ಕರಡು ಪಟ್ಟಿಯಲ್ಲಿಯೂ ಕೆಲವೊಂದು ಗೊಂದಲಗಳಿದ್ದ ಕಾರಣಕ್ಕೆ ಅದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಬಳಿಕ ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾದ ಕರಡು ಪಟ್ಟಿಯಲ್ಲಿಯೂ ಹಲವು ಗೊಂದಲಗಳಿತ್ತಲ್ಲದೇ ಮತ್ತೆ 25 ಕ್ಷೇತ್ರಗಳನ್ನಷ್ಟೇ ನೀಡಲಾಗಿತ್ತು. ಇದೀಗ 18 ಸಾವಿರ ಜನಸಂಖೆಗೆ ಒಂದು ಜಿ.ಪಂ. ಕ್ಷೇತ್ರವೆಂದು ತಿದ್ದುಪಡಿ ತಂದಿರುವುದರಿಂದ ಮತ್ತೆ ಜಿಲ್ಲೆಗೆ 29 ಕ್ಷೇತ್ರಗಳು ಲಭಿಸಲಿವೆ.

ಬೆಳಗಾವಿಯ ಚಳಿಗಾಲದ ಅವೇಶನದಲ್ಲಿ ಕೊಡಗಿನ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಡಾ.ಮಂತರ್‌ಗೌಡ ಈ ವಿಚಾರವನ್ನು ಪ್ರಸ್ತಾಪಿಸಿದ್ದರು. ಕೊಡಗು ಜಿಲ್ಲೆಯಲ್ಲಿ ಈ ಹಿಂದೆ 29 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿದ್ದವು. ಇದೀಗ 25ಕ್ಕೆ ಇಳಿಸಲಾಗಿದ್ದು, ಕೊಡಗು ಜಿಲ್ಲೆಯನ್ನು ವಿಶೇಷವಾಗಿ ಪರಿಗಣಿಸಿ 29 ಜಿಲ್ಲಾ ಪಂಚಾಯತ್ ಕ್ಷೇತ್ರಗಳನ್ನು ಮರಳಿ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿದ್ದರು. ಕೊಡಗಿನ ಶಾಸಕದ್ವಯರ ಪ್ರಸ್ತಾಪಕ್ಕೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಪೂರಕವಾಗಿ ಸ್ಪಂದಿಸಿದ್ದರು. ಇದೀಗ ಜಿಲ್ಲೆಯ ಶಾಸಕದ್ವಯರ ಪ್ರಯತ್ನ ಫಲವಾಗಿ, ಕೊಡಗು ಜಿಲ್ಲೆಯನ್ನು ರಾಜ್ಯ ಸರಕಾರ ವಿಶೇಷವಾಗಿ ಪರಿಗಣಿಸಿದೆ. ಜಿ.ಪಂ ಕ್ಷೇತ್ರವನ್ನು 18 ಸಾವಿರ ಜನಸಂಖ್ಯೆಗೆ ಕಡಿತಗೊಳಿಸಿ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಗಿದೆ.

18 ಸಾವಿರದಿಂದ 23 ಸಾವಿರಕ್ಕೆ ಏರಿಸಲಾಗಿತ್ತು: ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ 1993ರ ಅನಿಯಮ 160, 161 ಮತ್ತು 162ರಲ್ಲಿ ಕೊಡಗು ಜಿಲ್ಲೆಗೆ 18 ಸಾವಿರ ಜನಸಂಖ್ಯೆ ಒಂದು ಜಿಲ್ಲಾ ಪಂಚಾಯತ್ ಕ್ಷೇತ್ರ ಎಂದು ನಿಗದಿ ಮಾಡ ಲಾಗಿತ್ತು. ಆದರೆ, ಕಳೆದ ಬಾರಿ 18 ಸಾವಿರದಿಂದ 23 ಸಾವಿರಕ್ಕೆ ಏರಿಸಲಾಗಿತ್ತು. ಇದರಿಂದ 29 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ಕೊಡಗಿನಲ್ಲಿ 25ಕ್ಕೆ ಇಳಿಕೆಯಾಗಿತ್ತು. ಸದ್ಯ ತಿದ್ದುಪಡಿ ಮಸೂದೆ ಮಂಡನೆಯಾಗಿರುವುದರಿಂದ ಮತ್ತೆ ಜಿಲ್ಲೆಗೆ 29 ಸ್ಥಾನಗಳು ಲಭಿಸಿದಂತಾಗಲಿದೆ.

ಕರ್ನಾಟಕ ಏಕೀಕರಣ-ಕನ್ನಡದ ಅಸ್ಮಿತೆ ಕುರಿತ ವಿಚಾರ ಸಂಕಿರಣ, ಚಾರಿತ್ರಿಕ ದಾಖಲೆಗಳ ಪ್ರದರ್ಶನದ ಸಮಾರೋಪ

ಇತಿಹಾಸದ ಸಂಗತಿ ಕಲೆ ಹಾಕಲು ಪತ್ರಾಗಾರ ಇಲಾಖೆ ಸಂಪನ್ಮೂಲ ಸಹಕಾರಿ

ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಡಾ.ಎನ್.ಎಸ್.ರಂಗರಾಜು



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ಕರ್ನಾಟಕ ಏಕೀಕರಣ ಕುರಿತ ವಿಚಾರ ಸಂಕಿರಣ, ಚಾರಿತ್ರಿಕ ದಾಖಲೆಗಳ ಹಾಗೂ ಛಾಯಾಚಿತ್ರ ಪ್ರದರ್ಶನದ ಸಮಾರೋಪ ಸಮಾರಂಭ ನಡೆಯಿತು.

ಮೈಸೂರು,ಫೆ19(ಪಿಎಂ)– ಇತಿಹಾಸದಲ್ಲಿ ಹುದುಗಿ ಹೋಗಿರುವ ಸತ್ಯ ಸಂಗತಿ ಕಲೆ ಹಾಕಲು ಪತ್ರಾಗಾರ ಇಲಾಖೆಯ ಸಂಪನ್ಮೂಲಗಳು ಅತ್ಯಂತ ಸಹಕಾರಿ. ಹಾಗಾಗಿ ಸಂಶೋಧಕರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯರೂ ಆದ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಹೇಳಿದರು.

ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ವಿಭಾಗೀಯ ಪತ್ರಾಗಾರ ಕಚೇರಿ ಮೈಸೂರು ಮತ್ತು ಕಾಲೇಜಿನ ಜಂಟಿ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕರ್ನಾಟಕ ಏಕೀಕರಣ ಮತ್ತು ಕನ್ನಡದ ಅಸ್ಮಿತೆ ಕುರಿತ ವಿಚಾರ ಸಂಕಿರಣ, ಚಾರಿತ್ರಿಕ ದಾಖಲೆಗಳು ಮತ್ತು ಛಾಯಾಚಿತ್ರ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈಸೂರು ವಿವಿ ಗಾಂಧಿ ಭವನದಿಂದ 'ದಕ್ಷಿಣ ಭಾರತದಲ್ಲಿ ಗಾಂಧಿ' ಪುಸ್ತಕ ಪ್ರಕಟಿಸಲು ಯೋಜಿಸಿದ್ದರು. ಇದಕ್ಕಾಗಿ 'ಕರ್ನಾಟಕದಲ್ಲಿ ಗಾಂಧಿ' ಲೇಖನ ಬರೆದುಕೊಡಲು ನನಗೆ ಕೇಳಿದ್ದರು. ಅದರಂತೆ ಬರೆದು ಲೇಖನ ಸಾದರಪಡಿಸುವಾಗ ಮೈಸೂರು ಚಲೋ ಚಳವಳಿ ಸಂಬಂಧ ರಾಮಸ್ವಾಮಿ ಯಾರು? ಎಂಬ ಬಗ್ಗೆ ನಾನು ಹೇಳುತ್ತಿದ್ದೆ. ಸಭಿಕರ ಸಾಲಿನಲ್ಲಿ ಕುಳಿತಿದ್ದ ಪ್ರೊ.ಕೆ.ಸಿ.ಬಸವರಾಜು ಅವರು ಆಕ್ಷೇಪ ವ್ಯಕ್ತಪಡಿಸಿ ರಾಮಸ್ವಾಮಿ ಜೊತೆಯಲ್ಲಿ ಇನ್ನು ಇಬ್ಬರು ಸಾವನ್ನಪ್ಪಿದ್ದಾರೆ. ಅವರನ್ನು ಏಕೆ ಉಲ್ಲೇಖಿಸಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿ ಪ್ರಶ್ನಿಸಿದರು ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಪತ್ರಾಗಾರ ಇಲಾಖೆಗೆ ಹೋಗಿ ಒಂದು ವಾರ ಕಾಲ ಹುಡುಕಿದೆ. 1947ರ ಸಾಧ್ವಿ ಪತ್ರಿಕೆಯಲ್ಲಿ ಅವರ ಇಬ್ಬರ ಹೆಸರುಗಳ ಉಲ್ಲೇಖವಿರುವುದು ಪತ್ತೆಯಾಯಿತು. ರಂಗ ಮತ್ತು ತೋರನಾಯಕ ಆ ಇಬ್ಬರಾಗಿದ್ದು, ಮುಕ್ತ ವಿವಿಯಿಂದ 'ಮೈಸೂರು ದರ್ಶನ' ಪುಸ್ತಕಗಳನ್ನು ಪ್ರಕಟಿಸಿದ್ದು, ಇದರ 2ನೇ ಸಂಪುಟದಲ್ಲಿ ಸ್ವಾತಂತ್ರ್ಯ ಹೋರಾಟಗಾರರೊಬ್ಬರು ಈ ಇಬ್ಬರು ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಆದರೆ ವೃತ್ತದಲ್ಲಿ ರಾಮಸ್ವಾಮಿಗೆ ಮಾತ್ರ ಸ್ಥಾನ ಕಲ್ಪಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಾಗಾರ ಇಲಾಖೆಯಲ್ಲಿರುವ ಪತ್ರಗಳನ್ನು ಪುಸ್ತಕಗಳ ರೂಪದಲ್ಲಿ ನಾಲ್ಕು ಸಂಪುಟಗಳನ್ನು ಪ್ರಕಟಿಸಲಾಗಿದೆ. ಇದನ್ನು ಸಂಶೋಧಕರು ಬಳಸಿಕೊಳ್ಳಬೇಕು. ಅಲ್ಲದೆ, ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಪತ್ರಾಗಾರ ಇಲಾಖೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾಲ್ವಡಿ ಕನ್ನಡಾಭಿಮಾನ: ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಆಡಳಿತಾವಧಿಯಲ್ಲಿ ನಾಣ್ಯಗಳಲ್ಲಿ ಕನ್ನಡದ ಅಂಕಿಗಳನ್ನು ಬಳಸಿ ತಮ್ಮ ಕನ್ನಡಾಭಿಮಾನ ಮೆರೆದಿದ್ದಾರೆ. ತಾಮ್ರದ ನಾಣ್ಯಗಳಲ್ಲಿ 1ರಿಂದ 25 ಅಂಕಿವರೆಗೆ ಬಳಸಿದ್ದು, 'ಶ್ರೀಕೃಷ್ಣ' ಎಂದು ನಾಣ್ಯದಲ್ಲಿ ನಮೂದಿಸಿದ್ದು, ಮತ್ತೊಂದು ಕಡೆ ನಾಣ್ಯವನ್ನು ಟಂಕಿಸಿದ ವರ್ಷ ಉಲ್ಲೇಖಿಸಲು ಕನ್ನಡದ ಅಂಕಿ ಬಳಸಿದ್ದಾರೆ. ಅವರನ್ನು ನಾವು ಸ್ಮರಿಸಬೇಕು. ಆ ನಾಣ್ಯಗಳ ಸಂಗ್ರಹ ನನ್ನ ಬಳಿಯಿದೆ ಎಂದು ತಿಳಿಸಿದರು.

ಕದಂಬರ ಕಾಲದ ಒಂದು ಶಾಸನದಲ್ಲಿ 1ರಿಂದ 9ರವರೆಗಿನ ಕನ್ನಡ ಅಂಕಿಗಳನ್ನು ಬಳಸಲಾಗಿದೆ. ಒಂದೇ ಶಾಸನದಲ್ಲಿ ಇಷ್ಟು ಹೆಚ್ಚಿನ ರೀತಿಯಲ್ಲಿ ಕನ್ನಡ ಅಂಕಿಗಳನ್ನು ಬಳಸಿರುವುದು ಸದ್ಯ ಇದರಲ್ಲೇ ಮೊದಲು. ಮೈಸೂರು ವಿವಿಯಲ್ಲಿದ್ದ ಶಾಸನ ತಜ್ಞ ಬಿ.ಆರ್.ಗೋಪಾಲ್ ಇದನ್ನು ಶೋಧಿಸಿ ಪ್ರಕಟಿಸಿದರು. ಕನ್ನಡಕ್ಕೆ ಈ ರೀತಿಯಲ್ಲಿ ಕೊಡುಗೆ ನೀಡಿದವರನ್ನು ನಾವು ಸ್ಮರಿಸಬೇಕು ಎಂದರು.

ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್.ಮಂಜುನಾಥ್ ಮಾತನಾಡಿದರು. ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿ ನಿವೃತ್ತ ಉಪನಿರ್ದೇಶಕಿ ಡಾ.ಜಿ.ವಿ.ಗಾಯಿತ್ರಿ ಸಮಾರೋಪ ಭಾಷಣ ಮಾಡಿದರು. ಕರ್ನಾಟಕ ರಾಜ್ಯ ಪತ್ರಾಗಾರ ಕಚೇರಿ ಬೆಂಗಳೂರು ಉಪ ನಿರ್ದೇಶಕ ಡಾ.ಸದಾನಂದ ನೆಲ್ಲುದ್ರಿ, ಹಿರಿಯ ಸಹಾಯಕ ನಿರ್ದೇಶಕ ಮಹೇಶ್, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮತ್ತಿತರರು ಹಾಜರಿದ್ದರು.

ಪತ್ರಗಳು ಇತಿಹಾಸದ ಭಂಡಾರ...

ಅಂದಿನ ಮಹನೀಯರ ಪತ್ರ ವ್ಯವಹಾರ, ಛಾಯಾಚಿತ್ರ ದಾಖಲೆಗಳು ಇತಿಹಾಸ ತಿಳಿಸುವ ಭಂಡಾರವಾಗಿವೆ. ಜೊತೆಗೆ ಅಂದಿನವರನ್ನು ಸ್ಮರಿಸುವ ಮಾರ್ಗವೂ ಹೌದು. ಅಂತೆಯೇ ಭಾಷೆ ಆಧಾರದಲ್ಲಿ ನಡೆದ ರಾಜ್ಯಗಳ ವಿಂಗಡಣೆ, ಕರ್ನಾಟಕ ಏಕೀಕರಣದ ಬೆಳವಣಿಗೆಗಳ ಬಗ್ಗೆ ಪತ್ರಗಳು, ಛಾಯಾಚಿತ್ರಗಳು ಮಹತ್ವದ ಮಾಹಿತಿ ಒದಗಿಸುತ್ತವೆ. ಕನ್ನಡ ಭಾಷೆ ಬೆಳವಣಿಗೆಗೆ ಹಲವು ಕ್ಷೇತ್ರಗಳು ಕೊಡುಗೆ ನೀಡಿವೆ. ಕನ್ನಡ ಚಲನಚಿತ್ರಗಳ ಮೂಲಕ ಸಾಹಿತಿಗಳು ನೀಡಿದ ಹಾಡುಗಳ ಕೊಡುಗೆಯೂ ಇಲ್ಲಿ ಅಪಾರ. ಚಲನಚಿತ್ರ ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ಓದು ಬರಹ ಬಾರದೆ ಇರುವವರಲ್ಲಿ ಕನ್ನಡಾಭಿಮಾನ ಮೂಡಿಸಿದ್ದಾರೆ.

-ಡಾ.ಜಿ.ವಿ.ಗಾಯಿತ್ರಿ

ಮಹದೇಶ್ವರ ಬೆಟ್ಟದಿಂದ ನಾಗಮಲೆ ಪ್ರವೇಶಕ್ಕೆ ತಾತ್ಕಾಲಿಕ ನಿರ್ಬಂಧ

● ಅವಘಡ ತಡೆಗೆ ವಾಹನಗಳ ಸಂಚಾರವೂ ನಿರ್ಬಂಧ ● ಟ್ರಕ್ಕಿಂಗ್ ಹೆಸರಲ್ಲಿ ಪ್ರಾಣಿಗಳ ದಾಳಿಗೆ ಒಳಗಾಗುವ ಪ್ರಕರಣಕ್ಕೆ ಕಡಿವಾಣ ● ಇನ್ನು ಮುಂದೆ ನಾಗಮಲೆ ರಸ್ತೆಯಲ್ಲಿ ಖಾಸಗಿ ಜೀಪ್‌ಗಳ ಓಡಾಟ ಡೌಟು

■ **ಎಂ.ಟಿ.ಯೋಗೇಶ್ ಕುಮಾರ್**

ಮೈಸೂರು,ಫೆ.19– ದಕ್ಷಿಣ ಭಾರತ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿರುವ ಮಲೆ ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಹೋಗುವ ಭಕ್ತರು ಹಾಗೂ ಪ್ರವಾಸಿಗರ ಪ್ರವೇಶಕ್ಕೆ ತಾತ್ಕಾಲಿಕವಾಗಿ ಕಡಿವಾಣ ಹಾಕಲಾಗಿದ್ದು, ಭಕ್ತರ ಸುರಕ್ಷತೆ ಮತ್ತು ಅರಣ್ಯ ಪ್ರದೇಶಕ್ಕೆ ಆಗುತ್ತಿರುವ ಹಾನಿ ತಡೆಗಟ್ಟಲು ಶೀಘ್ರವೇ 'ಮಾರ್ಗದರ್ಶಕ'ರ ಮುಂದಾಳತ್ವದಲ್ಲಿ ಭಕ್ತರ ಪ್ರವೇಶಕ್ಕೆ ಹೊಸ ನಿಯಮ ಜಾರಿಗೊಳಿಸಲು ನಿರ್ಧರಿಸಲಾಗಿದೆ.



77 ಮಲೆಗಳ ಒಡೆಯ ಮಲೆ ಮಹದೇಶ್ವರರು ನಾಗಮಲೆಯ ಗುಹೆಯಲ್ಲಿ ತಪಸ್ಸು ಮಾಡಿ ಭಕ್ತರಿಗೆ ದರ್ಶನ ನೀಡಿದ ಸ್ಥಳದಲ್ಲಿ ಇಂದಿಗೂ ಪೂಜಾ ಕೈಂಕರ್ಯ ಜರುಗುತ್ತಿದ್ದು, ಹರಕೆ ಹೊತ್ತವರೂ ಒಳಗೊಂಡಂತೆ ನಾಡಿನ ವಿವಿಧೆಡೆಯಿಂದ ನಾಗಮಲೆಗೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿದೆ. ದಟ್ಟಾರಣ್ಯ ಹಾಗೂ ಸುತ್ತಲೂ ಬೆಟ್ಟ–ಗುಡ್ಡಗಳು ಆವರಿಸಿರುವ 'ನಾಗಮಲೆ'ಗೆ ಮಹದೇಶ್ವರರ ಭಕ್ತರು ಒಮ್ಮೆಯಾದರೂ ಬೇಟಿ ನೀಡಬೇಕೆಂದು ಹಂಬಲಿಸುತ್ತಾರೆ. ಮಲೆ ಮಹದೇಶ್ವರ ಬೆಟ್ಟದಿಂದ ಸುಮಾರು 14 ಕಿ.ಮಿ (ಹೋಗಿ ಬರಲು 28 ಕಿಮಿ) ಕಾಲ್ನಡಿಗೆಯಲ್ಲಿ ನಾಗಮಲೆಗೆ ತೆರಳಬೇಕಾಗಿತ್ತು. 2010ರ ನಂತರ ಹಂತ ಹಂತವಾಗಿ ಇಂಡಿಗನತ್ತ ಗ್ರಾಮದವರೆಗೂ ಜೀಪ್ ತೆರಳಲು ಕಚ್ಚಾ ರಸ್ತೆ ನಿರ್ಮಾಣ ಮಾಡಿ, ಅರಣ್ಯ ಇಲಾಖೆ ಹಾಕಿದ ಷರತ್ತಿನೊಂದಿಗೆ 6 ಕಿ.ಮಿ ವರೆಗೆ ಭಕ್ತರನ್ನು ಕರೆದೊಯ್ಯಲು ಜೀಪ್ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಸುರಕ್ಷತೆಗೆ ತಿಲಾಂಜಲಿ: ಒಂದು ಜೀಪ್‌ನಿಂದ ಆರಂಭವಾದ ನಾಗಮಲೆ ಭಕ್ತರ ಸಂಚಾರಕ್ಕೆ ಅರಣ್ಯ ಇಲಾಖೆ 10 ಜೀಪ್‌ಗಳವರೆಗೆ ಅನುಮತಿ ನೀಡಿತ್ತು. ಕಾಲ ಕ್ರಮೇಣ 50ರಿಂದ 100ಕ್ಕೂ ಹೆಚ್ಚು ಜೀಪ್‌ಗಳು ನಾಗಮಲೆಗೆ ಭಕ್ತರನ್ನು ಕರೆದೊಯ್ಯಲು ಕಾರ್ಯಾರಂಭ ಮಾಡಿದ್ದು, ದುರ್ಗಮ ಹಾಗೂ ಕಡಿದಾದ ರಸ್ತೆಯಲ್ಲಿ ಭಕ್ತರು, ಪ್ರಯಾಣಿಕರ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಳ್ಳದೆ ಸಂಚರಿಸುತ್ತಿದ್ದವು. ಇದರಿಂದ ನಾಗಮಲೆಗೆ ಬರುವ ಭಕ್ತರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳ ಕಂಡು ಬಂದಿತ್ತು. ಮಹದೇಶ್ವರ ಬೆಟ್ಟದಿಂದ ನಾಗಮಲೆ ರಸ್ತೆಯು ಇಂಡಿಗನತ್ತ ಗ್ರಾಮದವರೆಗೂ ಸಂಚರಿಸುತ್ತಿದ್ದ ಬಹುತೇಕ ಎಲ್ಲಾ ಜೀಪ್‌ಗಳಿಗೂ ವಿಮೆ, ಎಫ್‌ಸಿ ಇಲ್ಲದಿರುವುದು ಪತ್ತೆಯಾಗಿದೆ. ಕೆಲ ಜೀಪ್‌ಗಳಿಗೆ ನೋಂದಣಿ ಸಂಖ್ಯೆಯೂ ಇಲ್ಲದೇ ಓಡಿಸಲಾಗುತ್ತಿದೆ.

8 ಮಂದಿ ಪ್ರಯಾಣಿಸಬಹುದಾದ ಜೀಪ್‌ನಲ್ಲಿ ಟಾಪ್, ಬಾನೆಟ್ ಸೇರಿದಂತೆ 18ರಿಂದ 20 ಮಂದಿಯನ್ನು ಕರೆದೊಯ್ಯಲಾಗುತ್ತಿದೆ. ಈ ಎಲ್ಲಾ ಅಂಶವನ್ನು ಮನಗಂಡ ಅರಣ್ಯ ಇಲಾಖೆ ಕೆಲ ಭಕ್ತರು ನೀಡಿದ ದೂರಿನ ಮೇರೆಗೆ ಇದೀಗ ನಾಗಮಲೆ ರಸ್ತೆಯಲ್ಲಿ ಜೀಪ್‌ಗಳ ಸಂಚಾರಕ್ಕೆ ಬ್ರೇಕ್ ಹಾಕಿದೆ.


ಪ್ಲಾಸ್ಟಿಕ್ ರಾಶಿ: ಇಂಡಿಗನತ್ತ ಗ್ರಾಮದಿಂದ ನಾಗಮಲೆಗೆ 6 ಕಿ.ಮಿ ದೂರವಿದ್ದು, ಕಾಲ್ನಡಿಗೆ ಹಾದಿಯಲ್ಲೇ ಸಾಗಬೇಕು. ಕೆಲವು ಕಡಿದಾದ ರಸ್ತೆ, ಅರಣ್ಯ ಪ್ರದೇಶ, ಬೆಟ್ಟ–ಗುಡ್ಡ ಹತ್ತಿ ಸಾಗಬೇಕಾಗಿದೆ. ಈ ವೇಳೆ ದಾರಿಯುದ್ದಕ್ಕೂ ಭಕ್ತರು ಪ್ಲಾಸ್ಟಿಕ್ ಪೇಪರ್, ನೀರಿನ ಬಾಟಲ್ ಸೇರಿದಂತೆ ಪರಿಸರ ಮಾರಕ ತ್ಯಾಜ್ಯ ಎಸೆದು ಬರುತ್ತಿದ್ದಾರೆ. ಇದರಿಂದ ದಾರಿಯುದ್ಧಕ್ಕೂ ರಾಶಿ ರಾಶಿ ಪ್ಲಾಸ್ಟಿಕ್ ತ್ಯಾಜ್ಯ ಬಿದ್ದಿದ್ದು, ವನ್ಯಜೀವಿಗಳಿಗೆ ತೊಂದರೆಯಾಗುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿಯೇ ದೊಡ್ಡ ಸವಾಲಾಗಿ ಅರಣ್ಯ ಇಲಾಖೆಗೆ ಪರಿಣಮಿಸಿತ್ತು. ಇದಕ್ಕೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಮುಂದಾಗಿದೆ.

ತಾತ್ಕಾಲಿಕ ಬಂದ್: ನಾಗಮಲೆಯ ದರ್ಶನಕ್ಕೆ ಬರುವ ಭಕ್ತರು ಹಾಗೂ ಟ್ರೆಕ್ಕಿಂಗ್ ಉದ್ದೇಶದಿಂದ ಬರುವ ಪ್ರವಾಸಿಗರು ಹೆಚ್ಚಾಗುತ್ತಿದ್ದು, ನಿಯಮ ಪಾಲಿಸುತ್ತಿಲ್ಲ. ಇದರಿಂದ ಅರಣ್ಯ ಸಂಪತ್ತು ವನ್ಯಜೀವಿಗಳಿಗೂ ತೊಂದರೆಯಾಗುತ್ತಿದೆ. ಅರಣ್ಯ ಮಹತ್ವ ಕಾಪಾಡುವ ನಿಟ್ಟಿನಲ್ಲಿ ಹಾಲಿ ಇರುವ ವ್ಯವಸ್ಥೆಗೆ ತಾತ್ಕಾಲಿಕ ಬಂದ್ ಮಾಡಲಾಗಿದೆ. ಇದರಿಂದ ಫೆ.17ರಿಂದ ಮಾರ್ಚ್ ಅಂತ್ಯವರೆಗೂ ನಾಗಮಲೆ ಪ್ರವೇಶ ನಿರ್ಬಂಧಿಸಲಾಗಿದೆ. ಅರ್ಚಕರು ಮಾತ್ರ ಸಾಂಪ್ರದಾಯಿಕ ಪೂಜೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಆನ್‌ಲೈನ್ ವ್ಯವಸ್ಥೆ: ಟ್ರೆಕ್ಕಿಂಗ್ ಹೆಸರಲ್ಲಿ ನಾಗಮಲೆಯ ಮಹತ್ವ ಧಕ್ಕೆಯಾಗುತ್ತಿರುವ ದೂರನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಇಲಾಖೆ ಇನ್ನು ಮುಂದೆ ನಾಗಮಲೆಗೆ ತೆರಳಲು ಬಯಸುವವರು ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿಕೊಳ್ಳಬೇಕಾಗಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಮಹದೇಶ್ವರ ಬೆಟ್ಟದಿಂದ ನಾಮಗಲೆಗೆ ನಡೆದುಕೊಂಡು ಹೋಗಲು ಅವಕಾಶ ಒದಗಿಸಲಾಗುತ್ತದೆ.

ಶುಲ್ಕ ಕಟ್ಟಬೇಕು: ಹೊಸ ನಿಯಮ ಜಾರಿಗೊಳಿಸಿದ ಬಳಿಕ ನಾಗಮಲೆಗೆ ತೆರಳುವವರು ಶುಲ್ಕ ಪಾವತಿಸಬೇಕಾಗಿದೆ. ಅದಕ್ಕಾಗಿ ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಯಾವುದೇ ಕಾರಣಕ್ಕೂ ಅರಣ್ಯ ಇಲಾಖಾ ಸಿಬ್ಬಂದಿಗಳ ಕಣ್ತಪ್ಪಿಸಿ ನಾಗಮಲೆ ಹಾದಿ ತುಳಿಯದಂತೆ ಕಟ್ಟೆಚ್ಚರ ವಹಿಸಲಾಗುತ್ತದೆ.

ಸ್ಥಳೀಯ ಯುವಕರ ಬೆಂಗಾವಲು: ಅರಣ್ಯ ಇಲಾಖೆ ನಾಗಮಲೆ ಹಾದಿಯಲ್ಲಿರುವ 6–7 ಗ್ರಾಮಗಳಲ್ಲಿರುವ ಆಸಕ್ತ ನಿರುದ್ಯೋಗಿ ಯುವಕರನ್ನು ಭಕ್ತರು ಹಾಗೂ ಟ್ರೆಕ್ಕಿಂಗ್ ಬರುವ ಪ್ರವಾಸಿಗರನ್ನು ಕರೆದೊಯ್ಯಲು ಬೆಂಗಾವಲು ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸಲು ನಿಯೋಜಿಸಲು ಅರಣ್ಯ ಇಲಾಖೆ ಬಯಸಿದೆ. ಪ್ರಸ್ತುತ ಜೀಪ್‌ನಲ್ಲಿ ಪ್ರಯಾಣಿಸಲು (ಹೋಗಿ ಬರಲು) 120ರಿಂದ 140 ರೂ. ಪಾವತಿಸುತ್ತಿದ್ದರು. ಅದೇ ಹಣವನ್ನು ಅರಣ್ಯ ಇಲಾಖೆ ನಿಯೋಜಿಸುವ ಸ್ಥಳೀಯ ಯುವಕರಿಗೆ ನೀಡಬೇಕಾಗಿದ್ದು, ಅವರ ಮಾರ್ಗದರ್ಶನದಲ್ಲಿ ಸಾಗುವುದರಿಂದ ವನ್ಯಜೀವಿಗಳ ದಾಳಿಯಿಂದ ತಪ್ಪಿಸಿಕೊಳ್ಳಬಹುದಾಗಿದೆ.



ಭಕ್ತರು ಹಾಗೂ ಪ್ರವಾಸಿಗರ ಸುರಕ್ಷತೆಗಾಗಿ ಹೊಸ ನಿಯಮ ಜಾರಿಗೆ ಚಿಂತನೆ

ನಾಗಮಲೆಗೆ ತೆರಳುವ ಭಕ್ತರನ್ನು ಕರೆದೊಯ್ಯಲು ಅರಣ್ಯ ಇಲಾಖೆ ಷರತ್ತಿನೊಂದಿಗೆ 10 ಜೀಪ್‌ಗಳಿಷ್ಟೇ ಅನುಮತಿ ನೀಡಿತ್ತು. ಆದರೆ, ಈಗ 200ಕ್ಕೂ ಹೆಚ್ಚು ಜೀಪ್‌ಗಳಿವೆ. ಯಾವೊಂದು ಜೀಪ್‌ಗಳಲ್ಲಿ ಸುರಕ್ಷತೆಗೆ ಕ್ರಮ ಕೈಗೊಂಡಿಲ್ಲ. ಏನಾದರು ಅನಾಹುತ ಸಂಭವಿಸಿದರೆ ಹೊಣೆ ಯಾರು? ಟಾಪ್, ಬಾನೆಟ್ ಮೇಲೂ ಮಿತಿ ಮೀರಿದ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕಾಗಿದೆ. ಇತ್ತೀಚೆಗೆ ಬೆಂಗಳೂರಿನ ವ್ಯಕ್ತಿಯೊಬ್ಬರು ಟ್ರೆಕ್ಕಿಂಗ್‌ಗೆಂದು ರಾತ್ರಿ 9 ಗಂಟೆಗೆ ನಾಗಮಲೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಆನೆ ದಾಳಿ ನಡೆಸಿದೆ. ಈ ಎಲ್ಲಾ ಅಂಶವನ್ನು ಮನಗಂಡು ನಾಗಮಲೆ ಪ್ರವೇಶಕ್ಕೆ ತಾತ್ಕಾಲಿಕ ತಡೆಯೊಡ್ಡಲಾಗಿದೆ. ಭಕ್ತರಿಗೆ ತೊಂದರೆ ನೀಡಬೇಕೆಂಬ ಉದ್ದೇಶ ನಮ್ಮದ್ದಲ್ಲ. ಅವರ ಸುರಕ್ಷತೆಗಾಗಿ ಕ್ರಮ ಕೈಗೊಳ್ಳಲಾಗಿದೆ. ಸ್ಥಳೀಯ ಯುವಕರನ್ನು ಮಾರ್ಗದರ್ಶಕರಾಗಿ ತರಬೇತಿ ನೀಡಿ ನಿಯೋಜಿಸಲಾಗುತ್ತದೆ. ಇದರಿಂದ ನಿಯಮ ಪಾಲನೆಯೊಂದಿಗೆ ಅರಣ್ಯ ಪ್ರದೇಶದಲ್ಲಿ ತ್ಯಾಜ್ಯ ಬಿಸಾಡುವುದಕ್ಕೆ ಕಡಿವಾಣ ಬಿದ್ದಂತಾಗುತ್ತದೆ. ಆ ನಂತರ ಶುಲ್ಕ ನೀಡಿ ಹೊಸ ವ್ಯವಸ್ಥೆಯಲ್ಲಿ ನಾಗಮಲೆ ಯಾತ್ರೆ ಪುನರಾರಂಭಕ್ಕೆ ಚಾಲನೆ ನೀಡಲಾಗುತ್ತದೆ.

– ಜಿ. ಸಂತೋಷ್ ಕುಮಾರ್, ಡಿಸಿಎಫ್, ಮಲೆ ಮಹದೇಶ್ವರ ವನ್ಯಧಾಮ

ಸಕಲ ಸರ್ಕಾರಿ ಗೌರವಗಳೊಂದಿಗೆ ಯೋಧ ನವೀನ್ ಅಂತ್ಯಕ್ರಿಯೆ

ನಂಜನಗೂಡು, ಫೆ.19– ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಹೃದಯಾಘಾತದಿಂದ ಸಾವನ್ನಪ್ಪಿದ್ದ ಬಿಎಸ್‌ಎಫ್ ಯೋಧ ನವೀನ್ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಸೋಮವಾರ ನಗರದ ಪರಶುರಾಮ ದೇವಾಲಯದ ಬಳಿಯ ಸ್ಮಶಾನದಲ್ಲಿ ನೆರವೇರಿತು.

ಹುಲ್ಲಹಳ್ಳಿ ಗ್ರಾಮದ ನಿವೃತ್ತ ಪಿಡಿಓ ವೆಂಕಟರಾಮು ಅವರ ಪುತ್ರ ನವೀನ್ ಕಳೆದ 20 ವರ್ಷಗಳಿಂದ ಯೋಧನಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅಸ್ಸಾಂನ ತ್ರಿಪುರಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಶನಿವಾರ ಸಾವನ್ನಪ್ಪಿದ್ದರು. ಯೋಧನ ಪಾರ್ಥಿವ ಶರೀರವನ್ನು ಭಾನುವಾರ ರಾತ್ರಿ 7 ಗಂಟೆಗೆ ಬೆಂಗಳೂರಿಗೆ ತರಲಾಯಿತು. ರಾತ್ರಿ 11 ಗಂಟೆಗೆ ಸ್ವಗ್ರಾಮ ಹುಲ್ಲಹಳ್ಳಿಗೆ ಪಾರ್ಥಿವ ಶರೀರ ಆಗಮಿಸಿತು. ಈ ವೇಳೆ ಶಾಸಕ ದರ್ಶನ್ ಧ್ರುವನಾರಾಯಣ್ ಪುಷ್ಪಮಾಲಿಕೆ ಮೂಲಕ ಗೌರವ ಸಲ್ಲಿಸಿದರು. ಅಲ್ಲದೇ ವಿವಿಧ ಸಂಘಟನೆಗಳ ಸದಸ್ಯರು ಸಹ ಮೃತ ಯೋಧನಿಗೆ ಗೌರವ ಸಲ್ಲಿಸಿದರು. ನಂತರ ಮಧ್ಯರಾತ್ರಿ 2 ಗಂಟೆಗೆ ನಂಜನಗೂಡಿನ ಚನ್ನಕೇಶವ ಲೇಔಟ್‌ನ ಮನೆಗೆ ಪಾರ್ಥಿವ ಶರೀರವನ್ನು ತರಲಾಯಿತು. ಸೋಮವಾರ ಬೆಳಗ್ಗೆ 8 ಗಂಟೆಗೆ ತಾಲೂಕು ಆಡಳಿತ, ಬಿಎಸ್‌ಎಫ್ ಯೋಧರು ಮತ್ತು ಪೊಲೀಸ್ ತುಕಡಿಗಳು ಯೋಧ ನವೀನ್ ಮನೆ ಬಳಿ 3 ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಯೋಧನ ಪಾರ್ಥಿವ ಶರೀರಕ್ಕೆ ರಾಷ್ಟ್ರಧ್ವಜ ಹೊದಿಸಿ ಪುಷ್ಪ ಮಾಲಿಕೆ ಸಲ್ಲಿಸಿ ಗೌರವ ಸಲ್ಲಿಸಿದರು. ನಂತರ ನಗರದ ಪರಶುರಾಮ ದೇವಾಲಯದ ಬಳಿಯ ಸ್ಮಶಾನದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸನೂರು, ಎಸ್‌ಐ ಪ್ರಕಾಶ್ ಮದ್ದೂರು, ಬಿಎಸ್‌ಎಫ್ ಅಧಿಕಾರಿ ಮುರ್‌ಮುರಾಸಾಬ್, ರೋಹಿತ್, ಸರ್ವೇಶ್ ವೀರ ಯೋಧ ನವೀನ್ ಪಾರ್ಥಿವ ಶರೀರಕ್ಕೆ ಪುಷ್ಪ ಮಾಲಿಕೆ ಸಲ್ಲಿಸಿ 5 ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಗೌರವ ವಂದನೆ ಸಲ್ಲಿಸಿದರು. ಬಳಿಕ ತಹಸೀಲ್ದಾರ್ ಶಿವಕುಮಾರ್ ಕಾಸನೂರು ಪಾರ್ಥಿವ ಶರೀರದ ಮೇಲೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಯೋಧ ನವೀನ್ ತಂದೆ ವೆಂಕಟರಾಮು ಅವರಿಗೆ ಹಸ್ತಾಂತರಿಸಿದರು. ಬಳೀಕ 2 ನಿಮಿಷ ಮೌನಾಚರಣೆ ನಡೆಸಿ ವಿಧಿ ವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಇದೇ ವೇಳೆ ನಂಜನಗೂಡಿನ ವಿವಿಧ ಸಂಘ ಸಂಸ್ಥೆಗಳು, ಸಂಬಂಧಿಕರು, ಸ್ನೇಹಿತರು ಗೌರವ ಸಲ್ಲಿಸಿದರು.





ಕರ್ತವ್ಯದಲ್ಲಿದ್ದ ವೇಳೆ ಸಾವನ್ನಪ್ಪಿದ ಯೋಧ ನವೀನ್ ಅವರಿಗೆ ತಾಲೂಕು ಆಡಳಿತದಿಂದ ಗೌರವ ಸಲ್ಲಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮೃತ ಯೋಧನ ಅಂತಿಮ ದರ್ಶನ ಪಡೆದರು.

ಶಿಕ್ಷಣದಿಂದ ವಂಚಿತವಾಗಿದ್ದ ಅಸ್ಸಾಂ ಮೂಲದ

32 ಮಕ್ಕಳು ಸರ್ಕಾರಿ ಶಾಲೆ, ಅಂಗನವಾಡಿಗೆ ದಾಖಲು

ಹುಣಸೂರು, ಫೆ.19– ದೂರದ ಅಸ್ಸಾಂನಿಂದ ಕೂಲಿ ಕೆಲಸಕ್ಕಾಗಿ ಆಗಮಿಸಿದ್ದ ಕಾರ್ಮಿಕರ 32 ಮಕ್ಕಳನ್ನು ಪತ್ತೆ ಹಚ್ಚಿದ ಕಾರ್ಮಿಕ ಇಲಾಖೆ ಅಧಿಕಾರಿಗಳು ಮಕ್ಕಳನ್ನು ಸರ್ಕಾರಿ ಶಾಲೆ ಹಾಗೂ ಅಂಗನವಾಡಿಗೆ ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹುಣಸೂರು ತಾಲೂಕಿನ ಹಾಲಗೆರೆ ಬಳಿಯ ಕೆ.ಎ.ಅಂಡ್ ಸನ್ಸ್ ಕೋಕೋನೆಟ್ ಇಂಡಸ್ಟ್ರೀಸ್ ಕಾರ್ಖಾನೆಯಲ್ಲಿ ಅಸ್ಸಾಂನ 25ಕ್ಕೂ ಹೆಚ್ಚು ಕುಟುಂಬಗಳು ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ಇವರೊಂದಿಗೆ ಮಕ್ಕಳು ಸಹ ಶಾಲೆ ತೊರೆದು ಆಗಮಿಸಿ ಪೋಷಕರೊಂದಿಗಿದ್ದರು. ಇದರಿಂದ ಮಕ್ಕಳ ಶಿಕ್ಷಣ ಮೊಟಕಾಗಿತ್ತು.

ಈ ಬಗ್ಗೆ ಮಾಹಿತಿ ಪಡೆದ ಜಿಲ್ಲಾ ಸಹಾಯಕ ಕಾರ್ಮಿಕ ಆಯುಕ್ತೆ ರಜಿಯಾ ಸುಲ್ತಾನರ ನಿರ್ದೇಶನದಂತೆ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ್, ತಾಲೂಕು ಕಾರ್ಮಿಕ ಅಧಿಕಾರಿ ಲಕ್ಷ್ಮೀಶ ಹಾಗೂ ಬಿಆರ್‌ಸಿ ಸಂತೋಷ್ ಕುಮಾರ್, ಇಸಿಓ ಕುಮಾರಸ್ವಾಮಿ, ಅಂಗನವಾಡಿ ಮೇಲ್ವಿಚಾರಕಿ ಶೋಭಾ ಮತ್ತಿತರ ಅಧಿಕಾರಿಗಳ ತಂಡ ಕಾರ್ಖಾನೆಗೆ ಭೇಟಿ ನೀಡಿ ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದು ಕಾನೂನು ಪ್ರಕಾರ ಅಪರಾಧ ಎಂದು ತಿಳುವಳಿಕೆ ನೀಡಿ, ಕಾರ್ಖಾನೆ ಮಾಲಿಕರಿಗೆ ಎಚ್ಚರಿಕೆ ನೀಡಿ 6–14 ವರ್ಷದೊಳಗಿನ 23 ಮಕ್ಕಳನ್ನು ಸಮೀಪದ ಯಶೋಧರಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ 9 ಮಕ್ಕಳನ್ನು ಅಂಗನವಾಡಿಗೆ ದಾಖಲಿಸಲಾಯಿತು. ಮಕ್ಕಳು ಖುಷಿಯಿಂದಲೇ ಶಾಲೆ, ಅಂಗನವಾಡಿಗೆ ಪೋಷಕರು ಹಾಗೂ ಅಧಿಕಾರಿಗಳೊಂದಿಗೆ ಹೊರಟರು.

ಕಾರ್ಖಾನೆ ಆವರಣದಲ್ಲಿರುವ ವಸತಿ ಗೃಹದಲ್ಲಿ ಪರಿಶೀಲಿಸಿದ ವೇಳೆ ಶಾಲೆಗೆ ಹೋಗದೆ ಆಟವಾಡಿಕೊಂಡಿದ್ದ 32 ಮಕ್ಕಳು ಪತ್ತೆಯಾಗಿದ್ದು, ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಶಾಲೆಗೆ ಸೇರಿಸಲು ಕ್ರಮವಹಿಸಲಾಗಿದೆ ಎಂದು ತಾಲೂಕು ಕಾರ್ಮಿಕ ಅಧಿಕಾರಿ ಲಕ್ಷ್ಮೀಶ ತಿಳಿಸಿದ್ದಾರೆ. ಈ ಮಕ್ಕಳಿಗಾಗಿ ಸ್ಥಳದಲ್ಲೇ ಟೆಂಟ್ ಶಾಲೆ ತೆರೆಯುವ ಹಾಗೂ ಈ ಶಾಲೆಗೆ ಉರ್ದು ಮತ್ತು ಹಿಂದಿ ಶಿಕ್ಷಕರನ್ನು ನೇಮಿಸಲಾಗುವುದೆಂದು ಡಿಡಿಪಿಐ ಎಚ್.ಕೆ.ಪಾಂಡು ತಿಳಿಸಿದ್ದಾರೆ ಎಂದು ಬಿಆರ್‌ಸಿ ಸಂತೋಷ್‌ಕುಮಾರ್ ಮಾಹಿತಿ ನೀಡಿದರು.

ವಿವಿಧ ಯೋಜನೆ ಜಾರಿಗೊಳಿಸುವಂತೆ ಡಾ.ಯತೀಂದ್ರಗೆ ಒತ್ತಾಯ



ವಿವಿಧ ಯೋಜನೆ ಅನುಷ್ಠಾನಗೊಳಿಸುವಂತೆ ಮಾಜಿ ಶಾಸಕ ಡಾ.ಯತೀಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ತಿ.ನರಸೀಪುರ, ಫೆ.19– ನಂಜನಗೂಡು, ತಿ.ನರಸೀಪುರ ಹಾಗೂ ಚಾಮರಾಜನಗರ ನಡುವೆ ರೈಲ್ವೆ ಯೋಜನೆ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಾಪಂ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್ ನಿವಾಸಕ್ಕೆ ಭೇಟಿ ನೀಡಿದ ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ಭೇಟಿ ಮಾಡಿದ ಡಾ.ಪ್ರದೀಪ್ ತಾಲೂಕಿನ ಗ್ರಾಮೀಣ ಪ್ರದೇಶಗಳಿಂದ ಪಟ್ಟಣಕ್ಕೆ ಆಗಮಿಸುವ ಕಾಲೇಜು ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಜಿಲ್ಲಾ ಕೇಂದ್ರಕ್ಕೆ ತೆರಳಬೇಕಿರುವುದರಿಂದ ಪಟ್ಟಣದಲ್ಲೇ ಸರ್ಕಾರಿ ಕಾನೂನು ಕಾಲೇಜು, ಪಾಲಿಟೆಕ್ನಿಕ್ ಕಾಲೇಜು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಶೀಘ್ರ ಲಿಪಿ ಮತ್ತು ಬೆರಳಚ್ಚು ಕೋರ್ಸ್‌ಗೆ ಸರ್ಕಾರಿ ತರಬೇತಿ ಸಂಸ್ಥೆ ಸ್ಥಾಪನೆ ಮಾಡಬೇಕು. ನಂಜನಗೂಡು, ತಿ.ನರಸೀಪುರ ಹಾಗೂ ಚಾಮರಾಜನಗರ ನಡುವೆ ರೈಲ್ವೆ ಯೋಜನೆ ಅನುಷ್ಠಾನಕ್ಕೆ ಆದ್ಯತೆ ನೀಡಬೇಕೆಂದು ಮನವಿ ಸಲ್ಲಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳು ಆರಂಭಗೊಳ್ಳಲಿದ್ದು, ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳಲು ಉಚಿತ ಬಸ್ ವ್ಯವಸ್ಥೆ ಮಾಡಿಕೊಡುವಂತೆ ಕೋರಿದ ಅವರು 2024–25ನೇ ಸಾಲಿನ ಬಜೆಟ್‌ನಲ್ಲಿ ವರುಣಾ ಕ್ಷೇತ್ರಕ್ಕೆ ಮೀಸಲಿಟ್ಟ 2 ಸಾವಿರ ಕೋಟಿ ರೂ. ಅನುದಾನವನ್ನು ಸದರಿ ಯೋಜನೆಗಳಿಗೆ ಬಳಸಿಕೊಂಡು ತಾಲೂಕಿನ ಜನತೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಡಾ.ಯತೀಂದ್ರ ಸಿದ್ದರಾಮಯ್ಯ, ಅಧಿವೇಶನಕ್ಕೆ ಮುಂಚಿತವಾಗಿ ಮನವಿ ಸಲ್ಲಿಸಿದ್ದರೆ, ಮುಖ್ಯ ಮಂತ್ರಿಗಳ ಗಮನಕ್ಕೆ ತರಲು ಅನುಕೂಲವಾಗುತ್ತಿತ್ತು. ಈಗಲೂ ಸಹ ಮುಖ್ಯಮಂತ್ರಿಗಳಿಗೆ ಈ ಯೋಜನೆಗಳ ಕುರಿತಂತೆ ಮಾಹಿತಿ ನೀಡಿ ತಾಲೂಕಿನ ಜನತೆಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಕುಪ್ಯಾ ರಘು. ಪುರಸಭಾ ಸದಸ್ಯ ಮಂಜು, ಮಾಜಿ ಸದಸ್ಯ ಗಣೇಶ್, ಕೆಡಿಪಿ ಮಾಜಿ ಸದಸ್ಯ ಎಂ.ಮಿಥುನ್, ಗುರುಸ್ವಾಮಿ, ಶ್ರೀಕಂಠ, ಅಮಾಸೆಗೌಡ, ಆರ್.ಮಹದೇವ್ ಮತ್ತಿತರರಿದ್ದರು.

ಮರದೂರು ಏತ ನೀರಾವರಿಗೆ 84 ಕೋಟಿ ಅನುದಾನ: ಹೆಚ್‌ಪಿಎಂ

ಹುಣಸೂರು, ಫೆ.19– ತಾಲೂಕಿನ ಮರದೂರು ಏತ ನೀರಾವರಿ ಯೋಜನೆ ನನ್ನ ಅವಧಿಯಲ್ಲೇ ಜಾರಿಯಾಗಿತ್ತು. ಆದರೆ ಅನುದಾನ ಬಿಡುಗಡೆಯಾಗಿರಲಿಲ್ಲ. ಕಳೆದ ಜುಲೈನಲ್ಲಿ ಮಾಡಿದ್ದ ಮನವಿಯಂತೆ ಮುಖ್ಯಮಂತ್ರಿಗಳು ಈ ಬಾರಿಯ ಬಜೆಟ್‌ನಲ್ಲಿ 84 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಇದಕ್ಕಾಗಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ಅವರನ್ನು ಅಭಿನಂದಿಸುತ್ತೇನೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲೇ ಮರದೂರು ಏತ ನೀರಾವರಿ ಯೋಜನೆ ಜಾರಿಯಾಗಿತ್ತು. ಆದರೆ ಅನುದಾನ ಬಿಡುಗಡೆಯಾಗಿರಲಿಲ್ಲ. ನಂತರ ಬಿಜೆಪಿ ಸರ್ಕಾರದ ಮೇಲೆ ಸಾಕಷ್ಟು ಒತ್ತಡ ಹಾಕಿದ್ದರೂ ಅನುದಾನ ಬಿಡುಗಡೆಯಾಗಿರಲಿಲ್ಲ. ಇದೀಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜುಲೈ ತಿಂಗಳಲ್ಲಿ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯ, ನೀರಾವರಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಬಳಿ ನೀವೇ ಘೋಷಿಸಿದ್ದ ಯೋಜನೆ ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆ ಅಲ್ಲದೇ ಎಂಎಲ್‌ಸಿ ಹೆಚ್.ವಿಶ್ವನಾಥ್ ಒತ್ತಾಸೆ ಮೇರೆಗೆ ಈ ಬಾರಿಯ ಬಜೆಟ್‌ನಲ್ಲಿ ಯೋಜನೆಗೆ 84 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಯೋಜನೆಗೆ ಅನುದಾನ ನೀಡುವಂತೆ ಶಾಸಕ ಜಿ.ಡಿ.ಹರೀಶ್‌ಗೌಡರು ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಬಳಿ ಮನವಿ ಮಾಡಿದ್ದೆ ಎಂದು ಹೇಳಿಕೊಂಡಿದ್ದಾರೆ. ಆದರೆ ಈಗಾಗಲೇ ಈ ಯೋಜನೆ ಟೆಂಡರ್ ಹಂತದಲ್ಲಿದೆ ಎಂದ ಅವರು ತಾಲೂಕಿನ ಅಭಿವೃದ್ಧಿ ವಿಚಾರದಲ್ಲಿ ಸಹಕಾರ ನೀಡುವೆ ಎಂದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

> ಮರದೂರು ಏತ ನೀರಾವರಿ ಯೋಜನೆಗೆ ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಬಿಡುಗಡೆಯಾಗಿರುವುದು ಸಂತಸದ ವಿಚಾರ. ಇದೊಂದು ಅತ್ಯುತ್ತಮ ಬಜೆಟ್. ಎಲ್ಲಾ ಸಮುದಾಯದವರಿಗೆ ಅವಕಾಶ ನೀಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ನ್ಯಾಯ ಕಲ್ಪಿಸಿದ್ದಾರೆ. ಬಜೆಟ್‌ನಲ್ಲಿ ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಲಾಗಿದೆ. ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಮಂಡಿಸಿರುವ ಈ ಬಜೆಟ್ ಜನರಿಗೆ ಕೊಟ್ಟ ಭರವಸೆಯನ್ನು ಸರ್ಕಾರ ಉಳಿಸಿಕೊಂಡಿದೆ.
>
> -ಹೆಚ್.ಪಿ.ಮಂಜುನಾಥ್, ಮಾಜಿ ಶಾಸಕ.

ನಾನು ಗೆದ್ದಿದ್ದರೆ ಮಂತ್ರಿಯಾಗುತ್ತಿದ್ದೆ: ನನ್ನ ತಾಲೂಕಿನ ಮತದಾರರು ಈ ಬಾರಿ ನನ್ನನ್ನು ಗೆಲ್ಲಿಸಿದ್ದರೇ ನಾನು ಮಂತ್ರಿಯಾಗುತ್ತಿದ್ದೆ. ಅಲ್ಪ ಮತಗಳಿಂದ ಸೋತಿರುವ ನನಗೆ ಕ್ಷೇತ್ರದಲ್ಲಿ ಕೆಲಸ ಮಾಡಲು ಎಂಎಲ್‌ಸಿ ಸ್ಥಾನ ನೀಡಬೇಕು ಎಂದು ಕ್ಷೇತ್ರದ ಜನತೆ ಹಾಗೂ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ. ಸರ್ಕಾರಕ್ಕೆ ನಾನು ಯಾವುದೇ ಖಾತೆಗೆ ಬೇಡಿಕೆ ಇಟ್ಟಿಲ್ಲ. ಯಾವುದೇ ಖಾತೆ ನೀಡಿದರೂ, ಯಾವುದೇ ಸ್ಥಾನ ನೀಡಿದರೂ ನಿಬಾಯಿಸುತ್ತೇನೆ. ನನ್ನ ಪರವಾಗಿ ಮನವಿ ಮಾಡಿದ ಎಲ್ಲಾ ಕಾರ್ಯಕರ್ತರು, ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ವಕಿಲ ಪುಟ್ಟರಾಜು, ತಾಲೂಕು ಅಧ್ಯಕ್ಷ ಟಿ.ವಿ.ನಾರಾಯಣ್ ಉಪಸ್ಥಿತರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ, ಕಂಚಮಳ್ಳಿ ಹಾಗೂ ಹೊಮ್ಮರಗಳ್ಳಿಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಉಪ ತಹಸೀಲ್ದಾರ್ ಸಂಜೀವ್ ಕುಮಾರ್, ರಾಜಸ್ವ ನಿರೀಕ್ಷಕ ಯೋಗೇಂದ್ರ ಕುಮಾರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರು ಇನ್ನಿತರರಿದ್ದರು.

ಬೋವಿ ಸಮಾಜದ ಏಳಿಗೆಗೆ ಶ್ರಮಿಸುವೆ

ಹೆಚ್.ಡಿ.ಕೋಟೆ, ಫೆ.19– ಬೋವಿ ಸಮಾಜದ ಏಳಿಗೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಲಾಗುವುದು ಎಂದು ಕೋಟೆ, ಸರಗೂರು ತಾಲೂಕು ಬೋವಿ ಸಮಾಜದ ತಾಲೂಕು ಅಧ್ಯಕ್ಷ ವೆಂಕಟೇಶ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮೂಲೆ ಗುಂಪಾಗಿರುವ ನಮ್ಮ ಸಮಾಜದಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಶ್ರಮಿಸುತ್ತಿದ್ದೇವೆ. ಶಾಸಕ ಅನಿಲ್ ಚಿಕ್ಕಮಾದು ಅವರ ಮಾರ್ಗದರ್ಶನದಲ್ಲಿ ಸಮಾಜ ಕಟ್ಟುವ ಕೆಲಸ ಮಾಡುತ್ತೇವೆ ಎಂದರು.

ಇದೇ ವೇಳೆ ಬೋವಿ ಸಮಾಜದ ತಾಲೂಕು ಉಪಾಧ್ಯಕ್ಷರಾಗಿ ರವಿಕುಮಾರ್, ಗೌರವಾಧ್ಯಕ್ಷ ರಾಜು, ಖಜಾಂಚಿಯಾಗಿ ರಾಮಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಈ ಸಂದರ್ಭ ಮುಖಂಡರಾದ ರಘು, ನಾಗರಾಜು, ಬಸಪ್ಪ, ಶೇಖರ್, ಈಶ್ವರ್, ಶ್ರೀನಿವಾಸ್, ನಾಗರಾಜು, ರಾಮಕೃಷ್ಣ, ಕಾಳಪ್ಪ, ಶ್ರೀನಿವಾಸ್ ಇದ್ದರು.



ಸುದ್ದಿಗೋಷ್ಠಿಯಲ್ಲಿ ಬೋವಿ ಸಮಾಜದ ತಾಲೂಕು ಅಧ್ಯಕ್ಷ ವೆಂಕಟೇಶ್ ಮಾತನಾಡಿದರು.

ಮೆಡಿಕಲ್ ಸ್ಟೋರ್ ಕಳವು ಆರೋಪಿ ಬಂಧನ

ಸರಗೂರು, ಫೆ.19– ಪಟ್ಟಣದ ಮೆಡಿಕಲ್ ಸ್ಟೋರ್‌ಗೆ ನುಗ್ಗಿ ಸಾವಿರಾರು ರೂ. ಕಳ್ಳತನ ಮಾಡಿದ್ದ ಆರೋಪಿ ಬಂಧಿಸುವಲ್ಲಿ ಸರಗೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಪಟ್ಟಣದ ನಿವಾಸಿ ಎಸ್.ಎಸ್.ಮಹೇಶ್ ಬಂಧಿತ ಆರೋಪಿ.

ವಿವರ: ಪಟ್ಟಣದ ಮಹಾವೀರ ಸರ್ಕಲ್‌ನಲ್ಲಿರುವ ಗಣಪತಿ ದೇವಾಲಯದ ಎದುರಿನ ಶ್ರೀವಿನಾಯಕ ಮೆಡಿಕಲ್ ಸ್ಟೋರ್ ಮಾಲೀಕ ಯಾದವ್ ಅವರು, ಎಂದಿನಂತೆ ವ್ಯಾಪಾರ ಮುಗಿಸಿ ಶನಿವಾರ ರಾತ್ರಿ ಮನೆಗೆ ತೆರಳಿದ್ದರು. ಮಧ್ಯರಾತ್ರಿ 12.30ರ ವೇಳೆಗೆ ಆರೋಪಿ ಎಸ್.ಎಸ್.ಮಹೇಶ್ ಮೆಡಿಕಲ್ ಸ್ಟೋರ್ ಹಿಂಭಾಗದ ಮನೆಯ ಹೆಂಚು ಎತ್ತಿ ಮೆಡಿಕಲ್ ಸ್ಟೋರ್‌ಗೆ ನುಗ್ಗಿ 2 ಸಾವಿರ ರೂ. ಹಾಗೂ 8 ಸಾವಿರ ಚಿಲ್ಲರೆ ಹಣ ದೋಚಿ ಪರಾರಿಯಾಗಿದ್ದ. ಭಾನುವಾರ ಬೆಳಗ್ಗೆ ಯಾದವ್ ಅವರು ಮೆಡಿಕಲ್ ಸ್ಟೋರ್ ತೆರೆದಾಗ ಪ್ರಕರಣ ಬೆಳಕಿಗೆ ಬಂದಿದ್ದು, ತಕ್ಷಣ ಅವರು ಸರಗೂರು ಠಾಣೆಗೆ ದೂರು ನೀಡಿದ್ದರು.

ಈ ವೇಳೆ ಮೆಡಿಕಲ್ ಸ್ಟೋರ್‌ಗೆ ಆಗಮಿಸಿದ ಸಿಪಿಐ ಲಕ್ಷ್ಮೀಕಾಂತ್, ಎಸ್‌ಐ ಮಧು ಹಾಗೂ ಸಿಬ್ಬಂದಿ ಸಿಸಿಟಿವಿ ಫುಟೇಜ್ ಆಧರಿಸಿ ಕಾರ್ಯಾಚರಣೆ ನಡೆಸಿ, ಘಟನೆ ನಡೆದ 24 ಗಂಟೆಯೊಳಗೆ ಆರೋಪಿ ಎಸ್.ಎಸ್.ಮಹೇಶ್‌ನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದು ಆತ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ನಾಗನಾಯಕ, ಇಮ್ರಾನ್ ಮಹಮದ್, ಕ್ರೈಂ ಪೊಲೀಸ್ ಕೃಷ್ಣಯ್ಯ, ಜಗದೀಶ್, ಉಷಾ, ಮಹದೇವಮ್ಮ, ದೇವರಾಜು, ಆನಂದ್ ಸೇರಿದಂತೆ ಇನ್ನಿತರರಿದ್ದರು.



ಮೆಡಿಕಲ್ ಸ್ಟೋರ್‌ನಲ್ಲಿ ಪರಿಶೀಲನೆ ನಡೆಸುತ್ತಿರುವ ಪೊಲೀಸರು.

ದೊಡ್ಡಮ್ಮಣ್ಣಿ ನಿಧನ



ತಿ.ನರಸೀಪುರ, ಫೆ.19– ವರುಣ ಕ್ಷೇತ್ರ ವ್ಯಾಪ್ತಿಯ ಕಾರೇಪುರ ಗ್ರಾಮದ ದೊಡ್ಡಮ್ಮಣ್ಣಿ (55) ಸೋಮವಾರ ನಿಧನರಾದರು. ಮೃತರು ಪತ್ರಕರ್ತ ಎಸ್.ನವೀನ್ ಶಂಭು ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರದ ಸೌಲಭ್ಯ ಬಡವರಿಗೆ ಸಮರ್ಪಕವಾಗಿ ತಲುಪಿಸಿ

ಮೀನುಗಾರಿಕೆ ಸಲಕರಣೆ ವಿತರಿಸಿದ ಕೆಡಿಪಿ ಸದಸ್ಯ ಸುನೀಲ್ ಬೋಸ್

ತಿ.ನರಸೀಪುರ, ಫೆ.19– ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಬಡವರಿಗೆ ತಲುಪಿಸುವ ಮೂಲಕ ಸಾಮಾಜಿಕ ನ್ಯಾಯ ಕಾಪಾಡಬೇಕು ಎಂದು ಕೆಡಿಪಿ ಸದಸ್ಯರೂ ಆದ ಚಾ.ನಗರ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಮೀನುಗಾರಿಕೆ ಸಹಾಯಕರ ನಿರ್ದೇಶಕರ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯ ವಲಯ, ಜಿಪಂ ವಿಶೇಷ ಘಟಕ ಯೋಜನೆಯಡಿ ನೀಡಲಾದ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪನವರ ನೇತೃತ್ವದ ಸರ್ಕಾರದಲ್ಲಿ ಹಿಂದುಳಿದ ವರ್ಗ, ದೀನದಲಿತರು ಮತ್ತು ಅಲ್ಪ ಸಂಖ್ಯಾತರಿಗೆ ಹೆಚ್ಚಿನ ಅನುಕೂಲವಾಗುವ ರೀತಿ ಯೋಜನೆ ರೂಪಿಸಿದ್ದು, ನಮ್ಮ ಕಾರ್ಯಕರ್ತರು ಬಡವರಿಗೆ ಯೋಜನೆ ತಲುಪಿಸುವ ಕೆಲಸ ಮಾಡಬೇಕು ಎಂದರು.

ಗೆಂಡೆ ಮೀನುಗಳು ಪ್ರಪಂಚದಲ್ಲಿ ಅಗ್ರಸ್ಥಾನದಲ್ಲಿದೆ. ಇವುಗಳನ್ನು ಚಿಕ್ಕ ಕೆರೆಗಳು, ಗೋಕಟ್ಟೆ, ಕೃಷಿ ಹೊಂಡಗಳು, ಕೆರೆ ಅಂಚಿನ ಕೊಳಗಳಲ್ಲಿ ರೈತರು ಮೀನು ಮರಿ ಪಾಲನೆಯನ್ನು ಯಶಸ್ವಿಯಾಗಿ ಮತ್ತು ಲಾಭದಾಯಕವಾಗಿ ಮಾಡಬಹುದು. ರೈತರು ಮೀನುಗಾರಿಕೆ ಇಲಾಖೆಯಲ್ಲಿ ದೊರೆಯುವ ಮಾಹಿತಿಗಳನ್ನು ಪಡೆದು ಹಾಗೂ ಸವಲತ್ತುಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸಬಲರಾಗುವಂತೆ ರೈತರಿಗೆ ಕರೆ ನೀಡಿದರು. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಸಿದ್ದರಾಮಯ್ಯನವರು ಹಲವು ಕೊಡುಗೆ ನೀಡಿದ್ದಾರೆ. ಅಲ್ಲದೇ ಎಲ್ಲಾ ವರ್ಗದ ಅಭಿವೃದ್ಧಿಗೆ ಪೂರಕವಾಗಿ ಬಜೆಟ್ ಮಂಡಿಸಿದ್ದಾರೆ ಎಂದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶ್ವೇತಾ ಮಾತನಾಡಿ, ಮೀನುಗಾರಿಕೆ ಮಾಡುವವರು ಸಿಡಿಮದ್ದು ಬಳಸಿ ಮೀನು ಹಿಡಿಯಬಾರದು. ಇದರಿಂದ ನೀರಿನ ನೈಸರ್ಗಿಕ ಸಮತೋಲನದ ಮೇಲೆ ದುಷ್ಪರಿಣಾಮ ಬೀರುತ್ತದೆ. ಸ್ಥಳೀಯ ಮೂಲ ಜಲ ಸಂಪನ್ಮೂಲಗಳು ನಾಶವಾಗುತ್ತದೆ. ಸಿಡಿಮದ್ದು ಸಿಡಿದು ದೇಹದ ಅಂಗಾಂಗಗಳು ಊನವಾಗುತ್ತದೆ. ಡೈನಾಮೈಟ್ ಬಳಕೆ ಅಪರಾಧ. ಇದನ್ನು ಬಳಸದಂತೆ ಸಲಹೆ ನೀಡಿ. ಅಲ್ಲದೇ ಮುಂದಿನ ಪೀಳಿಗೆಗೆ ಮೀನು ಉಳಿಸಿ ರಕ್ಷಿಸುವಂತೆ ಮೀನುಗಾರರಿಗೆ ಸಲಹೆ ನೀಡಿದರು.

ತಾಲೂಕಿನ ಮೀನುಗಾರಿಕೆ ಇಲಾಖೆಯಿಂದ ಜಿಪಂ ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆಯಡಿ 30 ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು ವಿತರಿಸಲಾಯಿತು. ಇದೇ ವೇಳೆ ಪಟ್ಟಣದ ಶ್ರೀಮಂಟೇಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದರು. ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಪುರಸಭೆಯ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ತಾಲೂಕು ಕುರುಬರ ಸಂಘದ ಗೌರವಾಧ್ಯಕ್ಷ ಮಾದೇಶ್, ಗುರುಮಲ್ಲ, ಪಪಂ ಮಾಜಿ ಅಧ್ಯಕ್ಷ ಎನ್.ಮಹದೇವಸ್ವಾಮಿ, ವಾಟಾಳ್ ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶ್, ನಾಗರಾಜು (ಚೀಕಾ), ಆಪ್ತ ಸಹಾಯಕ ಲಕ್ಷ್ಮೀನಾರಾಯಣ, ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್, ರಾಮಲಿಂಗಯ್ಯ, ಕಲಿಯೂರು ಶಿವಣ್ಣ, ಮಹಿಳಾ ಘಟಕದ ಅಧ್ಯಕ್ಷೆ ಲತಾ, ವೀಣಾ, ಯುವ ಬ್ರಿಗೇಡ್‌ನ ಕುಮಾರ್, ಮುಖಂಡರಾದ ಸುಂದರ ನಾಯಕ, ಸಿದ್ದರಾಜು, ಪಿ.ಎ.ಬಸವರಾಜು, ಅನುಪ್ ಗೌಡ, ಶಾಮಿಯಾನ ನಾಗೇಶ, ಯಡದೊರೆ ಮಹೇಶ್, ಮಾದೇಶ್ ಹಾಜರಿದ್ದರು.



ತಿ.ನರಸೀಪುರದಲ್ಲಿ ಮೀನುಗಾರರಿಗೆ ಕೆಡಿಪಿ ಸದಸ್ಯ ಸುನೀಲ್ ಬೋಸ್ ಸಲಕರಣೆಗಳನ್ನು ವಿತರಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,


ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜೀವ ಹಾನಿಯ ಆತಂಕದಲ್ಲಿ ಜೀವ ಕೈಯ್ಯಲ್ಲಿಡಿದು ನಿಂತಿರುವ ಮರ!







ಸೀತಾವಿಲಾಸ ರಸ್ತೆಯಲ್ಲಿ ಮರವೊಂದರ ರಂಬೆ ಒಣಗಿ ಬೀಳುವಂತಿರುವುದನ್ನು ಕಾಣಬಹುದು.

ಮೈಸೂರು,ಫೆ.19(ಪಿಎಂ)– ಆ ಮರದ ಕಾಂಡಕ್ಕೆ ಗೆದ್ದಲು ಹತ್ತಿದ್ದು, ಬುಡದ ತುಸು ಮೇಲ್ಭಾಗದಲ್ಲೇ ಕಾಂಡದ ಬಹುತೇಕ ಭಾಗವನ್ನು ಗೆದ್ದಲು ತಿಂದು ಹಾಕಿದೆ. ಅದಕ್ಕೀಗ ನೆಲಕ್ಕುರುಳಿ ಪ್ರಾಣ ತ್ಯಾಗ ಮಾಡುವುದೊಂದೇ ದಾರಿ. ಆದರೂ ತನ್ನಿಂದ ಯಾವುದೇ ಜೀವ ಹಾನಿ ಆಗುವುದು ಬೇಡವೆಂಬಂತೆ ಕಡುಕಷ್ಟದಲ್ಲೂ ಜೀವ ಕೈಯ್ಯಲ್ಲಿಡಿದು ಹಾಗೇ ನಿಂತಿದೆ.

ತನ್ನ ಪ್ರಾಣ ತ್ಯಾಗದಿಂದ ಯಾವುದೇ ಜೀವ ಹಾನಿಯಾಗುವುದು ಬೇಡವೆಂಬ ಭಾವ ಅದಕ್ಕಿರಬೇಕು. ಆದರೆ ಅದರ ಸ್ಥಿತಿಗತಿ ಅರಿತುಕೊಳ್ಳುವಲ್ಲಿ ಸ್ಥಳೀಯ ಆಡಳಿತ ಗಮನ ನೀಡದೇ ಇರುವುದು ದುರಂತಕ್ಕೆ ಎಡೆಯಾಗುವ ಆತಂಕಕ್ಕೆ ಕಾರಣವಾಗಿದೆ. ಹೌದು, ಮೈಸೂರಿನ ನಂಜನಗೂಡು–ಊಟಿ ರಸ್ತೆಯ ಬದಿಯಲ್ಲಿ ಗುಲ್‌ಮೊಹರ್ ಮರವೊಂದು ಇಂತಹ ದುಸ್ಥಿತಿಯಲ್ಲಿದೆ.

ಸದರಿ ಮರವು ಸಣ್ಣ ಮಳೆ–ಗಾಳಿಗೂ ನೆಲಕ್ಕುರುಳುವ ಅಪಾಯ ಸ್ಥಿತಿಯಲ್ಲಿದ್ದು, ಒಂದು ವೇಳೆ ಬಿದ್ದರೆ ಸಾರ್ವಜನಿಕರ ಪ್ರಾಣ ಹಾನಿಯಾಗುವ ಆತಂಕ ಎದುರಾಗಿದೆ. ಮರದ ಕೆಳಗೆ ಇರುವ ಮತ್ತೊಂದು ರಸ್ತೆಯಲ್ಲಿ (ನೀಲಕಂಠಸ್ವಾಮಿ ಮಠದ ರಸ್ತೆ) ವಾಹನ ಸಂಚಾರ ಮತ್ತು ಪಾದಚಾರಿಗಳ ಓಡಾಟವೂ ಹೆಚ್ಚಿದ್ದು, ಅಷ್ಟು ಮಾತ್ರವಲ್ಲದೆ, ನೀಲಕಂಠಸ್ವಾಮಿ ಮಠದ ರಸ್ತೆಯ ಬದಿಯಲ್ಲಿ (ಫುಟ್‌ಪಾತ್‌ನಲ್ಲಿ, ಸದರಿ ಮರವಿರುವ ಕೆಳಭಾಗ) ತರಕಾರಿ ಮಾರಾಟಗಾರರು ಬೆಳಗ್ಗಿನಿಂದ ರಾತ್ರಿಯವರೆಗೂ ಇದ್ದೇ ಇರುತ್ತಾರೆ. ವಿವಿಧ ರೀತಿಯ ತರಕಾರಿ ಖರೀದಿಗೆ ನಾಗರಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ.

ಈ ಮರವನ್ನೊಮ್ಮೆ ಅವಲೋಕಿಸಿದರೆ ಅದು ಕುಸಿದು ತಗ್ಗು ಪ್ರದೇಶವಾದ ನೀಲಕಂಠಸ್ವಾಮಿ ಮಠದ ರಸ್ತೆಗೆ ಉರುಳುತ್ತದೆ ಎಂದು ಅಂದಾಜಿಸಬಹುದಾಗಿದೆ. ಒಂದು ವೇಳೆ ಇದಕ್ಕೆ ಬದಲಾಗಿ ನಂಜನಗೂಡು ರಸ್ತೆಗೆ ಮರ ಬಿದ್ದರೂ ಬಾರೀ ಅನಾಹುತ ತಪ್ಪಿದ್ದಲ್ಲ. ಇಲ್ಲಿಯೂ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತವೆ. ಊಟಿ, ನಂಜನಗೂಡು, ಗುಂಡ್ಲುಪೇಟೆ ಮೊದಲಾದ ಕಡೆಯಿಂದ ನಗರಕ್ಕೆ ಹಾಗೂ ನಗರದಿಂದ ಆ ಭಾಗಗಳಿಗೆ ಹಲವು ಬಸ್‌ಗಳು, ಕಾರುಗಳಲ್ಲಿ ಮಾತ್ರವಲ್ಲದೆ, ದ್ವಿಚಕ್ರ ವಾಹನಗಳಲ್ಲೂ ಜನ ಸಂಚಾರ ಇದ್ದೇ ಇದೆ.

ಇಂತಹ ಸನ್ನಿವೇಶದಲ್ಲಿ ಸದರಿ ಮರವೇನಾದರೂ ನೆಲಕ್ಕುರುಳಿದರೆ, ಅನ್ಯಾಯವಾಗಿ ಅಮಾಯಕರು ಬಲಿಯಾಗುವ ಆತಂಕ ಎದುರಾಗಿದೆ. ಹೀಗಾಗಿ ತುರ್ತಾಗಿ ಮೈಸೂರು ಮಹಾನಗರ ಪಾಲಿಕೆ ಇತ್ತ ಗಮನಹರಿಸಿ ನಾಗರಿಕರ ಪ್ರಾಣ ರಕ್ಷಣೆಗೆ ಮುಂದಾಗಬೇಕಿದೆ. ಅದೃಷ್ಟವಶಾತ್ ಈವರೆಗೆ ಯಾವುದೇ ಅನಾಹುತ ಸಂಭವಿಸಿಲ್ಲ. ಆದರೆ ಈಗಲಾದರೂ ಎಚ್ಚೆತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿದ್ದರೆ, ಬಾರೀ ಅವಘಡಕ್ಕೆ ಎಡೆಮಾಡಿದಂತಾಗಲಿದೆ ಎನ್ನುತ್ತಾರೆ ಸ್ಥಳೀಯರು.

ಇದೇ ಮರದ ಸಮೀಪದಲ್ಲಿ ಮತ್ತೊಂದು ಮರಕ್ಕೂ ಗೆದ್ದಲು ಹತ್ತಿದ್ದು, ಆದರೆ ಅದನ್ನು ನೋಡಿದರೆ ನೆಲಕ್ಕುರುಳುವ ಅಪಾಯ ಇಲ್ಲವೆನ್ನಬಹುದು. ಆದರೂ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದು ಸೂಕ್ತ ಎನ್ನುವುದು ಸಾರ್ವಜನಿಕರ ಅಭಿಪ್ರಾಯ. ಮೈಸೂರಿನ ಸೀತಾವಿಲಾಸ ರಸ್ತೆಯಲ್ಲಿ ಶ್ರೀ ಕೆ.ಎನ್. ಶಿವಲಿಂಗಯ್ಯ ವೃತ್ತದ ಸಮೀಪ ರಸ್ತೆಬದಿಯಲ್ಲಿರುವ ಮರವೊಂದರ ಮೇಲ್ಭಾಗದಲ್ಲಿ ಅದರ ರಂಬೆ ಒಣಗಿದ್ದು, ಅದು ನೆಲಕ್ಕೆ ಬೀಳುವ ಸನ್ನಿವೇಶವಿದೆ. ಹೀಗಾಗಿ ಈ ರಂಬೆ ತೆರವುಗೊಳಿಸಿ ಸಂಭವಿಸಬಹುದಾದ ಅನಾಹುತ ತಡೆಯಬೇಕೆಂಬುದು ನಾಗರಿಕರ ಒತ್ತಾಯವಾಗಿದೆ.

ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಬಳಿ ಮರದ ಒಣ ರಂಬೆ ಮುರಿದು ಬಿದ್ದು ಹಿರಿಯ ನಾಗರಿಕರೊಬ್ಬರು ಬಲಿಯಾದ ಘಟನೆ ಇನ್ನೂ ಹಸಿರಾಗಿಯೇ ಇದೆ. ಈ ಘಟನೆಯಿಂದ ನಾಗರಿಕರು ರಸ್ತೆಬದಿ ಮರಗಳು ಎಷ್ಟು ಸುರಕ್ಷಿತ ಎಂಬ ಆತಂಕದಲ್ಲಿ ಮನೆಯಿಂದ ಹೊರಬರುವ ಸನ್ನಿವೇಶವೂ ನಿರ್ಮಾಣವಾಗಿದೆ.

ಮಹಾನಗರ ಪಾಲಿಕೆಯು ಈಗಾಗಲೇ ಒಣ ಮರ ಮತ್ತು ಮರದ ಒಣ ರೆಂಬೆಗಳ ತೆರವು ಕಾರ್ಯಾಚರಣೆ ಕೈಗೆತ್ತಿಕೊಂಡಿದೆ. ಆದರೆ ಅದನ್ನು ನೆಪಮಾತ್ರಕ್ಕೆ ಮಾಡದೇ ಪರಿಣಾಮಕಾರಿಯಾಗಿ ನಡೆಸಬೇಕೆಂಬ ಒತ್ತಾಯ ನಾಗರಿಕರಿಂದ ಕೇಳಿಬಂದಿದೆ. ಅಪಾಯಕ್ಕೆ ಎಡೆಮಾಡುವಂತಹ ಮರಗಳನ್ನು ಗುರುತಿಸಿ ಸೂಕ್ತ ಕ್ರಮ ವಹಿಸುವ ಮೂಲಕ ಜನರ ಪ್ರಾಣ ಉಳಿಸಬೇಕೆಂಬ ಆಗ್ರಹವೂ ವ್ಯಕ್ತವಾಗುತ್ತಿದೆ.